
ಸಂಪುಟ 24 ಸಂಚಿಕೆ 19-20
ಮೇ 19, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ಬಿಟಿ ಹತ್ತಿ : ಈ ತರಾತುರಿ ಯಾಕೆ?



ವಿದ್ಯುತ್ ದರ ಹೆಚ್ಚಳದ ಮತ್ತೊಂದು ಶಾಕ್!

ಬಿಜೆಪಿ ನಾಟಕ ಬಯಲು





ಸಂಘ ಪರಿವಾರದ ಬೇಟೆ: ಈಗ ಮಠಾಧೀಶರ ಸರದಿ



ಗುಜರಾತ್ : ಉಳಿದ ಮಾರ್ಗವೊಂದೇ ಮೋದಿ ಸರ್ಕಾರದ ವಜಾ ರಾಷ್ಟ್ರಪತಿ ಆಳ್ವಿಕೆ


ಎಚ್ಚರ ತೋರಿದ ಫ್ರೆಂಚ್ ಮತದಾರರು



ಸಂಯುಕ್ತ ರಂಗ ಅಧಿಕಾರಕ್ಕೆ

ಸಮ್ಮಿಶ್ರ ಸರಕಾರವೊಂದನ್ನು ಮುನ್ನಡೆಸಲು ನಾನೇ ಸೂಕ್ತ ವ್ಯಕ್ತಿ ಎಂದು ಅವರು ಭಾವಿಸಿದ್ದರು. ನನಗೆ ಇದರಲ್ಲಿ ಅನುಭವವಿತ್ತು. ಆದರೆ ಸಿಪಿಐ(ಎಂ)ನಲ್ಲಿರುವ ನಾವು ಬಂಡವಾಳಶಾಹಿ ಪಕ್ಷಗಳ ರೀತಿಯಲ್ಲಿ ವರ್ತಿಸುವುದಿಲ್ಲ. ನೀತಿ ಮತ್ತು ಪಕ್ಷದ ನಿರ್ದೇಶನಗಳು ಯಾವತ್ತೂ ವ್ಯಕ್ತಿಗಿಂತ ಪರಮೋಚ್ಚ ಆದರೆ ಜನತಾದಳ, ಸಮಾಜವಾದಿ ಪಕ್ಷ, ತೆಲುಗು ದೇಶಂ ಮತ್ತು ಎಜಿಪಿ ಹಾಗೂ ವಿ.ಪಿ. ಸಿಂಗ್, ಮುಲಾಯಂ ಸಿಂಗ್ ರಂಥ ನಾಯಕರು, ಒಟ್ಟಾರೆಯಾಗಿ ಬಹುತೇಕ ಎಲ್ಲರೂ ಒತ್ತಡವನ್ನು ಕೈಬಿಡಲಿಲ್ಲ. ಪರಿಸ್ಥಿತಿ ಎಲ್ಲಿವರೆಗೆ ಹೋಯಿತೆಂದರೆ ಈ ವಿಷಯವನ್ನು ಪಕ್ಷದ ವೇದಿಕೆಯಲ್ಲಿ ಚರ್ಚಿಸುವುದು ಅಗತ್ಯವೆನಿಸಿತು. ನಾನು ಪ್ರಧಾನಿಯಾಗುವುದಕ್ಕಿಂತ ಸರಕಾರದಲ್ಲಿ ನಮ್ಮ ಪಕ್ಷದ ಪಾಲ್ಗೊಳ್ಳುವಿಕೆಯೇ ಹೆಚ್ಚಿನ ಮಹತ್ವದ ಸಂಗತಿಯಾಗಿತ್ತು.

ಮೇ 13 ರಂದು ದೆಹಲಿಯಲ್ಲಿ ಪಕ್ಷದ ಕೇಂದ್ರ ಸಮಿತಿ ಸಭೆ ನಡೆಯಿತ್ತು. ಸಭೆಯಲ್ಲಿ ವಿಷಯವನ್ನು ಮಂಡಿಸಲಾಯಿತು. ಕೂಲಂಕುಷ ಚರ್ಚೆ ನಡೆಯಿತು. ಸಹಜವಾಗಿಯೇ ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಸುರ್ಜಿತ್ ಮತ್ತು ನಾನು ಸರಕಾರದಲ್ಲಿ ಪಕ್ಷ ಭಾಗವಹಿಸುವುದರ ಪರವಾಗಿದ್ದವು. ಆದರೆ ನಾವು ಅಲ್ಪ ಮತೀಯರಾದೆವು. ಸರಕಾರಕ್ಕೆ ಹೊರಗಿನಿಂದ ಬೆಂಬಲ ನೀಡಬೇಕೆನ್ನುವುದೇ ಬಹುಮತದ ಅಭಿಪ್ರಾಯವಾಗಿತ್ತು. ಸಭೆಯ ನಂತರ ಇದನ್ನು ಅಧಿಕೃತವಾಗಿ ಪ್ರಕಟಿಸಲಾಯಿತು.


ಇಂದ್ರಜಿತ್ ಗುಪ್ತಾ

ಆದರೆ ರಂಗದ ನಾಯಕತ್ವ ತನ್ನ ಪಟ್ಟನ್ನು ಬಿಡಲಿಲ್ಲ. ಕೇಂದ್ರ ಸಮಿತಿಯ ನಿರ್ಣಯವನ್ನು ಒಪ್ಪಲು ಅವರು ತಯಾರಿರಲಿಲ್ಲ. ನಮ್ಮ ಮೇಲೆ ಒತ್ತಡ ಹೇರುವುದನ್ನು ಮುಂದುವರಿಸಿದರು. ಪಕ್ಷ ತನ್ನ ನಿರ್ಧಾರವನ್ನು ಮತ್ತೂ ಪುನರ್ ಪರಿಶೀಲಿಸಬೇಕೆಂದು ರಂಗ ಬಯಸಿತು. ಅವರು ನಮ್ಮ ಮಾತನ್ನು ಕೇಳುವ ಸ್ಥಿತಿಯಲ್ಲೇ ಇರಲಿಲ್ಲ.

ಮತ್ತೆ ಪಕ್ಷದ ನಾಯಕತ್ವಕ್ಕೆ ವಿವರಿಸಲು ನಾವು ಮರಳಿದೆವು. ಆ ವೇಳೆಗೆ ಕೇಂದ್ರ ಸಮಿತಿ ಮುಖಂಡರು ತಮ್ಮ ತಮ್ಮ ರಾಜ್ಯಗಳಿಗೆ ಮರಳಲು ಸಿದ್ಧರಾಗಿದ್ದರು, ಸ್ವಲ್ಪ ಸಮಯ ಉಳಿಯಲು ಅವರಿಗೆ ತಿಳಿಸಲಾಯಿತು ಕೆಲವರು ವಾಪಸಾದರು.

ಮೇ 14ರ ಬೆಳಿಗ್ಗೆ ಕೇಂದ್ರ ಸಮಿತಿ ಮೂರು ಗಂಟೆಕಾಲ ಸಭೆ ಸೇರಿತು. ಆದರೆ ಅಂತಿಮ ನಿರ್ಧಾರ ಬದಲಾಗಲಿಲ್ಲ.

ನಾನು ನನ್ನ ಬಗ್ಗೆ ಮಾತ್ರ ಹೇಳಬಲ್ಲೆ. ನಾನೇನೂ ಯುವಕನಾಗುತ್ತಿಲ್ಲ. ಪ್ರಧಾನಮಂತ್ರಿಯ ಹೊರೆ ಹಾಗೂ ಜವಾಬ್ದಾರಿಗಳು ತುಂಬಾ ಹೊಣೆಗಾರಿಕೆಯುಳ್ಳದ್ದು. ಅದು ಅಲ್ಲದೆ ಕಾಂಗ್ರೆಸ್‌ನಂಥ ಒಂದು ಪಕ್ಷದ ಬೆಂಬಲ ಪಡೆದು ಒಂದು ಸಮ್ಮಿಶ್ರ ಸರಕಾರವನ್ನು ನಡೆಸುವುದು ಹೂವಿನ ಹಾದಿಯಲ್ಲ ಎಂಬುದು ಕೂಡ ವಾಸ್ತವ ಸಂಗತಿ. ನಿಜ ಹೇಳಬೇಕೆಂದರೆ ನಾನು ನೆಮ್ಮದಿಯ ನಿಟ್ಟುಸಿರು ಬಿಟ್ಟೆ.

ಮೇ 14ರ ಸಭೆಯ ಕೊನೆಯಲ್ಲಿ ಕೇಂದ್ರ ಸಮಿತಿ ಒಂದು ಹೇಳಿಕೆಯನ್ನು ಹೊರಡಿಸಿತು. ಅದು ತುಂಬಾ ಮಹತ್ವದ್ದಾಗಿರುವುದರಿಂದ ಅದರ ಪೂರ್ಣ ಪಾಠವನ್ನು ಇಲ್ಲಿ ನೀಡಿರುವೆ.


ದೇವೇಗೌಡ

"ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಹಾಗೂ ಬಿಜೆಪಿಯೇತರ ಸರಕಾರವೊಂದನ್ನು ಪ್ರತಿಷ್ಠಾಪಿಸಲು ಪಾಲಿಟ್ ಬ್ಯೂರೋ ನಡೆಸುತ್ತಿರುವ ಪ್ರಯತ್ನಗಳನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಒಪ್ಪುತ್ತದೆ.

ಕಾಂಗ್ರೆಸೇತರ ಜಾತ್ಯತೀತ ಸರಕಾರವೊಂದರ ರಚನೆ ಕೇಂದ್ರ ಸಮಿತಿಯ ಬಯಕೆ. ಎಲ್ಲ ಜಾತ್ಯಾತೀತ ಹಾಗೂ ಜನತಾಂತ್ರಿಕ ಶಕ್ತಿಗಳನ್ನು ಕ್ರೋಢೀಕರಿಸಿ ಇಂಥ ಸರಕಾರ ವೊಂದನ್ನು ರಚಿಸಲು ಸಿಪಿಐ(ಎಂ) ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಆ ರೀತಿ ಮಾಡುವಲ್ಲಿ ಸಿಪಿಐ(ಎಂ) ಅಂಥ ಸರಕಾರಕ್ಕೆ ಹೊರಗಿನಿಂದ ಪೂರ್ಣ ಬೆಂಬಲ ನೀಡುತ್ತದೆ.

"ತನ್ನ ಮೊದಲಿನ ನಿರ್ಧಾರದ ಪುನರ್ ಪರಿಶೀಲನೆಗೆ ಎಡ, ಜನತಾಂತ್ರಿಕ ಮತ್ತು ಜಾತ್ಯಾತೀತ ಮಿತ್ರಪಕ್ಷಗಳ ಮನವಿಯ ಪರಿಶೀಲನೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಇಂದು (ಮೇ 14) ಮತ್ತೆ ಸಭೆ ಸೇರಿತ್ತು.

"ಮನವಿಯ ಹಿಂದಿನ ಉದ್ದೇಶವನ್ನು ಮೆಚ್ಚಿಕೊಂಡ ಕೇಂದ್ರ ಸಮಿತಿ ಅದನ್ನು ಗಂಭೀರವಾಗಿ ಪರಿಶೀಲಿಸಿತು. ಕೇಂದ್ರ ಸಮಿತಿ ತನ್ನ ಹಿಂದಿನ ನಿರ್ಧಾರವನ್ನು ಉಳಿಸಿಕೊಳ್ಳುತ್ತಲೇ, ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲು ಸಿಪಿಐ(ಎಂ) ಪೂರ್ಣ ಕೊಡುಗೆ ನೀಡುತ್ತದೆ ಎಂದು ಸಂಬಂಧಪಟ್ಟ ಎಲ್ಲಾ ಪಕ್ಷಗಳು ಮತ್ತು ಜನತೆಗೆ ಆಶ್ವಾಸನೆ ಕೊಡುತ್ತದೆ".

ಅದೇ ದಿನ ಸಂಜೆ ನಾನು ಮತ್ತು ಸುರ್ಜಿತ್ ರಂಗದ ನಾಯಕರನ್ನು ಭೇಟಿ ಮಾಡಿದೆವು. ಕೇಂದ್ರ ಸಮಿತಿಯ ನಿರ್ಧಾರವನ್ನು ಅವರಿಗೆ ತಿಳಿಸಿದೆವು. ಈಗ ನಮ್ಮ ನಿರ್ಧಾರವನ್ನು ಒಪ್ಪದೆ ಅವರಿಗೆ ಬೇರೆ ದಾರಿಯಿರಲಿಲ್ಲ. ನಾಯಕತ್ವದ ಪ್ರಶ್ನೆ ಬಗ್ಗೆ ಹೊಸ ಚಿಂತನೆ ಆರಂಭವಾಯಿತು. ಅದೇ ದಿನ, ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡರನ್ನು ಸಂಯುಕ್ತ ರಂಗ ಸಂಸದೀಯ ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು.

ಈ ದೊಡ್ಡ ದೇಶವನ್ನು ಮುನ್ನಡೆಸುವ ಸಾಮರ್ಥ್ಯವುಳ್ಳ ಪ್ರಧಾನಿಯೊಬ್ಬರನ್ನು ಹುಡುಕುವುದು ಯಾವತ್ತೂ ಕಷ್ಟದ ಕೆಲಸವಲ್ಲ ಎಂಬುದು ನನ್ನ ನಂಬಿಕೆ. ಸೂಕ್ತವ್ಯಕ್ತಿಯನ್ನು ಹುಡುಕುವುದು ಕಷ್ಟದ ಕೆಲಸವಲ್ಲ. ಆ ರೀತಿಯಾಗಿ ದೇವೇಗೌಡರನ್ನು ಆರಿಸಲಾಯಿತು.

ನಾವು ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾರನ್ನು ಭೇಟಿಯಾದೆವು. ಸರಕಾರ ರಚಿಸಲು ದೇವೇಗೌಡರನ್ನು ಆಹ್ವಾನಿಸುವಂತೆ ಲಿಖಿತ ಮನವಿ ಮಾಡಿದೆವು. ಕಾಂಗ್ರೆಸ್‌ನ ಲಿಖಿತ ಬೆಂಬಲ ಬೇಕೆಂದು ರಾಷ್ಟ್ರಪತಿ ಕೇಳಿದರು. ಕೆಲವು ಅವ್ಯಕ್ತ ಕಾರಣಗಳಿಗಾಗಿ ಕಾಂಗ್ರೆಸ್ ತನ್ನ ಬೆಂಬಲವನ್ನು ಲಿಖಿತ ರೂಪದಲ್ಲಿ ತಿಳಿಸಲಿಲ್ಲ. ರಾಷ್ಟ್ರಪತಿ ನಿಗದಿಪಡಿಸಿದ ಮೇ 15 ರ ಗಡುವು ಮುಗಿಯಿತು. ರಾಷ್ಟ್ರಪತಿ ಬಿಜೆಪಿಯನ್ನು ಆಹ್ವಾನಿಸಿದರು. ಮರುದಿನ ವಾಜಪೇಯಿ ಸರ್ಕಾರ ರಚಿಸಿದರು.

ರಾಷ್ಟ್ರಪತಿ ಆಗ ಬಿಜೆಪಿಯನ್ನು ಯಾಕೆ ಆಹ್ವಾನಿಸಿದರು ಎಂಬುದು ನನಗೆ ಇನ್ನೂ ಅರ್ಥವಾಗಿಲ್ಲ. ಆ ಪಕ್ಷಕ್ಕೆ ಬಹುಮತ ಇಲ್ಲ ಎಂಬದು ಎಲ್ಲರಿಗೂ ಮೇಲ್ನೋಟಕ್ಕೇ ಕಾಣುವ ವಾಸ್ತವವಾಗಿತ್ತು. ಸಂಯುಕ್ತ ರಂಗವೇ ರಾಷ್ಟ್ರಪತಿಯವರ ಆಯ್ಕೆ ಆಗಬೇಕಿತ್ತು. ಕಾಂಗ್ರೆಸ್ ನಮಗೆ ಬೆಂಬಲ ಘೋಷಿಸಿದ ಮೇಲೆ ಅವರ ಮನಸ್ಸಿನಲ್ಲಿ ಈ ಬಗ್ಗೆ ಅನುಮಾನ ಇರಬಾರದಿತ್ತು. ಕೋಮುವಾದಿ ಶಕ್ತಿಗಳು ಸರಕಾರ ರಚಿಸಲು ಅವಕಾಶ ನೀಡಬಾರದಿತ್ತು. ಅಧಿಕಾರದಲ್ಲಿದ್ದ ಆ 13 ದಿನಗಳಲ್ಲಿ ಬಿಜೆಪಿ ಸರ್ಕಾರ ತನ್ನ ಉದ್ದೇಶವೇನೆಂಬುದನ್ನು ಸ್ಪಷ್ಟಪಡಿಸಿತ್ತು. ಯಾವುದೇ ನೀತಿಗಳಿಲ್ಲದ ಸರಕಾರ ಅದಾಗಿತ್ತು. ಮೇ 27-28 ರಂದು ಲೋಕಸಭೆಯಲ್ಲಿ ನಡೆದ ವಿಶ್ವಾಸಗೊತ್ತುವಳಿ ಮೇಲಿನ ಚರ್ಚೆಯ ವೇಳೆ ಸರಕಾರ ಮಹಾರಾಷ್ಟ್ರದಲ್ಲಿನ ವಿವಾದಾಸ್ಪದ ಎನ್ರಾನ್ ಯೋಜನೆಗೆ ಹಸಿರು ನಿಶಾನೆ ತೋರಿತು. ಏನಿದ್ದರೂ ಬಿಜೆಪಿ ವಿಶ್ವಾಸಗೊತ್ತುವಳಿ ಮೇಲೆ ಮತದಾನ ನಡೆಯುವವರೆಗೂ ಕಾಯಲಿಲ್ಲ. ಲೋಕಸಭೆಯಲ್ಲಿ ಉತ್ತರ ನೀಡುವ ವೇಳೆ ವಾಜಪೇಯಿ ಪ್ರಧಾನಿಯಾಗಿ ತಮ್ಮ ರಾಜೀನಾಮೆಯನ್ನು ಪ್ರಕಟಿಸಿದರು.

ಆ ನಂತರ ದೇವೇಗೌಡರನ್ನು ಆಹ್ವಾನಿಸಲಾಯಿತು. ಜೂನ್ ಒಂದರಂದು ರಂಗದ ಸಚಿವರು ಅಧಿಕಾರದ ಪ್ರಮಾಣವಚನ ಸ್ವೀಕರಿಸಿದರು. ನಾಲ್ಕು ಎಡಪಕ್ಷಗಳ ಪೈಕಿ ಸಿಪಿಐ ಸರಕಾರದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿತು. ಪ್ರಧಾನಿ ದೇವೇಗೌಡ ಜೂನ್ ಐದರಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಬಿಡುಗಡೆ ಮಾಡಿದರು. ಅದರ ಅನುಷ್ಠಾನ ಪ್ರಕ್ರಿಯೆಯಲ್ಲಿ ನಮಗೆ ಸಕ್ರಿಯ ಪಾತ್ರವಿದ್ದರೂ ಪ್ರತಿಯೊಂದು ವಿಷಯದಲ್ಲಿ ನಾವು ಸಂಘರ್ಷಕ್ಕೆ ಇಳಿದೆವೆಂಬುದು ಅರ್ಥವಲ್ಲ. ಏನಿದ್ದರೂ ಅದು ಸಾಧ್ಯವೂ ಅಲ್ಲ. 13 ಪಕ್ಷಗಳ ರಾಜಕೀಯ ಪರಿಕಲ್ಪನೆಗಳಲ್ಲಿ ಅಭಿಪ್ರಾಯಗಳು ಇದ್ದೇ ಇರುತ್ತವೆ. ಆದರೆ ನಾವು ಯಶಸ್ವಿಯಾಗಿ ಸಿಎಂಪಿ ರೂಪಿಸಿದ್ದೇ ಒಂದು ದೊಡ್ಡ ಸಾಧನೆ.

ಐದನೇ ಬಾರಿಗೆ ಎಡರಂಗ

ಸರಕಾರ ರಚಿಸಲು ವಾಜಪೇಯಿಗೆ ಆಹ್ವಾನ ನೀಡಿದ ನಂತರ ನಾನು ಕಲ್ಕತ್ತೆಗೆ ಮರಳಿದೆ.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 96

20 ರಂದು ಐದನೇ ಬಾರಿಗೆ ಎಡರಂಗ ಅಧಿಕಾರ ಸ್ವೀಕರಿಸಿತು.

ಕೇರಳದ ಫಲಿತಾಂಶವೂ ಹೊರಬಿದ್ದಿತು. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅನ್ನು ಜನರು ತಿರಸ್ಕರಿಸಿದ್ದರು. ಸಿಪಿಐ(ಎಂ) ನಾಯಕತ್ವದ ಎಲ್‌ಡಿಎಫ್ ಜಯಭೇರಿ ಬಾರಿಸಿತು. ಬಂಗಾಳ, ತ್ರಿಪುರಾದ ನಂತರ ಕೇರಳದಲ್ಲೂ ನಾವು ಸರಕಾರ ರಚಿಸಿದೆವು. ಅಸ್ಸಾಂನಲ್ಲಿ ಕೂಡ ಕಾಂಗ್ರೆಸ್ ಧೂಳೀಪಟವಾಯಿತು. ಪ್ರಫುಲ್ಲ ಕುಮಾರ್ ಮಹಂತ ನೇತೃತ್ವದ ಎಜಿಪಿ ಅಧಿಕಾರಕ್ಕೆ ಬಂದಿತು. ಸಂಯುಕ್ತ ರಂಗ ರಚನೆಯಲ್ಲಿ ಮಹಂತ ಒಂದು ಮುಖ್ಯ ಪಾತ್ರ ನಿರ್ವಹಿಸಿದ್ದರು. ರಂಗದ ಇನ್ನೊಂದು ಪಕ್ಷ ಡಿಎಂಕೆ ತಮಿಳುನಾಡಿನಲ್ಲಿ ಎಐಎಡಿಎಂಕೆಯನ್ನು ಸೋಲಿಸಿತು. ಕರುಣಾನಿಧಿ ಮುಖ್ಯಮಂತ್ರಿಯಾದರು. ಮಾರ್ಚ್ 31 ರಂದು ಪಕ್ಷ ತೊರೆದ ಜಿ.ಕೆ.ಮೂಪನಾರ್ ನೇತೃತ್ವದ ತಮಿಳು ಮಾನಿಲ ಕಾಂಗ್ರೆಸ್(ಟಿಎಂಸಿ) ಜತೆ ಡಿಎಂಕೆ ರಂಗವೊಂದನ್ನು ರಚಿಸಿಕೊಂಡಿತು. ಚಿದಂಬರಂ ಮತ್ತು ಅರುಣಾಚಲಂ ಕೂಡ ರಾಜಿನಾಮೆ ನೀಡಿದ ನಂತರ ಟಿಎಂಸಿ ಸೇರಿದರು.

(ಮುಂದುವರಿಯುವುದು)

ಗುಜರಾತ್‌ನ ನೊಂದ ಜನತೆಗೆ ಔಷಧಿ ಹಣ ಸಂಗ್ರಹಿಸಿ..

ಗುಜರಾತ್‌ನ ಅಹ್ಮದಾಬಾದ್ ಮತ್ತು ಸುತ್ತ ಮುತ್ತಲಿನ ಪ್ರದೇಶದಲ್ಲಿ ಕೋಮುವಾದಿಗಳ ಅಟ್ಟಹಾಸದಿಂದ ದೌರ್ಜನ್ಯಕ್ಕೊಳಗಾಗಿ, ಬಂಧುಗಳನ್ನು, ಆಸ್ತಿ, ಪಾಸ್ತಿಗಳನ್ನು ಕಳೆದುಕೊಂಡಿರುವ ಲಕ್ಷಾಂತರ ಜನರು ನೂರಾರು ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯಪಡೆದಿದ್ದಾರೆ. ಈ ಶಿಬಿರಗಳು ರಾಜ್ಯ ಸರ್ಕಾರದಿಂದ ಸಂಪೂರ್ಣ ನಿರ್ಲಕ್ಷಕ್ಕೊಳಪಟ್ಟ ಯಾತನಾ ಶಿಬಿರಗಳಾಗಿವೆ. ಕನಿಷ್ಠ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಅಲ್ಲಿನ ಬಿಜೆಪಿ ಸರ್ಕಾರ ನಿರಾಕರಿಸುತ್ತಿದೆ.

ಈ ನಡುವೆ ಹಲವಾರು ಮಾನವೀಯ, ಜನಪರ ಕಾಳಜಿಯುಳ್ಳ ಸಂಘಟನೆಗಳು, ರಾಜಕೀಯ ಪಕ್ಷಗಳು, ನೊಂದ ಜನತೆಗೆ ಸಹಾಯ ಹಸ್ತ ಚಾಚಿವೆ. ಬಲಿಯಾಗಿ ಬದುಕುಳಿದಿರುವ ಜನತೆಗೆ ಅತೀ ಅಗತ್ಯವಿರುವ ಔಷಧಿಗಳನ್ನು ಸಂಗ್ರಹಿಸಲು, ಎಲ್ಲಾ ಮಾನವೀಯ ಜನರಲ್ಲಿ ಸಂಘ ಸಂಸ್ಥೆಗಳಲ್ಲಿ ಮನವಿ ಮಾಡಿವೆ. ರಾಜ್ಯದಲ್ಲಿಯೂ ನಮ್ಮ ಸಾಮೂಹಿಕ ಸಂಘಟನೆಗಳು, ಈ ದಿಶೆ ಎಲ್ಲಾ ಈಗಾಗಲೇ ಕೆಲಸಕ್ಕಿಳಿದು ಹಣ, ಔಷಧಿ ಸಂಗ್ರಹಿಸುತ್ತಿವೆ.

ಸಂಗ್ರಹಿಸಲಾದ ಹಣ (ಡಿ.ಡಿ. ಮಾಡಿಸಿ) ಔಷಧಿಗಳನ್ನು ಈ ಕೆಳಗಿನ ವಿಳಾಸಕ್ಕೆ ನೇರವಾಗಿ ಕಳಿಸುವುದು.

ಅರುಣ್ ಮಹ್ತಾ
ಕಾರ್ಯದರ್ಶಿ, ಸಿ.ಪಿ.ಐ(ಎಂ)
ರಾಜ್ಯಸಮಿತಿ ಕಛೇರಿ
ಪ್ರಾರ್ಥನಾ ಸಮಾಜ, ರಾಯ್ ಪಾಡ್,

ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಯಶಸ್ವಿಗೊಳಿಸಲು ಮುಂದಾಗಿ

ಸಿಪಿಐ(ಎಂ)ನ ಕೇಂದ್ರ ಸಮಿತಿ ಸಭೆ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಈ ಸಂದರ್ಭದಲ್ಲಿ ಹಲವು ವಿಚಾರಸಂಕಿರಣ, ಚಿಂತನ-ಮಂಥನಗಳನ್ನು ಯೋಜಿಸಲಾಗುತ್ತಿದೆ. ಮೇಲಾಗಿ ಮೇ 26 ರಂದು ಕೋಮು ಸೌಹಾರ್ದತೆ-ಜನಪರ ಪರ್ಯಾಯ ಆರ್ಥಿಕ ಧೋರಣೆಗಳಿಗಾಗಿ ಭಾರಿ ಬಹಿರಂಗಸಭೆ, ಮೆರವಣಿಗೆ ಜರುಗಲಿದೆ.

ಈ ಸಭೆಯನ್ನು ವ್ಯವಸ್ಥೆಗೊಳಿಸಲು ಸಿಪಿಐ(ಎಂ)ನ ಸದಸ್ಯರೂ, ಹಿತೈಷಿಗಳು ಉದಾರ

ಈ ವಾರ ಕರ್ನಾಟಕ ಒಂದು ನೋಟ



ಎಸ್.ವೈ.ಗುರುಶಾಂತ್

ಮಠಾಧೀಶರನ್ನು ಬೆನ್ನಟ್ಟಿರುವ ಸಂಘ ಪರಿವಾರ

ಗದುಗಿನ ತೋಂಟದಾರ್ಯ ಮಠದ ಸ್ವಾಮೀಜಿಯವರನ್ನು ಗಡಿಪಾರು ಮಾಡಬೇಕೆಂದು 'ಚೆಡ್ಡಿ ಪರಿವಾರ' ಚೀರತೊಡಗಿದೆ. ಸದಾ ಧರ್ಮರಕ್ಷಣೆ ಮತ್ತು ಪರಂಪರೆ, ಸಂಸ್ಕೃತಿಯ ಪರಾಕು ಹಾಕಿಕೊಂಡು ತಿರುಗುತ್ತಿದ್ದ ದೊಣ್ಣೆವೀರರು ಈಗ ಮಠಾಧೀಶರನ್ನೇ 'ಎತ್ತಂಗಡಿ' ಮಾಡಲು ಸಂಚು ಹೂಡಿದ್ದಾರೆ. ಬಜರಂಗದಳದ ಕಟ್ಟಾಳುವೆಂದೂ, ವಿಶ್ವಹಿಂದೂ ಪರಿಷತ್‌ನ ಸಂತನೆಂದೂ ಖ್ಯಾತರಾಗಿರುವ ಪೇಜಾವರ ವಿಶ್ವೇಶ್ವರ ತೀರ್ಥರ ಮೂಲಕ 'ಧರ್ಮಸೂಕ್ಷ್ಮ'ದ ಉಪದೇಶವನ್ನು ಮತ್ತೆಗೆ ಉಸುರಿಸಿ, ತಮ್ಮ ಪಡೆಗೆ 'ವಾನರ'ನಾಗಿ ಸೇರದಿದ್ದರೆ ಏನಾದೀತೆಂಬ ದಬಾವಣೆಯನ್ನು ಸಲಹೆ ರೂಪದಲ್ಲಿರಿಸಿದ್ದಾರೆ. ಆರ್.ಎಸ್.ಎಸ್. ಪರಿವಾರದ ಮತ್ತು ಅದರ ಸುತ್ತ ಜೋತು ಬಿದ್ದಿರುವ ಈ ಧರ್ಮಾಧಿಕಾರಿಗಳ ವ್ಯಾಖ್ಯಾನ ಹೇಗಿದೆಯೆಂದರೆ ಈ ಕೂಟದೊಳಗೆ ಇಲ್ಲದವರು, ಬೈಟಕ್‌ಗಳಲ್ಲಿ ಭಾಗಿಯಾಗದಿರುವವರು ಹಾಗೂ ಗುಜರಾತ್‌ನಂತಹ ಬರ್ಬರ ಹತ್ಯಾಕಾಂಡದ 'ಪೋಗ್ರಾಂ' ಕೊಂಡಾಡದವರು 'ಸ್ವಾಮಿಗಳಲ್ಲ!'. ಅಂತಹವರು ಈ 'ಧರ್ಮಭೂಮಿ'ಯಲ್ಲಿರುವುದನ್ನು ಸಹಿಸಿಕೊಳ್ಳುವುದಾದರೂ ಹೇಗೆ ಸಾಧ್ಯವೆಂದು 'ಯುದ್ಧ' ಸಾರಿದ್ದಾರೆ. 'ವಿಜಯಕರ್ನಾಟಕ'ವೆಂಬ ಪತ್ರಿಕೆಯನ್ನು ತುತ್ತೂರಿಯಾಗಿಸಿಕೊಂಡಿದ್ದಾರೆ.

ಗದುಗಿನ ತೋಂಟದಾರ್ಯ ಮಠಕ್ಕೆ ಒಂದು ವಿಶಿಷ್ಟ ಪರಂಪರೆಯಿದೆ. ಅಲ್ಲಿ ಎಲ್ಲಾ ಜಾತೀಯ, ವಿವಿಧ ಧರ್ಮಗಳಿಗೆ ಸೇರಿದವರಿಗೆ ಮುಕ್ತ ಅವಕಾಶವಿದೆ. ಸಭೆ ಸಮಾರಂಭಗಳಲ್ಲಿ ಭಾಗಿತ್ವ - ಹೊಣೆಗಾರಿಕೆಯನ್ನು ಹಂಚಲಾಗುತ್ತದೆ. ಕೋಮು ಸೌಹಾರ್ದತೆಯನ್ನು ಸಾರುವುದು ಮಾತ್ರವಲ್ಲ ಆಚರಿಸುತ್ತಾ ಬರಲಾಗುತ್ತಿದೆ. ಈ ಕ್ರಮ ಒಂದೆರಡು ವರುಷಗಳಲ್ಲಿ ಬಂದಿದ್ದಲ್ಲ. ಇದಕ್ಕೆ ಹಲವು ದಶಕಗಳ ಇತಿಹಾಸವಿದೆ. ಈ ವೀರಶೈವ ಮಠದ ಸ್ವಾಮಿಯವರ ಈ ಕಾರ್ಯಗಳಿಂದಾಗಿ 'ಕೋಮುಸೌಹಾರ್ದತೆ'ಯ ರಾಷ್ಟ್ರಪ್ರಶಸ್ತಿಯೂ ಅವರಿಗೆ ದೊರಕಿದೆ. ಜನ ಮನ್ನಣೆಯೂ ದೊರಕಿದೆ. ಹನ್ನೊಂದನೇ ಶತಮಾನದ ಶರಣರ, ಬಸವಣ್ಣನವರ ತತ್ವವೇ ತಮಗೆ ದಾರಿದೀಪವೆಂದ ಅವರು ವಿಶ್ವಹಿಂದೂ ಪರಿಷತ್ ಅಥವಾ ಸಂಘ ಪರಿವಾರದೊಂದಿಗೆ ಗುರುತಿಸಿಕೊಳ್ಳಲು ಹಾಗೂ ಅವರಿಗೆ ಮಠವನ್ನು ಉಪಯೋಗಿಸಿಕೊಳ್ಳಲು ಸ್ಪಷ್ಟವಾಗಿ ನಿರಾಕರಿಸಿದ್ದಾರೆ.



ಈದ್ಗಾ ಮೈದಾನದಲ್ಲಿ ಧ್ವಜ ಹಾರಿಸುವುದನ್ನೇ ನೆಪವಾಗಿರಿಸಿಕೊಂಡು ಕಿಚ್ಚು ಹಚ್ಚಿದಾಗ ಅದನ್ನು ಬಹಿರಂಗವಾಗಿ ಖಂಡಿಸಿದವರು ಇವರು. ಆದರೆ ಹುಬ್ಬಳ್ಳಿಯ 'ಮೂಜಗಂ' ರವರು ಸಂಘ ಪರಿವಾರವನ್ನೇ ಬೆಂಬಲಿಸಿದ್ದರು. ಈಗ ಈ ಸಂಘರ್ಷದ ಕಿಡಿ ಹೊತ್ತಿದ್ದಾದರೂ ಹೇಗೆ?

ಎಂದಿನಂತೆ ಮುಂದಿನ ಜಾತ್ರೆಯ ಆಚರಣಾ ಸಮಿತಿ ಅಧ್ಯಕ್ಷರನ್ನು ಈ ವರುಷವೇ ಆರಿಸುವುದು ವಾಡಿಕೆ. ಅದರಂತೆ ಉಮಚಗಿ ಎಂಬುವರ ಆಯ್ಕೆಯಾಗಿದೆ. ಜಾತ್ರಾ ಸಮಿತಿಗೆ ಮುಸ್ಲಿಂ ಆಯ್ಕೆಯಾದುದು ಸಂಘ ಪರಿವಾರಕ್ಕೆ ನುಂಗದ ತುತ್ತಾಯಿತು. ಹಿಂದಿನಿಂದಲೂ ಕುದಿಯುತ್ತಿದ್ದ ಆಕ್ರೋಶವನ್ನು ಈಗ ಹರಿಬಿಡಲಾಗಿದೆ. ಈ ಜಾತ್ರಾಮಹೋತ್ಸವದ ಸಮಾರಂಭದಲ್ಲಿ ಭಾಗ ವಹಿಸಿದ್ದ ಸಂಸತ್ ಸದಸ್ಯ ವಿಜಯ ಸಂಕೇಶ್ವರ್ ಜಾತ್ರಾ ಸಮಿತಿಗೆ ಮುಸ್ಲಿಂ ಆಯ್ಕೆಯಾದುದನ್ನು ವಿರೋಧಿಸಿ ಅನ್ಯ ಧರ್ಮಿಯರಿಗೆ ಮಠದಲ್ಲಿ ಸ್ಥಾನ ಸಿಗುತ್ತಿರುವುದನ್ನು ವಿರೋಧಿಸಿದ್ದಲ್ಲದೇ ಶಾಖೆಗಳಲ್ಲಿ ಹೇಳುವಂತೆ ಧರ್ಮದ ವ್ಯಾಖ್ಯಾನಕ್ಕೆ ಇಳಿದಿದ್ದಾರೆ, ಉದ್ಧಟತನ ಪ್ರದರ್ಶಿಸಿದ್ದಾರೆ. ಈ ಸಲದ ಆಯ್ಕೆ ನಡೆದದ್ದು ಅವರ ಸಹೋದರ ಮೃತ್ಯುಂಜಯ ಸಂಕೇಶ್ವರ್‌ರ ಅಧ್ಯಕ್ಷತೆಯಲ್ಲಿಯೇ. ವಿಜಯ ಸಂಕೇಶ್ವರ್‌ರ ಈ ಮಾತುಗಳಿಗೆ ಪ್ರತಿಕ್ರಿಯಿಸಿದ ಸ್ವಾಮಿಗಳು 'ನೀವೊಬ್ಬ ಸಂಸತ್ ಸದಸ್ಯರು, ಎಲ್ಲರ ಮತಗಳಿಸಿ ಸದಸ್ಯರಾದವರು. ಸಂಸದರಾಗಿರುವ ಸಂಕೇಶ್ವರರು ಆರ್.ಎಸ್.ಎಸ್. ಹುಡುಗರಂತೆ ಸಿಲ್ಲಿಯಾಗಿ ವರ್ತಿಸಬಾರದು. ಲೋಕಸಭೆಯ ಘನತೆಗೆ ತಕ್ಕುದಲ್ಲ' ಎಂದಿದ್ದಾರೆ.



ತನ್ನ ವರ್ತನೆಯನ್ನು ತಿದ್ದಿಕೊಳ್ಳದ ಸಂಕೇಶ್ವರರು 'ವಿಜಯಕರ್ನಾಟಕ'ದಲ್ಲಿ ವಿಶೇಷ ವರದಿ ಮಾಡಿಸಿಕೊಂಡಿದ್ದಾರೆ. ಸ್ವಾಮಿಯವರ ಹೇಳಿಕೆಯನ್ನು ತೀರಾ ಕಡೆಗಣಿಸಲಾಗಿದೆ. ಮಾತ್ರವಲ್ಲ ನಿರುತ್ತರಾದರು ಎಂದು, ತಿರುಚಿ ಮಾಲೀಕ ನಿಷ್ಠೆ ಮೆರೆದಿದೆ. ಚೆಡ್ಡಿ ಪರಿವಾರದ ಗೋಬೆಲ್ಸ್ ಸಂತತಿಯನ್ನು ಧ್ವನಿಸಿದೆ. ಪತ್ರಿಕಾ ಧರ್ಮಕ್ಕೆ ವಿರುದ್ಧವಾದ ರೀತಿಯಲ್ಲಿ ಪತ್ರಿಕೆ ವರ್ತಿಸಿದ್ದು, ನಂಬರ್ 1 ಎಂಬ ಹಮ್ಮಿನಲ್ಲಿ ಇದ್ದರೂ ಇನ್ನೂ ಸರಿಯಾಗಿ ನೆಲದಲ್ಲಿ ನಿಂತಿಲ್ಲದ ಈ ಪತ್ರಿಕೆ ಮುಂದೆ ಕರ್ನಾಟಕದಲ್ಲಿ ಮಾಡಬಹುದಾದ ಅನಾಹುತಗಳ ಸೂಚನೆ ನೀಡಿದೆ.

ಘಟನೆ ಆದ ಬಳಿಕ ಬಿಜೆಪಿ ಆರ್.ಎಸ್.ಎಸ್. ಬಳಗ ಹುಯಿಲೆಬ್ಬಿಸಿದ್ದಲದೇ ಸ್ವಾಮಿಗಳನ್ನು ಗಡಿಪಾರು ಮಾಡಬೇಕೆಂದೂ ಆಗ್ರಹಿಸಿ ಪ್ರತಿಕೃತಿ ದಹನ, ಹಲವು ರೀತಿಯ ಒತ್ತಡ-ಬೆದರಿಕೆ ಹಾಕಿದೆ. ಸಂಘ ಪರಿವಾರದ ಬಗ್ಗೆ ಕನಿಕರ ಪಡುತ್ತೇನೆ ಅಷ್ಟೇ ಎಂದು ಹೇಳುವ ಮೂಲಕ ಮತ್ತು ವೈದಿಕ ಶಾಹಿಯ ವಿರುದ್ಧ ಸಿಡಿದೆದ್ದು ವೀರಶೈವ ಚಳುವಳಿಯನ್ನು ಅದರ ಪ್ರಗತಿಪರತೆಯನ್ನು ಕಾಯ್ದುಕೊಳ್ಳುವದಾಗಿ ಪುನರುಚ್ಚರಿಸಿ ಚೆಡ್ಡಿಗಳ ಚಿತಾವಣೆಯ ಮುಖಕ್ಕೆ ಹೊಡೆದಿದ್ದಾರೆ. ವೀರಶೈವ ಮಠಗಳಲ್ಲಿನ ಕೆಲವು ಸ್ವಾಮಿಗಳು ಸಂಘ ಪರಿವಾರದ ಸೆರಗಿನಲ್ಲಿ ಮೋಕ್ಷ ಕಾಣಲು ಹವಣಿಸುತ್ತಿರುವಾಗಲೇ ಇಂತಹ ದಿಟ್ಟ ನಿಲುವು ಅಭಿನಂದನೀಯ. ಇದಕ್ಕೆ ಚಿತ್ರದುರ್ಗದ ಮುರುಘೇ ರಾಜೇಂದ್ರ ಮಠಾಧೀಶರು, ನಿಡುಮಾಮಿಡಿ, ಸಿದ್ಧಗಂಗಾ ಮಠಾಧೀಶರಂಥಹವರು, ಹಲವಾರು ಪ್ರಗತಿಪರ ಸಂಘಟನೆಗಳು ಬೆಂಬಲಿಸಿ ಸಮರ್ಥಿಸಿರುವುದು ಗಮನಾರ್ಹ.

ಹಾಗೆ ನೋಡಿದರೆ ಕರ್ನಾಟಕದಲ್ಲಿ ಬಿಜೆಪಿ ರಾಜಕೀಯವಾಗಿ ದುರ್ಬಲವಾಗುತ್ತಿದೆ. ಅದರಲ್ಲೂ ಉತ್ತರ ಕರ್ನಾಟಕದ ಲಿಂಗಾಯತರ ನಡುವೆ ತಾವೇ ಚಾಂಪಿಯನ್‌ಯೆಂದು ಕೊಳ್ಳುತ್ತಿರುವುದು ಕರಗುತ್ತಿದೆ. ಪ್ರಧಾನ ಕ್ಷೇತ್ರಗಳನ್ನೇ ಕಳೆದುಕೊಳ್ಳುವ ಭಯವಿದೆ. ಮತ್ತೇ ನೆಲೆಯೂರಬೇಕೆಂದರೆ ಕೋಮುವಾದದ ವಿಷ ಜ್ವಾಲೆ ಹಬ್ಬಿಸಬೇಕು ಎಂಬ ತರ್ಕ. ಇದಕ್ಕೆ ಅಡ್ಡಿ ಈ ಇಂತಹ ಮಠಾದೀಶರು. ಆದ್ದರಿಂದ ಇವರನ್ನು ಹಣಿದರೆ ಸರಿಹೋದಿತೆ ಎಂಬುದು ಸಂಘ ಪರಿವಾರದ ಲಕ್ಕಾಚಾರ. ಇಂತಹ ವೈದಿಕಶಾಹಿ, ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳ ವಿರುದ್ಧ ಎಚ್ಚರದ, ರಾಜಿ ಇಲ್ಲದ ಹೋರಾಟ ನಡೆಯಬೇಕು. ಹುನ್ನಾರಗಳನ್ನು ಸೋಲಿಸಬೇಕು.

ಹಣತೆಗಳು

ಯಾವ ಶಕ್ತಿಗಳು ಬುದ್ಧನನ್ನು ಹೊರರಾಷ್ಟ್ರಗಳಿಗೆ ಅಟ್ಟಿದವೋ, ಯಾವ ಶಕ್ತಿಗಳು ಬಸವಣ್ಣನವರನ್ನು ಬಸವ ಕಲ್ಯಾಣದಿಂದ ಒಕ್ಕಲೆಬ್ಬಿಸಿದವೋ, ಯಾವ ಶಕ್ತಿಗಳು ಗಾಂಧೀಜಿಯಂತಹ ಪಿತಾಮಹರನ್ನೆ ಬಲಿ ತೆಗೆದುಕೊಂಡವೋ ಅಂತಹ ಶಕ್ತಿಗಳು ಈಗಲೂ ಇವೆ. ಇವುಗಳು ಇದ್ದಾಗಲೇ ಜನಪರವಾದ ಆಂದೋಲನಗಳು, ಚಳುವಳಿಗಳು ಹುಟ್ಟಿಕೊಂಡಿವೆ.



ಪ್ರಜ್ಞಾವಂತಿಕೆಗೆ ಮಹತ್ವ ಬಂದಿದೆ. ಇಂತಹ ಶಕ್ತಿಗಳು ಮಾಡುವ ಟೀಕೆ ಟಿಪ್ಪಣಿ, ಪತ್ರಿಕಾ ಸಮರಗಳಿಗೆ ಹೆದರುವ ಅಗತ್ಯ ಇಲ್ಲ.

- ಮುರುಘರಾಜೇಂದ್ರ ಶ್ರೀ ಶಿವಮೂರ್ತಿ ಸ್ವಾಮೀಜಿ

★★★

ಗದುಗಿನ ಶ್ರೀಗಳನ್ನು ಗಡಿಪಾರು ಮಾಡಬೇಕು ಎಂದು ಒತ್ತಾಯಪಡಿಸುತ್ತಿರುವುದು ಅತ್ಯಂತ ಉದ್ಧಟತನದ ಪರಮಾವಧಿ. ಇದೊಂದು ದಮನಕಾರಿ ವರ್ತನೆ. ಇದನ್ನು ನೋಡುತ್ತಿದ್ದರೆ ನಾವು ಪ್ರಜಾಸತ್ತೆ ವ್ಯವಸ್ಥೆಯಲ್ಲಿ ಇದ್ದೇವೆಯೇ ಎನ್ನುವ ಸಂಶಯ ಮೂಡತೊಡಗಿದೆ. ಫ್ಯಾಸಿಸ್ಟ್ ಶಕ್ತಿಗಳು ಯಾರನ್ನೂ ಬಿಡುವುದಿಲ್ಲ. ಹೀಗಾಗಿ ಸಮಾಜ ಈಗ ಎಚ್ಚೆತ್ತುಕೊಳ್ಳಲೇಬೇಕಾಗಿದೆ.



- ನಿಡುಮಾಮಿಡಿ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿ

★★★

ತಮ್ಮ ಚಾತುರ್ವರ್ಣದ ವಂಚನೆಯ ಬಲೆಯಲ್ಲಿ ಎಂದೂ ಸಿಲುಕಿಕೊಳ್ಳದ ಈ ಶ್ರೀಗಳನ್ನು ಹಣಿಯಲು ಹೊಂಚು ಹಾಕುತ್ತಿದ್ದ ಸಂಘ ಪರಿವಾರ ಇದೀಗ ಅವರ ಮೇಲೆ ದಾಳಿ ಆರಂಭಿಸಿದೆ.

- ಜನವಾಹಿನಿ

★★★

ಇಂದು ಪೇಜಾವರ ಸ್ವಾಮಿಗಳು ಯಾವ ನೆಲೆಗಟ್ಟಿನಲ್ಲಿ ನಿಂತು ಧರ್ಮವನ್ನು ಬೋಧಿಸುತ್ತಾರೆ. ಅದೇ ಈ ತೋಂಟದ ಸ್ವಾಮಿಗಳು ಹೇಗೆ ಧರ್ಮವನ್ನು ಅರ್ಥೈಸುತ್ತಿದ್ದಾರೆ.

..... ವಿಜಯ ಸಂಕೇಶ್ವರ್ ಅವರಿಗೆ ಇಂದು ಹಿಂದೂ ಧರ್ಮದ ಆದರ್ಶ ಪ್ರತಿನಿಧಿ ಪೇಜಾವರರು! ಅವರಂತೆ ಈ ತೋಂಟದ ಸ್ವಾಮಿಗಳು ಏಕಿಲ್ಲ ಎನ್ನುವುದು ಸಂಕೇಶ್ವರ್‌ರ ತಕರಾರು. ಇಂಥ ಅನಿಸಿಕೆ ಸುಮ್ಮನೆ ಬರುವುದಿಲ್ಲ. ಆ ಮಠಕ್ಕೆ ಬರುವ ಸಾಮಾನ್ಯ ಲಿಂಗಾಯತನಿಗೆ ಬರುವುದಿಲ್ಲವೇಕೆ? ಸಂಕೇಶ್ವರ್ ಅವರಿಗೆ ಇರುವಂತೆ ಆ ಸಾಮಾನ್ಯನಿಗೆ ರಾಜಕೀಯ ದುರಾಸಕ್ತಿಯಿಲ್ಲ. ಮುಸ್ಲಿಮ್ ವಿರೋಧಿ ಭಾವನೆ ಕೆರಳಿಸಿದರೆ ಮಾತ್ರ ಹಿಂದೂಗಳನ್ನು ಒಂದೆಡೆಗೆ ಆಣಿನೆರೆಸಲು ಸಾಧ್ಯ ಎನ್ನುವುದು ಸಂಕೇಶ್ವರ್ ಸಮೀಕರಣ... ಇದಕ್ಕೆ ತಣ್ಣೀರೆರಚುವ ಕೆಲಸ ಮಾಡುತ್ತಿರುವ ಸ್ವಾಮಿಗಳ ಮೇಲೆ ಸಿಟ್ಟು ಬರುವುದು ಸಹಜವೇ ಸರಿ.

- ಲಂಕೇಶ ಪತ್ರಿಕೆಯಲ್ಲಿ ಗಂಗಾಧರ ಕುಷ್ಟಗಿ

ರೈತರ ಬದುಕನ್ನು ನಿಕೃಷ್ಟವಾಗಿ ಕಂಡ ವೀರೇಶ್ ವರದಿ

ದಿನ ದಿನವೂ ಏನಿಲ್ಲವೆಂದರೂ ಒಬ್ಬಿಬ್ಬರು ರೈತರ ಆತ್ಮಹತ್ಯೆ. ಉದಾರೀಕರಣ, ಜಾಗತೀಕರಣದ ಕರಾಳ ಪರಿಣಾಮಗಳು ವ್ಯಕ್ತಗೊಂಡ ಒಂದು ಬಗೆ ಈ ಸರಣಿ ಆತ್ಮಹತ್ಯೆಗಳು. ಹಾಗೆಯೆ ನೆರೆಯ ಆಂಧ್ರದಲ್ಲಿ ಅಲ್ಲಿ ಕುಶಲಕರ್ಮಿಗಳು, ನೇಕಾರರೂ ಉರುಳಿಗೆ ಕೊರಳು ಕೊಟ್ಟವರು. ಸಮೃದ್ಧಿಯ ನಾಡೆಂದೇ ಬಣ್ಣಿಸಲಾಗುವ ಪಂಜಾಬ್‌ನಲ್ಲಿ ಸಾವಿನ ಅಟ್ಟಹಾಸ ಮೊದಮೊದಲು ಕರ್ನಾಟಕ ಸರ್ಕಾರ ಇಂತಹ ದುರ್ಘಟನೆ ನಡೆದಾಗ ಜನರ ಆಗ್ರಹಕ್ಕೆ ಸ್ಪಂದಿಸಿದಂತೆ ಕಂಡಿತು. ತನ್ನ ಆಡಳಿತ ಯಂತ್ರದ ಮೂಲಕ ಕಾರಣಗಳನ್ನು ಸಂಗ್ರಹಿಸಿತು. ಇದು ಬೆಳೆದ ಫಸಲಿಗೆ ಬೆಲೆಯಿಲ್ಲದ , ಮಾಡಿದ ಸಾಲ ತೀರಸಲಾಗದೇ ಮಾನ ಮೂರು ಕಾಸಿಗೆ ಹರಾಜಾಗುವುದೆಂದು ಹೆದರಿ ದಾರಿಗಾಣದೇ ರೈತರು ಅವರ ಕುಟುಂಬಗಳೂ ಹೆಣವಾದ ಧಾರುಣ ಸತ್ಯವನ್ನು ಲೋಕಕ್ಕೆ ಬಚ್ಚಿಟ್ಟರು. ಅಧಿಕಾರಿಗಳು, ಮಾಧ್ಯಮಗಳು ಮತ್ತು ಜನತೆ.



ಡಾ. ವೀರೇಶ್

ಆದರೆ ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲಿ ಇದರ ಮೂಲ ಸಮಸ್ಯೆ ಇತ್ಯರ್ಥಪಡಿಸಲು ಮುಂದಾಗಲಿಲ್ಲ. ಉದಾರೀಕರಣ ಜಾಗತೀಕರಣಕ್ಕೆ ಶರಣು ಹೊಡೆಯೋದು ಬಿಡಲಿಲ್ಲ. ಅವುಗಳ ಬಾಧೆಯಿಂದ ಜನರನ್ನು ರಕ್ಷಿಸಲು ಹೆಜ್ಜೆ ಇಡರು. ಅದರತ್ತ ಕಿಂಚಿತೂ ಯತ್ನಿಸಲಿಲ್ಲ. ವಿಶ್ವಬ್ಯಾಂಕ್ WTO ಗಳನ್ನು ಬಿಡಲಿಲ್ಲ. ಸಾವಿನ ಸೂತಕದ ಮೆರವಣಿಗೆ ನಿಲ್ಲಲಿಲ್ಲ.

ನೆಲನೆಲದಲ್ಲಿ ಜಲ ಉಕ್ಕಿಸಿ, ಬೆಳ್ಳಿ ಬೆಳೆ ಬೆಳೆದವರು ಮಣ್ಣು ಪಾಲಾಗುತ್ತಿರುವಂತೆಯೇ ಸರ್ಕಾರ ಕಣ್ಣು, ಕಿವಿ, ಬಾಯಿ ಮುಚ್ಚಿತು. 'ಪರಿಹಾರ ಸಿಗುತ್ತದೆಯೆಂದೇ ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ' ಎಂಬ ಉಢಾಫೆಯ ಮಾತನ್ನು ಕೆಲವು ಅಧಿಕಾರಿ, ಆಡಳಿತಗಾರರಿಂದ ಹೇಳಿಸಿದ್ದು ಆಯಿತು. ತಮ್ಮನ್ನು ಅಧಿಕಾರದಲ್ಲಿ ಗದ್ದುಗೇರಿಸಿದವರ ಬಗ್ಗೆ ನಿರ್ಲಕ್ಷಿಸಿದ ನರಸತ್ತ ಸರ್ಕಾರದ ಮೇಲೆ ಜನರ ಆಕ್ರೋಶ ಹೆಚ್ಚಿತು. ದೇಶದ ನಂಬರ್ ಒನ್ ಮುಖ್ಯಮಂತ್ರಿಯವರ ಮುಖಕ್ಕೆ ಕಪ್ಪು ಚುಕ್ಕೆಯಾಗಿ ರಾಚುತ್ತಿರುವುದು ಗೋಚರಿಸಿತು.

ಪಿ. ಮಹಮ್ಮದ್ ಕೃಪೆ: ಜನವಾಹಿನಿ



ಏನಾಯ್ತು? ಡಾ.ವೀರೇಶ್ ಸಮಿತಿ ವರದಿ!

ವಿಶ್ವಬ್ಯಾಂಕ್ ಒತ್ತಡಕ್ಕೆ ಮಣಿದು ವಿದ್ಯುತ್ ದರ ಹೆಚ್ಚಳ

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಬಹಿರಂಗ ವಿಚಾರಣೆ ಎಂಬ ನಾಟಕ ಬಯಲು


ಜೆ.ಎನ್.ನಾಗರಾಜ್

ಕರ್ನಾಟಕದ ಜನತೆಯ ಮೇಲೆ 761.86 ಕೋಟಿ ರೂ.ಗಳ ಹೊರೆಯನ್ನು ಹೇರುವ ಆಜ್ಞೆಯನ್ನು ಕೆ.ಇ.ಆರ್.ಸಿ. ಹೊರಡಿಸಿದೆ. ಕ.ವಿ.ಪ್ರ.ನಿ.ಯು (ಕೆಪಿಟಿಸಿಎಲ್) ಶೇ 30.15 ರಷ್ಟು ದರ ಏರಿಕೆಗಾಗಿ ಅರ್ಜಿ ಸಲ್ಲಿಸಿತ್ತು ಅದನ್ನು ಶೇ 16.20 ರಷ್ಟು ಏರಿಕೆಗೆ ಆಜ್ಞೆ ಮಾಡಿದ್ದೇವೆ ಎಂದು ಕೆಇಆರ್‌ಸಿ ಹೇಳಿಕೊಂಡಿದೆ. ಈ ಆಜ್ಞೆಯ ಹಿಂದೆ ನಡೆದಿರುವ ನಾಟಕವನ್ನು ಜನ ಮರೆತಿದ್ದಾರೆ ಎಂದು ಆಯೋಗ ಭಾವಿಸಿದಂತಿದೆ. ಕಾನೂನಿನ ಅವಶ್ಯಕತೆಗನುಗುಣವಾಗಿ 6.3.2001 ರಂದೇ ಕೆಪಿಟಿಸಿಎಲ್ ಶೇ 17 ರಷ್ಟು ದರ ಏರಿಕೆಯನ್ನು ಬಯಸಿ ಆಯೋಗಕ್ಕೆ ಅರ್ಜಿ ಸಲ್ಲಿಸಿತ್ತು. ಕೆಪಿಟಿಸಿಎಲ್‌ಗೆ ಮರು ಅರ್ಜಿ ಸಲ್ಲಿಸಲು ಆಯೋಗ ಸೂಚಿಸಿದ ನಂತರ ಕೆಪಿಟಿಸಿಎಲ್ ಶೇ 30.15 ರಷ್ಟು ಏರಿಕೆಗಾಗಿ 8.2.2002 ರಂದು ಮಾರ್ಪಡಿಸಿದ ಅರ್ಜಿ ಸಲ್ಲಿಸಿತು. ಈ ಮಧ್ಯೆ ಏನು ನಡೆದಿದೆ ಎಂಬುದು ಜನತೆಯ ಮುಂದೆ ಬಹಿರಂಗವಾಗಬೇಕು. ಅದಕ್ಕಾಗಿ ಕೆಪಿಟಿಸಿಎಲ್ ಸಲ್ಲಿಸಿದ ಮೊದಲನೇ ಅರ್ಜಿ ಹಾಗೂ ಎರಡನೇ ಅರ್ಜಿಗಳು ಜನರಿಗೆ ಲಭ್ಯವಾಗಬೇಕು. ಆಗಲೇ ಈ ಎರಡೂ ಅರ್ಜಿಗಳ ನಡುವೆ ಕೆಪಿಟಿಸಿಎಲ್ ಹಾಗೂ ಕೆಇಆರ್‌ಸಿ ಎಂಬ ಈ ಸಂಸ್ಥೆಗಳ ನಡುವೆ ನಡೆದಿರುವ ವ್ಯವಹಾರ ಏನೆಂಬುದು ಬಹಿರಂಗವಾಗಬೇಕು.

ವಿದ್ಯುತ್ ನಿಯಂತ್ರಣ ಆಯೋಗದ ಹಿಂದಿನ ಆಜ್ಞೆ ವರ್ಷವೊಂದಕ್ಕೆ 587 ಕೋಟಿ ರೂ. ಹೇರಿದ್ದರೆ ಈ ವರ್ಷದ ಆಜ್ಞೆ 761 ಕೋಟಿ ರೂ. ಹೊರೆ ಹೇರಿದೆ ಎಂಬುದನ್ನು ಗಮನಿಸಬೇಕು.

ಜನ ವಿರೋಧಿ, ರೈತ ವಿರೋಧಿ ಹಾಗೂ ದಲಿತ ವಿರೋಧಿ ದರ ಏರಿಕೆ

ಆಯೋಗ ಏರಿಸಿರುವ ಶೇ 16.2 ರ ಸರಾಸರಿ ಏರಿಕೆಯಲ್ಲಿ ಬಡತನದ ರೇಖೆಯ ಕೆಳಗೆ ನಲುಗುತ್ತಿರುವ, ಕೇವಲ ಗೃಹ ದೀಪಕ್ಕಾಗಿ ಒಂದೆರಡು ವಿದ್ಯುತ್ ದೀಪಗಳನ್ನು ಬಳಸುವವರ ಮೇಲೆಯೇ ತೀವ್ರಪ್ರಮಾಣದ ಏರಿಕೆ ಮಾಡಲಾಗಿದೆ.



ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಎಂಬ ಒಂದು ವಿದ್ಯುದ್ದೀಪಕ್ಕಾಗಿ ಕೇವಲ 18 ಯೂನಿಟ್ ಮಾತ್ರ ಬಳಸಬೇಕಾದ ನಿರ್ಬಂಧವಿರುವ ಗ್ರಾಮೀಣ ಬಡವರಿಗೆ, ಆದರಲ್ಲಿಯೂ ಹೆಚ್ಚಾಗಿ ದಲಿತ ಜನ ವಿಭಾಗಗಕ್ಕೆ ರೂ. 10 ರಿಂದ 30 ರೊಳಗೆ ಮೂರು ಪಟ್ಟು ಏರಿಕೆ ಮಾಡಲಾಗಿದೆ. ಹಾಗೆಯೇ ಗೃಹ ದೀಪಗಳ ಬಳಕೆಗೂ ಶೇ. 40 ರಿಂದ 80 ರ ವರೆಗೂ ಏರಿಕೆ ಮಾಡಲಾಗಿದೆ. ನೂರು ಯೂನಿಟ್‌ಗಳಿಂದ 200 ಯೂನಿಟ್ ನಡುವೆ ವಿದ್ಯುತ್ ಬಳಸುವವರಿಗೆ ತೀವ್ರ ಏರಿಕೆ. ಹಾಗೆಯೇ ಎಇಎಚ್ ಮೊದಲಾದ ಮಧ್ಯಮವರ್ಗದ ಬಳಕೆಯ ಬಗ್ಗೆಯೂ ಕೂಡ ಹಿಂದಿನ ವರ್ಷವೇ ತೀವ್ರವಾಗಿ ಏರಿಕೆ ಮಾಡಿದ್ದರ ಮೇಲೆ ಈ ಬಾರಿ ಮತ್ತಷ್ಟು ಏರಿಕೆ ಮಾಡಲಾಗಿದೆ.

ಕೃಷಿ ಉತ್ಪಾದನೆಯ ಮೇಲೆ ಹೊರಲಾಗದ ಹೊರೆ

ಕರ್ನಾಟಕದಲ್ಲಿ ಸುಮಾರು 12 ಲಕ್ಷ ಪಂಪ್‌ಸೆಟ್‌ಗಳ ಮೂಲಕ ರೈತರು ಕರ್ನಾಟಕದ ಜನತೆಗೆ ಹಾಲು, ತರಕಾರಿ, ಹಣ್ಣು ಹಂಪಲುಗಳನ್ನು ಬೆಳೆದು ಒದಗಿಸುತ್ತಿದ್ದಾರೆ. ಕರ್ನಾಟಕದ ಹೆಸರನ್ನೂ ಪ್ರಸಿದ್ಧಿಗೊಳಿಸಿರುವ ರೇಷ್ಮೆ, ಬೀಜೋತ್ಪಾದನೆಗಳೂ ಪಂಪ್‌ಸೆಟ್ ಕೃಷಿಯ ಮೂಲಕ ಬರುವಂತಹವು. ಈ ಪಂಪ್‌ಸೆಟ್ ಗಳು ಹೆಚ್ಚಿರುವುದೂ ಕೂಡ ಕರ್ನಾಟಕದ ಅತ್ಯಂತ ಬರಗಾಲ ಪೀಡಿತ ಪ್ರದೇಶಗಳಲ್ಲಿ. ಈ ವರ್ಷ, ಒಂದು ಕಡೆ, ಒಣ ಬೇಸಾಯದ ಪ್ರದೇಶಗಳಲ್ಲಿ ಬೆಳೆಯಿಲ್ಲದೆ, ಮತ್ತೊಂದು ಕಡೆ ಬಾವಿ, ಕೊಳವೆ ಬಾವಿಗಳಲ್ಲಿ ನೀರು ಕಡಿಮೆಯಾಗಿ, ಇರುವ ನೀರನ್ನು ಎತ್ತಿ ನೀರಾವರಿ ಮಾಡಲು ವಿದ್ಯುತ್ ಕಡಿತದಿಂದ ಸಾಧ್ಯವಾಗದೆ, ಅರ್ಧಕ್ಕರ್ಧ ಬೆಳೆ ನಷ್ಟಕ್ಕೊಳಗಾಗಿರುವ ಪರಿಸ್ಥಿತಿಯಲ್ಲಿ ರೈತ ನರಳುತ್ತಿದ್ದಾನೆ.

ಈ ರೈತನಿಗೆ 2001ನೇ ಇಸವಿಯಲ್ಲಿ ಚಾಲ್ತಿಯಲ್ಲಿದ್ದದ್ದು ಒಂದು ಎಚ್‌ಪಿ ಗೆ 300 ರೂ ದರ. ಅದನ್ನು ಕೆಪಿಟಿಸಿಎಲ್ 900 ರೂ. ಗೆ ಏರಿಸಬೇಕು ಎಂದು ಬಯಸಿದರೆ ಆಯೋಗ 1200 ರೂ. ಗಳಿಗೆ ಏರಿಸಿ ಆಜ್ಞೆ ನೀಡಿದೆ. ಇದರ ಪರಿಣಾಮವೇನು ಎಂಬ ಬಗ್ಗೆ ವಿದ್ಯುತ್ ನಿಗಮವಾಗಲೀ, ವಿದ್ಯುತ್ ನಿಯಂತ್ರಣ ಆಯೋಗವಾಗಲೀ ಕಾಳಜಿ ವಹಿಸಿಲ್ಲ. ಈ ರೈತರು 3-4 ತಿಂಗಳು ತಾವು ಬೆಳೆಯುವ ತರಕಾರಿ ಬೆಳೆಗೆ ಕೇವಲ ವಿದ್ಯುತ್ತಿಗಾಗಿ 3000 ರೂ. ನಿಂದ 4000 ರೂ. ವರೆಗೆ ನೀಡಬೇಕಾಗಿ ಬರುತ್ತದೆ. ಇದರಿಂದ ಬಹಳಷ್ಟು ರೈತರು ಬೆಳೆಯುವುದನ್ನೇ ಕೈಬಿಡುವ ಮೂಲಕ ಹಾಲು, ತರಕಾರಿ, ಹಣ್ಣು ಹಂಪಲುಗಳ ಬೆಲೆ ಏರುತ್ತದೆ. ರೈತರು ದಿವಾಳಿಯಾಗುವಂತಾದರೂ, ಅಂತಿಮವಾಗಿ ಬಳಕೆದಾರರೇ ಹೆಚ್ಚು ಬೆಲೆ ತೇರಬೇಕಾಗುವುದು ಎಂಬುದನ್ನು ಗಮನಿಸಬೇಕು.

ಕೈಗಾರಿಕಾ ಉತ್ಪಾದನೆ

ಈಗಾಗಲೇ ವಿಶ್ವವಾಣಿಜ್ಯ ಒಪ್ಪಂದಗಳಿಗಾಗಿ ಕೈಗಾರಿಕಾ ಉತ್ಪಾದನೆಯ ಮೇಲೆ ದೊಡ್ಡ ಆಘಾತವಾಗಿದೆ. ಅಗ್ಗದ ಆಮದುಗಳು ಸಾವಿರಾರು ಕೈಗಾರಿಕೆಗಳನ್ನು ಮುಚ್ಚುವಂತೆ ಮಾಡಿದೆ. 2000 ರ ವಿದ್ಯುತ್ ದರ ಆಜ್ಞೆಯಲ್ಲಿನ ವಿದ್ಯುತ್ ದರ ಏರಿಕೆಯಿಂದಾಗಿ ಸಣ್ಣ ಕೈಗಾರಿಕೆಗಳು ಈಗಾಗಲೇ ತೀವ್ರ ಬಾಧೆಗೊಳಗಾಗಿವೆ. ಅಂತಹ ಸಂದರ್ಭದಲ್ಲಿ ಸಣ್ಣ ಕೈಗಾರಿಕೆಗಳಿಗೆ ಹಿಂದಿನ ಆಜ್ಞೆಗಿಂತ, ದರವನ್ನು ತಗ್ಗಿಸಬೇಕಾದುದು ತುರ್ತು ಅಗತ್ಯ. ಆದರೆ ದರಗಳನ್ನು ಮತ್ತಷ್ಟು ಏರಿಸಲಾಗಿದೆ. ಇದರಿಂದ

ಪುಟ 10 ಕ್ಕೆ

ಕರ್ನಾಟಕ ಬಂದ್‌ಗೆ ಕರೆನೀಡಿ ಧರ ಏರಿಕೆ ವಿರೋಧಿಸುವುದಾಗಿ ಹೇಳುವ ಬಿಜೆಪಿ ಈ ಪ್ರಶ್ನೆಗಳಿಗೆ ಉತ್ತರಿಸಲಿ

I. ಪ್ರಧಾನ ಮಂತ್ರಿ ವಾಜಪೇಯಿಯವರು 03-03-2001 ರಂದು ಕರೆದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳ ಸಭೆಯಲ್ಲಿ

1. ಪ್ರತಿರಾಜ್ಯವೂ ಕೃಷಿಗೆ ಸರಬರಾಜು ಮಾಡುವ ಪ್ರತಿ ಯೂನಿಟ್ ವಿದ್ಯುತ್ ಗೆ 50 ಪೈಸೆ ದರ ನಿಗದಿ ಪಡಿಸಬೇಕು ಮತ್ತು ಇದನ್ನು ಪ್ರತಿವರ್ಷ ಹೆಚ್ಚಿಸುತ್ತಾ ಸಹಾಯಧನದ ಅಂಶವನ್ನು ತೆಗೆದುಹಾಕುತ್ತಾ ಬರಬೇಕು ಎಂದು ಆದೇಶ ನೀಡಿರುವುದನ್ನು ಅಲ್ಲಗಳೆಯುತ್ತೀರಾ?
2. ಯಾವುದೇ ವರ್ಗದ ಬಳಕೆದಾರನಿಗಾದರೂ ವಿದ್ಯುತ್ ಸರಬರಾಜು ಖರ್ಚಿಗಿಂತ ಕಡಿಮೆ ದರದಲ್ಲಿ ವಿದ್ಯುತ್ ನೀಡಬಾರದೆಂಬುದನ್ನು ಕೇಂದ್ರ ಸರ್ಕಾರದ ವಿದ್ಯುತ್ ನೀತಿ ಎಂದು ಘೋಷಿಸಿಲ್ಲವೇ?
3. ಎಲ್ಲ ವಿದ್ಯುತ್ ಸಂಪರ್ಕಗಳನ್ನು ಸಾರ್ವತ್ರಿಕ ಮೀಟರೀಕರಣಕ್ಕೆ ಒಳಪಡಿಸಬೇಕೆಂದು ನಿಗದಿಪಡಿಸಿಲ್ಲವೇ?
4. ವಿದ್ಯುತ್ ಉತ್ಪಾದನೆ, ಸಾಗಾಣಿಕೆ, ಸರಬರಾಜು ಎಲ್ಲವನ್ನೂ ಬೇರ್ಪಡಿಸಬೇಕು. ಖಾಸಗೀಕರಣಗೊಳಿಸಬೇಕು ಎಂದು ಆದೇಶಿಸಿಲ್ಲವೇ?
5. ಈ ಮೇಲಿನ ವಿದ್ಯುತ್ ನೀತಿಯ ಅಂಶಗಳನ್ನು ಜಾರಿ ಮಾಡದಿದ್ದರೆ ಅಂತಹ ರಾಜ್ಯಗಳಿಗೆ ಕೇಂದ್ರ ಸರ್ಕಾರದಿಂದ ಯಾವ ಧನ ಸಹಾಯವೂ ಹಾಗೂ ಕೇಂದ್ರ ಸರ್ಕಾರದ ಸಂಸ್ಥೆಗಳಿಂದ ವಿದ್ಯುತ್ ಕೂಡ ದೊರೆಯುವುದಿಲ್ಲವೆಂಬ ನಿರ್ಬಂಧವನ್ನು ಘೋಷಿಸಿಲ್ಲವೇ?

II. 1. 12-02-2000 ರಂದು ಕೇಂದ್ರ ಸರ್ಕಾರವು ಮೇಲೆ ಹೇಳಿದ ಅಂಶಗಳನ್ನೆಲ್ಲಾ ಶರತ್ತುಗಳನ್ನಾಗಿಸಿ ಒಂದು ಎಂ.ಓ.ಎ. Memorandum of Agreement ಗೆ ರಾಜ್ಯ ಸರ್ಕಾರಗಳು ಸಹಿ ಮಾಡಬೇಕು ಎಂದು ನಿರ್ಬಂಧಿಸಲಿಲ್ಲವೇ? ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರದ ಈ ಶರತ್ತುಗಳಿಗೆ ಸಹಿ ಹಾಕಿದ ಮೊದರ ರಾಜ್ಯ ಎಂದು ಹೆಮ್ಮೆಯಿಂದ ವಿಧಾನಸಭೆಯಲ್ಲಿ ಸಾರಲಿಲ್ಲವೇ?

2. ಈ ಎಂ.ಓ.ಎ. ದ ವಿವರಗಳನ್ನು ನಿಮ್ಮದೇ ಕೇಂದ್ರ ಸರ್ಕಾರದಿಂದ ಪಡೆದು ರಾಜ್ಯದ ಜನತೆಯ ಮುಂದಿಡುವ ಧೈರ್ಯ ಮಾಡಬಲಿಲ್ಲಾ?
3. ಈ ಒಪ್ಪಂದದ ಜಾರಿಗಾಗಿ ಕೇಂದ್ರ ಸರ್ಕಾರದ ವಿದ್ಯುತ್ ಮಂತ್ರಿ, ಮಂತ್ರಿಶಾಖೆ ಪ್ರತಿ ತಿಂಗಳೂ ಕೂಡ ಆರ್.ಐ.ಟಿ.ಎಸ್. (Reform implementation Task Force) ಸಭೆಗಳಲ್ಲಿ ಒತ್ತಾಯ ಮಾಡುತ್ತಿಲ್ಲವೇ? ಕೃಷಿಗೆ ವಿದ್ಯುತ್ ಬೆಲೆ ಏರಿಕೆ, ಸಾರ್ವತ್ರಿಕ ವಿದ್ಯುತ್ ದರ ಏರಿಕೆ, ಮೀಟರೀಕರಣ, ಇವುಗಳ ಬಗ್ಗೆ ಗುರಿಗಳನ್ನು ಸಮಯಮಿತಿಗಳನ್ನು ನಿಗದಿಪಡಿಸಿ ಅದರಂತೆ ಜಾರಿಗೆ ತಾರದ ಬಗ್ಗೆ ರಾಜ್ಯ ಸರ್ಕಾರದ ಮೇಲೆ ಒತ್ತಾಯ ಹೇರುತ್ತಿಲ್ಲವೆ?

III. 1. ಕೇಂದ್ರ ಸರ್ಕಾರದ ಅರ್ಥಮಂತ್ರಿ ಯಶವಂತಸಿನ್ಹಾರವರು ವಾಶಿಂಗ್‌ಟನ್‌ನಲ್ಲಿ ಭಾಗವಹಿಸಿದ ವಿಶ್ವಬ್ಯಾಂಕ್, ಐಎಂಎಫ್, ಸಭೆಗಳಲ್ಲಿ ಹಾಗೂ ವಿಶ್ವಬ್ಯಾಂಕ್, ಐಎಂಎಫ್ ನೊಡನೆ ನಡೆಸಿದ ಜಂಟಿ ಸಭೆಗಳಲ್ಲಿ ವಿದ್ಯುತ್ ಸುಧಾರಣೆಗಳು, ಆದರ ಭಾಗವಾಗಿ ಸಹಾಯಧನ ರದ್ದತಿ, ಎಲ್ಲ ಬಳಕೆದಾರರಿಗೂ ವಿದ್ಯುತ್ ವೆಚ್ಚದ ಆಧಾರದ ಮೇಲೆ ದರ ನಿಗದಿ, ಸಾರ್ವತ್ರಿಕ ಮೀಟರೀಕರಣ, ಕೃಷಿಗೆ ಉಚಿತ ವಿದ್ಯುತ್ ರದ್ದತಿ, ವಿದ್ಯುತ್ ಉತ್ಪಾದನೆ ಹಾಗೂ ಹಂಚಿಕೆ, ಖಾಸಗೀಕರಣದ ಶರತ್ತುಗಳನ್ನು ಒಪ್ಪಿಕೊಂಡು ಬರಲಿಲ್ಲವೇ?

2. ಈ ಅಂಶಗಳು ಕೇಂದ್ರ ಸಚಿವ ಸಂಪುಟದ ಆರ್ಥಿಕ ವ್ಯವಹಾರಗಳ ಉಪಸಮಿತಿಯಲ್ಲಿ ಚರ್ಚಿಸಿ ರಾಜ್ಯ ಸರ್ಕಾರಗಳ ಮೇಲೆ ನಿರ್ಬಂಧ ಪಡಿಸಲು ತೀರ್ಮಾನಿಸಿಲ್ಲವೇ?
3. ಕೇಂದ್ರ ಸರ್ಕಾರದಿಂದ ಈ ಎಲ್ಲಾ ವಿವರಗಳನ್ನು ಪಡೆದು ಬಹಿರಂಗಪಡಿಸಲು ಸಿದ್ಧರಿದ್ದೀರಾ?

IV. 1. ಪ್ರಧಾನ ಮಂತ್ರಿಗಳು ಸಭೆಯಲ್ಲಿ ವಿಧಿಸಿದ ನಿರ್ಬಂಧಗಳನ್ನು ರಾಜ್ಯ ಬಿಜೆಪಿ ಘಟಕ ಪಕ್ಷದ ಸಭೆಗಳಲ್ಲಿ, ಪಕ್ಷದ ಸಂಸತ್ ಸದಸ್ಯರ ಸಭೆಗಳಲ್ಲಿ ಪ್ರಶ್ನಿಸಿದೆಯೇ? ಈ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದೆಯೇ?

2. ಲೋಕಸಭೆಯಲ್ಲಿ ಕೇಂದ್ರ ಸರ್ಕಾರದ ವಿದ್ಯುತ್ ನೀತಿಯ ಈ ಅಂಶಗಳನ್ನು ಬಿಜೆಪಿಯ ಸಂಸತ್ ಸದಸ್ಯರು ಪ್ರಶ್ನಿಸಿದ್ದಾರೆಯೇ? ವಿರೋಧಿಸಿದ್ದಾರೆಯೇ? ವಿದ್ಯುತ್ ಮಂತ್ರಿ ಶಾಖೆಯ ವಿಷಯ ಸಮಿತಿಯಲ್ಲಿರುವ ಬಿಜೆಪಿ ಸದಸ್ಯರು ಈ ನೀತಿಯನ್ನು, ಈ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಒತ್ತಾಯಿಸಿದ್ದಾರೆಯೇ? ಈ ನೀತಿಗಳನ್ನು ವಿರೋಧಿಸಿದ್ದಾರೆಯೇ?
3. ವಿಶ್ವಬ್ಯಾಂಕ್ ರಾಜ್ಯಕ್ಕೆ ನೀಡಿದ ಸಂರಚನಾ ಸಾಲದ ಶರತ್ತುಗಳಲ್ಲಿ ವಿದ್ಯುತ್ ದರ ಏರಿಕೆ, ಸಹಾಯಧನ ಹಿಂತೆಗೆತ ಒಂದಾಗಿಲ್ಲವೇ? ರಾಜ್ಯ ಸರ್ಕಾರ ಈ ಸಾಲವನ್ನು ಪಡೆಯುವುದನ್ನು ನೀವು ವಿಧಾನಸಭೆಯಲ್ಲಾಗಲೀ, ಹೊರಗಾಗಲೀ ವಿರೋಧಿಸಿದ್ದೀರಾ?
4. ಕೇಂದ್ರ ಸರ್ಕಾರ ಈ ವಿದ್ಯುತ್ ನೀತಿಯ ವಿರುದ್ಧ ಹಾಗೂ ಎಂಓಎ ಮೂಲಕ ವಿಧಿಸಿದ ಶರತ್ತುಗಳ ವಿರುದ್ಧ ದೆಹಲಿಯಲ್ಲಿ ಹೋರಾಟ ಮಾಡಲು ತಯಾರಿದ್ದೀರಾ?
5. ರಾಜ್ಯದಲ್ಲಿ ವಿಶ್ವಬ್ಯಾಂಕ್ ಸಂರಚನಾ ಸಾಲದ ಶರತ್ತುಗಳು ಹಾಗೂ ವಿದ್ಯುತ್ ಸುಧಾರಣೆಯ ಸಾಲದ ಶರತ್ತುಗಳ ವಿರುದ್ಧ ಹಾಗೂ ವಿದ್ಯುತ್ ಬಗ್ಗೆ ವಿಶ್ವಬ್ಯಾಂಕ್‌ನ ಒತ್ತಾಯಗಳ ವಿರುದ್ಧ ವಿಧಾನಸಭೆಯ ಒಳಗೆ, ಹೊರಗೆ ಹೋರಾಟ ಮಾಡಲು ತಯಾರಿದ್ದೀರಾ?

ಸಿರಿ ಕೃಷ್ಣನ ಹೈಟೆಕ್ ಲೀಲೆ

ಹೇ ಕೃಷ್ಣ, ಪ್ರಜಾಪರಿಪಾಲಕ
ಊದಿದ್ದೆಯಲ್ಲ ಪಾಂಚಜನ್ಯದಿಂದ ಪ್ರಣಾಳಿಕೆ ಭರಪೂರ
ವರ್ಷ ಎರಡಾದರೂ ಎಲ್ಲವೂ ನಿಸ್ಸಾರ,
ಬರೀ ಅಪಸ್ವರ
ಸದಾ ಕೈಯೊಡ್ಡಿ ವಿಶ್ವಬ್ಯಾಂಕ್ ಎದುರು ಭಿಕ್ಷಾಪಾತ್ರ
ಸಾಲದಲ್ಲೇ ಪ್ರಜಾ ಸರಕಾರ, ಶೂಲಕ್ಕೆ ಪ್ರಜಾ ಸಂಸಾರ
ಹೇ ಕೃಷ್ಣ, ಮಲ್ಲಯ್ಯತನಯ
ಮೊದಲು ನೀರುಕೊಡಿ, ಸೂರು ಕೊಡಿ ಎನ್ನುತ್ತ ನಮ್ಮಜ್ಜ
ನಿಮ್ಮದೋ ಹೈಟೆಕ್ ಇನ್‌ಫಾರ್ಮೇಷನ್
ಟೆಕ್ನಾಲಜಿ,
ಉದ್ಯೋಗ ಕಸಿಯಲು ಹಾರ್‍ನಹಳ್ಳಿ ರಾಮಸ್ವಾಮಿ
ಶಿಕ್ಷಣ ವ್ಯಾಪಾರಕ್ಕೆ ಅಜೀಮ್ ಪ್ರೇಮ್‌ಜಿ.
ಹೇ ಕೃಷ್ಣ, ಪ್ರೇಮ ಪ್ರಿಯ
ದಹಿಸಿದರು ದಲಿತರನು ಕಂಬಾಲಪಲ್ಲಿಯಲಿ
ರೈತನಿಗೆ ಗುಂಡಿಟ್ಟೆ ಪಿರಲೇನ ಹಳ್ಳಿಯಲಿ
ಬಿಡಿಸದಾದೆ ದಾಸ್ಯ ಸಂಕೋಲೆ ಹಂಗರವ ಹಳ್ಳಿಯಲಿ,
ಬೆತ್ತಲಾದಳು ಯಲ್ಲಮ್ಮ ಬಳ್ಳಾರಿಯಲಿ
ಹೇ ಕೃಷ್ಣ, ಸರ್ವರಕ್ಷಕ
ಯಶಸ್ವಿಯಾಯ್ತು 108 ದಿನಗಳ ರಾಜ್ ಅಪಹರಣ
ಸಾಲದ ಬಾಧೆಗೆ ರೈತರ ಆತ್ಮಹತ್ಯೆ ಪ್ರಕರಣ
ಕರೆಂಟ್ ನೀಡದೆ ಶಿಲಾಯುಗ ತಂದ ಮಹರಾಯ
ನಮ್ಮಕ್ಕೆ ನೀನು ರೈತರ ಪಾಲಿನ ಜವರಾಯ

ಬಸವರಾಜ ಅಯ್ಯನಗೌಡರ

ಮೋದಿ ಸರ್ಕಾರ ವಜಾ - ರಾಷ್ಟ್ರಪತಿ ಆಳ್ವಿಕೆ ಜಾರಿ

ಉಳಿದ ಒಂದೇ ಮಾರ್ಗ

ಫೆಬ್ರವರಿ 27 ರ ಗೋದ್ರಾ ದಾಳಿ ನಂತರ, 70 ದಿನಗಳು ಕಳೆದಿದ್ದರೂ ಸಹಾ ಗುಜರಾತ್ ಸಹಜ ಸ್ಥಿತಿಗೆ ಮರಳಿಲ್ಲ ಗೋದ್ರಾ ದಾಳಿಯ ನಂತರ ಹಿಂದೆಂದೂ ಕಂಡರಿಯದಂತಹ ದಾಳಿಗಳು ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದ ಮೇಲೆ ಪ್ರಾರಂಭವಾದದ್ದು ಇಂದಿಗೂ ಮುಂದುವರೆದಿವೆ. ದಿನನಿತ್ಯ ಹತ್ಯೆ ಲೂಟಿಯ ವರದಿಗಳು ಬರುತ್ತಿವೆ. ಮೇ 5 ರಿಂದ ಈಚೆಗೆ ಅಹಮದಾಬಾದ್ ಒಂದರಲ್ಲೇ 31 ಜನ ಕೊಲ್ಲಲ್ಪಟ್ಟಿದ್ದಾರೆ.

ಆಘಾತಕಾರಿ ಸತ್ಯವೆಂದರೆ ರಾಜ್ಯ ಸರ್ಕಾರ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ನಾಗರೀಕರಿಗೆ ರಕ್ಷಣೆ ನೀಡಲು ನಿರಾಕರಿಸುತ್ತಿದೆ. ಹಾಗೂ ಗಂಭೀರ ಅಪರಾಧವೆಸಗಿರುವ ಅಪರಾಧಿಗಳ ಮೇಲೆ ಕ್ರಮ ಜರುಗಿಸಲು ಹಿಂದೇಟು ಹಾಕುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನೀಡಿರುವ ಹಲವಾರು ಆಶ್ವಾಸನೆಗಳ ನಂತರವೂ ಸಹಾ ಕೋಮುಧಳ್ಳುರಿ ಮುಂದುವರಿದಿರುವ ಕುರಿತು ಯಾವುದೇ ವಿವರಣೆಗಳು ಇಲ್ಲದಾಗಿವೆ.

ಈ ಧಳ್ಳುರಿಗೆ ಕಾರಣೀಭೂತರಾಗಿರುವ ತಮ್ಮ ಕೃಪಾಕಟಾಕ್ಷಕ್ಕೆ ಒಳಗಾಗಿರುವ ರಾಜಕೀಯ ಗುಂಪುಗಳಿಗೆ ಸೇರಿದವರ ವಿರುದ್ಧ ಕ್ರಮ ಜರುಗಿಸುವ ಇಚ್ಛಾಶಕ್ತಿ ತೋರದ ರಾಜ್ಯ ಸರ್ಕಾರದಿಂದಾಗಿ ಸೈನ್ಯ ಹಾಗೂ ಅರೆಸೈನ್ಯ ಪಡೆಗಳನ್ನು ನಿಯೋಜಿಸಿದ್ದರೂ ಸಹಾ ಹಿಂಸೆ ಕೊನೆಗೊಂಡಿಲ್ಲ. ಅಪರಾಧಿಗಳೆಂದು ಗುರುತಿಸಲಾಗಿರುವ ಬಿಜೆಪಿ ಜನರನ್ನು ಬಂಧಿಸಬೇಕಿರುವ ಪೋಲೀಸರು ಅಲ್ಪಸಂಖ್ಯಾತ ಜನ ವಾಸವಾಗಿರುವ ಪ್ರದೇಶಗಳ ಮೇಲೆ ತಮ್ಮ ಗುಮಾನಿ ಗಮನ ಹೆಚ್ಚಿಸಿರುವಂತಿದೆ.

ತಾತ್ಕಾಲಿಕ ಪರಿಹಾರ ಕೇಂದ್ರಗಳಲ್ಲಿ ವಾಸವಾಗಿರುವ 2 ಲಕ್ಷಕ್ಕೂ ಹೆಚ್ಚು ಜನರನ್ನು ತಮ್ಮ ತಮ್ಮ ಸ್ವಂತ ಮನೆಗಳಲ್ಲಿ ಪೂರ್ಣ ರಕ್ಷಣೆಯೊಂದಿಗೆ ಪುನರ್‌ವಸತಿ ಕಲ್ಪಿಸಬೇಕಿದೆ. ಎಲ್ಲಾ ವರದಿಗಳು ಹೇಳುತ್ತಿರುವ ಅಂಶವೆಂದರೆ ಅವರ ಮನೆಗಳಿಗೆ ಹಿಂತಿರುಗ ಬಯಸುವ ಜನಗಳನ್ನು ಬೆದರಿಸಲಾಗುತ್ತಿದೆ. ಅಥವಾ ಅವರ ಮೇಲೆ ದಾಳಿ ಮಾಡಲಾಗುತ್ತಿದೆ. ಈ ಸರ್ಕಾರದಡಿ ಪುನರ್ ವಸತಿ ಎಂಬುದಕ್ಕೆ ಅವಕಾಶವೇ ಇಲ್ಲದಾಗಿದೆ.

ಎನ್.ಡಿ.ಎ ಮಿತ್ರಪಕ್ಷಗಳು ಸೇರಿದಂತೆ ಅನೇಕ ವಿಭಾಗದ ಜನ ಒತ್ತಾಯಿಸಿದರೂ ಸಹ ನರೇಂದ್ರ ಮೋದಿಯವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಬಿಜೆಪಿ ನಿರಾಕರಿಸಿದೆ. ಪ್ರಸಕ್ತ ಸರ್ಕಾರ ಮುಂದುವರಿಯುವ ತನಕ ಸಂವಿಧಾನದಡಿಯ ನಾಗರೀಕರ ಹಕ್ಕುಗಳನ್ನು ಸಂರಕ್ಷಿಸಲು ಸಾಧ್ಯವಿಲ್ಲ.

ವಿಧಿ 355ರಡಿಯ ಆಶಯದೊಂದಿಗೆ ಕಾರ್ಯವಹಿಸುತ್ತಿದ್ದೇವೆ ಎಂಬ ವಾಜಪೇಯಿ ಸರ್ಕಾರದ ನಿಲುವು ಮತ್ತೊಂದು ಧೋಕಾವೇ ಆಗಿದೆ. ಪರಿಸ್ಥಿತಿ ನಿವಾರಣೆಗೆ ಗುಜರಾತ್ ಸರ್ಕಾರಕ್ಕೆ ಯಾವುದೇ ನಿರ್ದಿಷ್ಟ ಲಿಖಿತ ನಿರ್ದೇಶನಗಳನ್ನು ನೀಡಿಲ್ಲಾ ಮಿಗಿಲಾಗಿ ವಿಧಿ 355 ಅನ್ನು ವಿಧಿ 356ಕ್ಕೆ ಮುನ್ನುಡಿಯಾಗಿ ಅಥವಾ ಪೀಠಿಕೆಯಾಗಿ ನೋಡಬೇಕಿದೆ.

ಸಾಮಾನ್ಯವಾಗಿ ಸಿಪಿಐ (ಎಂ) ರಾಜ್ಯ ಸರ್ಕಾರಗಳ ವಿರುದ್ಧ ವಿಧಿ 356' ರ ಬಳಕೆಯನ್ನು ಬೆಂಬಲಿಸುವುದಿಲ್ಲಾ. ಆದರೂ ಸಹಾ ಗುಜರಾತ್ ಪರಿಸ್ಥಿತಿ ವಿಶಿಷ್ಟವಾಗಿದೆ- ಅದು ಸಂವಿಧಾನದ ಮೂಲಭೂತ ಸಿದ್ಧಾಂತ ಹಾಗೂ ಭಾರತದ ಜಾತ್ಯಾತೀತ ಮೌಲ್ಯಗಳ ಮೇಲಿನ ದಾಳಿಯಾಗಿದೆ ಬಾಬ್ರಿ ಮಸೀದಿಯ ಧ್ವಂಸದ ನಂತರ ವಿಶಿಷ್ಟ ಪರಿಸ್ಥಿತಿ ಉದ್ಭವಿಸಿದಾಗ 4 ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಸಿಪಿಐ(ಎಂ) ಒತ್ತಾಯಿಸಿತ್ತು.

ಮುಂದುವರಿದಿರುವ ಗಲಭೆಗಳಿಂದ ವಿನಾಶ ಗುಜರಾತನ್ನು ರಕ್ಷಿಸಲು ಹಾಗೂ ಅಲ್ಪಸಂಖ್ಯಾತರನ್ನು ಸಂವಿಧಾನದ ಮೌಲ್ಯಗಳನ್ನು ರಕ್ಷಿಸಲು ಉಳಿದಿರುವ ಏಕಮಾತ್ರ ದಾರಿ ಎಂದರೆ ರಾಜ್ಯ ಸರ್ಕಾರವನ್ನು ವಜಾಮಾಡುವುದು ಹಾಗೂ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವುದಾಗಿದೆ. ಶಾಂತಿ ಹಾಗೂ ಸಹಜ ಸ್ಥಿತಿಯನ್ನು ಮರುಕಳಿಸುವಂತೆ ಮಾಡಲು ಸಂಸತ್ತು ಅಗತ್ಯ ಕ್ರಮಗಳನ್ನು ಸೂಚಿಸಲು ಇದು ಅನುವುಗೊಳಿಸುತ್ತದೆ. ಆದ್ದರಿಂದ ಈ ಕೂಡಲೇ ಗುಜರಾತ್ ಸರ್ಕಾರವನ್ನು ವಜಾಮಾಡಿ, ರಾಷ್ಟ್ರಪತಿ ಆಳ್ವಿಕೆಯನ್ನು ಹೇರಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತಿದೆ.

ಪಿ. ಮಹಮ್ಮದ್



ಯಾವ ಜನಾಂಗವನ್ನು ರಕ್ಷಿಸರು ಈ ಫ್ಯಾಸಿಸ್ಟರು... ಸಂಘ ಪರಿವಾರದವರು

ಗುಜರಾತ್‌ನಲ್ಲಿ ಕಳೆದ ಎರಡು ತಿಂಗಳಿಂದ ನಡೆದ, ನಡೆಯುತ್ತಿರುವ 'ಜನಹತ್ಯೆ' ಕುರಿತ ಖಂಡನಾ ನಿರ್ಣಯ ನಿಲುವಳಿಗೆ 16 ತಾಸುಗಳ ಅಹೋರಾತ್ರಿ ಸುದೀರ್ಘ ಚರ್ಚೆಯ ನಂತರ ಸೋಲುಂಟಾಗಿದೆ. ನಿಲುವಳಿಯ ಪರವಾಗಿ 182 ಮತಗಳು ಬಿದ್ದಿದ್ದರೆ, ನಿಲುವಳಿಯ ವಿರುದ್ಧ 276 ಮತಗಳು ಬಿದ್ದಿವೆ. 8 ಮಂತ್ರಿಗಳು ತಟಸ್ಥವಾಗಿದ್ದು, ತೆಲುಗುದೇಶಂನ 28 ಸದಸ್ಯರು ಮತದಾನ ಬಹಿಷ್ಕರಿಸಿದ್ದಾರೆ.

ಈ ರೀತಿಯಾಗಿ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತನ್ನ ವಿರುದ್ಧ ಮಂಡಿಸಲಾಗಿದ್ದ 5 ಪ್ರಮುಖ ಖಂಡನಾ ನಿರ್ಣಯಗಳನ್ನು ಸೋಲಿಸಿದೆ. ಜನಸಾಮಾನ್ಯರನ್ನು ವಂಚಿಸುವ ಯುಟಿಐ ಹಗರಣ, ಸಾರ್ವಜನಿಕ ಆಸ್ತಿ ಬಾಲ್ಕೊ ಮಾರಾಟ ವಿಷಯ, ಇಂತಹವರಲ್ಲಿ ಗಣಿತದ ಲೆಕ್ಕಾಚಾರದಲ್ಲಿ ಸರ್ಕಾರ ಗೆದ್ದಿತು, ಜನತೆಗಂತೂ ದ್ರೋಹ ಬಗೆಯಿತು. ಅಂತೆಯೇ ಬಾಬ್ರಿಮಸೀದಿ ಧ್ವಂಸ ಪ್ರಕರಣ ಹಾಗೂ ಗುಜರಾತ್ ಜನಹತ್ಯೆ, ಅಲ್ಪಸಂಖ್ಯಾತರ ಮಾರಣಹೋಮ ವಿಷಯ ಕುರಿತ ನಿಲುವಳಿಯ ವಿರುದ್ಧ ಗಣಿತದ ಲೆಕ್ಕಾಚಾರದ ಗೆಲುವು ಸಾಧಿಸಿದ್ದರೂ ನೈತಿಕ ಸೋಲನ್ನು ಅನುಭವಿಸಿತು. ಆದರೆ ಹಿಂದೂಗಳ ರಕ್ಷಕರೆನ್ನುವ ಇವರು ಅಮರನಾಥ್ ಯಾತ್ರಿಗಳ ಹತ್ಯೆಗಳ ಕುರಿತು ತನಿಖಾ ಆಯೋಗ ರಚಿಸಬೇಕೆಂಬ ನಿಲುವಳಿಯನ್ನು ಸೋಲಿಸಿತೆಂದರೆ, ಈ ಸಂಘ ಪರಿವಾರದ ಪ್ರತೀಕವಾದ ಈ ಬಿಜೆಪಿ ನೇತೃತ್ವದ ಸರ್ಕಾರ ಯಾವ ಜನಾಂಗದ ರಕ್ಷಣೆಗೂ ಬಾರದೆಂಬುದೇ ಆಗಿದೆ.

ಸಂಘ ಪರಿವಾರದ ಫ್ಯಾಸಿಸ್ಟರ ಉದ್ದೇಶ ಜೀವ ರಕ್ಷಣೆಯಲ್ಲಾ, ಬದಲಿಗೆ ಜೀವ ಭಕ್ಷಣೆಯಾಗಿದೆ. ಯಾವ ಜನಾಂಗವನ್ನು ರಕ್ಷಿಸಲಾರರು. ಈ ಫ್ಯಾಸಿಸ್ಟ್ ಸಂಘ



ಜಾರ್ಜ್ ನಿರ್ಲಜ್ಜದ ಮಾತುಗಳು

ಗುಜರಾತ್ ಹತ್ಯಾಕಾಂಡ - ನೀಚತನದ ಸಮರ್ಥನೆ

"ಏನು ಕತೆ ಕಟ್ಟುತ್ತಿದ್ದೀರಿ? ಮಹಿಳೆಯ ಗರ್ಭ ಸೀಳಿ ಮಗುವನ್ನು ಹೊರತೆಗೆದು ಚೆಂಡಾಡಿ, ಬೆಂಕಿಗೆ ಹಾಕಿದ್ದು ಇದೇನೂ ಮೊದಲ ಬಾರಿ ಏನು? ತಾಯಿಯ ಮುಂದೆ ಮಗಳ ಮಾನಭಂಗ ಮಾಡಿದ್ದು? ತನ್ನ ಹೆತ್ತ ಹಸುಕಂದಮ್ಮಗಳ ಮುಂದೆ ತಾಯಿಯ ಮನಭಂಗ ಮಾಡಿದ್ದು, ಅನಂತರ ಬೆಂಕಿಗೆ ಎಸೆದಿದ್ದು ಮೊದಲಬಾರಿಯೇ? ಹಿಂದೆಂದೂ ಈ ರೀತಿ ನಡೆದಿಲ್ಲವೇ? ಇಂತಹ ಘಟನೆಗಳು 50 ವರ್ಷದಿಂದಲೂ ನಡೆಯುತ್ತಾ ಬಂದಿವೆ!!" ಈ ಮಾತುಗಳನ್ನು ಲೋಕಸಭೆಯಲ್ಲಿ 'ಗುಜರಾತ್ ಜನಹತ್ಯೆ' ಕುರಿತು ನಿಯಮ 184 ರಡಿ ನಿಲುವಳಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ರಾಷ್ಟ್ರದ ರಕ್ಷಣಾ ಸಚಿವರಾದ ಮಾನ್ಯ ಜಾರ್ಜ್ ಫರ್ನಾಂಡಿಸ್ ಆಡಿದ ಮಾತುಗಳಿವು.

ಅತೀ ನಿಷ್ಠ

ಎಂತಹ ಭಂಡನಾದರೂ, ಪೈಶಾಚಿಕ, ವಿಕೃತ ಮನಸ್ಸಿನವನಾದರೂ ಸಹ ಒಬ್ಬ ಗರ್ಭವತಿಯ ಗರ್ಭಸೀಳಿ, ಮಗು ಹೊರತೆಗೆದು ಚೆಂಡಾಡುವುದನ್ನಾಗಲೀ, ಅಥವಾ ಹೆಣ್ಣಿನ ಮಾನಭಂಗವನ್ನಾಗಲೀ ಮೇಲೆ ಹೇಳಿದ ರೀತಿ ಸಲೀಸಾಗಿ ಪ್ರತಿಪಾದಿಸಲಾರ. ಆದರೆ ರಾಷ್ಟ್ರದ ಪರಮ ವೇದಿಕೆಯಾದ ಸಂಸತ್ತಿನಲ್ಲಿ ಜವಾಬ್ದಾರಿಯುತ ಸಚಿವ ಸ್ಥಾನ ಅಲಂಕರಿಸಿರುವ ವ್ಯಕ್ತಿಯೋರ್ವನಾಡುತ್ತಾನೆಂದರೆ ಹೇಗಿರಬೇಕು ಆತನ ಮನಸ್ಸು. ಎಷ್ಟು ನಿರ್ಲಜ್ಜವಾಗಿ, ಗೋಸುಂಬೆತನದಿಂದ ಕೂಡಿರಬೇಕೆಂದು ಊಹಿಸಲು ಅಸಾಧ್ಯವೇ ಸರಿ.

ರಕ್ಷಣಾ ಸಚಿವರಾಗಿರುವ ಕಾರಣ, ವಾದಿಸಲು ಅಸಾಧ್ಯವಾದುದನ್ನು ವಾದಿಸಬೇಕು-ರಕ್ಷಿಸಬೇಕು ಎಂದಿರಬೇಕು ಅವರು ಈ ರೀತಿ ಮಾತನಾಡಿರುವುದು. 'ರಾಜನಿಗಿಂತ ತಾನೇ ಅತಿ ನಿಷ್ಠ' ನೆಂದು ಪ್ರದರ್ಶಿಸಲು ಸಾಧಿಸಲು ಹೊರಟಂತಿದೆ ಜಾರ್ಜ್‌ರ ಈ ನುಡಿಗಳು.

ನೀಚತನದ ಪರಮಾವಧಿ

ಹಿಂದೆಯೂ ಈ ರೀತಿ ನಡೆದಿರುವ ಕಾರಣ ಇದೇನೂ ದೊಡ್ಡದೇ? ಎಂಬ ಅವರ ವಾದದ ಅಂತಸತ್ವ ಹೇಗಿದೆ ನೋಡಿ. ಮಾನವ ಇತಿಹಾಸಕ್ಕೆ ನಾಗರೀಕತೆ ಅರಿವಿಲ್ಲದಿದ್ದಾಗ 'ನರಹತ್ಯೆ-ನರಬಲಿ' ನಡೆಯುತ್ತಿದ್ದವೆಂಬ ಕಾರಣಕ್ಕೆ ಈಗೇನಾದರೂ 'ನರಬಲಿ' ನಡೆದರೆ, ಅದನ್ನು ಸರಿ ಎಂದು ಪ್ರತಿಪಾದಿಸಬಹುದಲ್ಲವೇ? ಮಾನವ ನಾಗರೀಕತೆಯ ಪ್ರಾಥಮಿಕ ತಿಳುವಳಿಕೆ ಎಂದರೆ, ಹಿಂದೆ ನಡೆದ ಅಪರಾಧಗಳನ್ನು ಮುಂದೆ ಆಗದಂತೆ - ನಡೆಯದಂತೆ ನೋಡಿಕೊಳ್ಳಲು ಕಲಿಯಬೇಕಾದ, ಕಲಿಯುವ ಪ್ರಬುದ್ಧತೆಯನ್ನು ತೋರುವುದು. ಆದರೆ ಈ ಕಾವಿ ಪಡೆಗಳಿಗೆ ಮತ್ತು ಅವರ ಫ್ಯಾಸಿಸ್ಟ್ ಪ್ರತಿಪಾದಕರಿಗೆ ಯಾರು ನಾಗರೀಕತೆಯ ಹಿಂದಕ್ಕೆ ಒಯ್ಯ ಬಯಸುತ್ತಾರೋ ಅವರಿಗೆ ಇದು ಅನ್ವಯಿಸದು ಬಿಡಿ. ರಾಜಕೀಯ ಸಮಯಸಾಧಕತನ ತನ್ನ ತುತ್ತ ತುದಿಯನ್ನು ಈ ಫರ್ನಾಂಡೀಸ್‌ರ ನಾಯಕತ್ವದಲ್ಲಿ ಮುಟ್ಟಿದೆ. ಅಧಿಕಾರದಲ್ಲಿ ಉಳಿಯಲು ಇವರಿಗೆ ಮಾನವ ಜೀವ ಎಂಬುದು ತೃಣಮಾತ್ರ. ಅಗತ್ಯ ಬಿದ್ದಲ್ಲಿ ಅಧಿಕಾರದಲ್ಲಿ ಉಳಿಯಲು ತಾಯಂದಿರ (ಸಂಘ ಪರಿವಾರದ ಭಾಷೆಯಲ್ಲಿ ಮಾತೆಯರು) ಮಾನಭಂಗ, ಸಹೋದರಿಯರನ್ನು ಕತ್ತರಿಸಿ ಹಾಕುವುದು, ಇಡೀ ಕುಟುಂಬಗಳನ್ನೇ ದಹಿಸಿಹಾಕುವುದು, ಈ ಎಲ್ಲವನ್ನು ಪ್ರತಿಪಾದನೆ ಮಾಡಿಕೊಳ್ಳಬಹುದೆಂಬ ಪ್ರತೀಕವಾಗಿವೆ ಈ ಮಾತುಗಳು.

ಇಂತಹ ನಿರ್ಲಜ್ಜ - ಗೋಸುಂಬೆತನದ ಮಾತುಗಳನ್ನು ಆಡುವುದರಲ್ಲಿ ಜಾರ್ಜ್‌ಗೆ ಜಾರ್ಜ್ ಸರಿಸಾಟಿ ಎಂಬುದನ್ನು ಪ್ರದರ್ಶಿಸಿದ್ದಾರೆ. ಜೀವ ಪರ ಜನರೆಲ್ಲ ಈ ನಾಚಿಕೆಗೇಡಿ ಮಾತುಗಳನ್ನು ಧಿಕ್ಕರಿಸಲೇಬೇಕು.

ಬ್ರಿಟನ್‌ನಲ್ಲಿ ಒಂದು ನಂಬಿಕೆ ಇದೆ. ಮೂರನೇ ಎಡ್ವರ್ಡ್ ದೊರೆಯ ಕಾಲದಿಂದಲೂ ಒಬ್ಬ ಸಂತ ಬ್ರಿಟನ್‌ನಿನ ರಕ್ಷಕನೆಂದು ಭಾವಿಸಲಾಗುತ್ತಿದೆ. ಆ ಸಂತನ ಹೆಸರೇ ಜಾರ್ಜ್- ಸಂತ ಜಾರ್ಜ್. ಅಂತಹ ಒಂದು ರಾಷ್ಟ್ರದ ರಕ್ಷಕನೆಂಬ ನಂಬಿಕೆಗೆ ಅರ್ಹನಾಗಿರುವ ಸಂತ ಜಾರ್ಜ್‌ರ ಹೆಸರುಳ್ಳ-ಈ ಜಾರ್ಜ್ ಯಾರ ರಕ್ಷಣೆಗೆ ನಿಂತಿದ್ದಾರೆ. ಜನತೆಯ, ರಾಷ್ಟ್ರದ, ಜಾತ್ಯಾತೀತೆಯ, ಮಹಿಳೆಯರ ದುರ್ಬಲರ ರಕ್ಷಣೆಗಂತೂ ಅಲ್ಲ ಸಂಘ ಪರಿವಾರದ ಫ್ಯಾಸಿಸ್ಟ್ ಅಜೆಂಡಾದ ರಕ್ಷಣೆಗೆ ನಿಂತಿದ್ದಾರೆ...

ಬಿಟಿ ಹತ್ತಿ ಬಿ

ಬಿಟಿ ಹತ್ತಿ ಈಗ ಸುದ್ದಿಯಲ್ಲಿದೆ. ಜೆನೆಟಿಕ್ ಎಂಜಿನಿಯರಿಂಗ್ ಅ
ಬಿಟಿ ಹತ್ತಿ ಬೆಳೆಯಲು ಅನುಮೋದನೆ ನೀಡಿದ್ದು ಈ ಬಗ್ಗೆ ಈಗ

ಜಿ.ಎಸ್.ಮಣಿ

ಏನಿದು ಬಿಟಿ ಹತ್ತಿ? ಹೊಸತರಹದ ಹೆಸರಲ್ಲವೇ? ಬಿಟಿ ಹತ್ತಿ ಎಂದರೆ ಜೆನೆಟಿಕ್ ಎಂಜಿನಿಯರಿಂಗ್ ಮೂಲಕ ಅಭಿವೃದ್ಧಿ ಪಡಿಸಿದ ಹತ್ತಿ ತಳಿ. ಇದರ ವಿಶೇಷತೆ ಏನು? ಯಾಕೆ ಈ ವಿವಾದ?

ಜೆನಟಿಕ್ ಎಂಜಿನಿಯರಿಂಗ್ ಎಂದರೇನು? ಎಂಬ ಪ್ರಶ್ನೆಯನ್ನೇ ಹಲವರು ಕೇಳಿಯಾರು. ಜೆನೆಟಿಕ್ ಎಂಜಿನಿಯರಿಂಗ್ ಎಂದರೆ ಜೀವಿಗಳಲ್ಲಿನ ವಂಶವಾಹಿನಿಗಳಲ್ಲಿ ಕೃತ್ರಿಮ ವಿಧಾನಗಳಿಂದ ಮಾರ್ಪಾಡು ಮಾಡುವುದು. ಉದಾಹರಣೆಗೆ ಒಂದು ಬೆಳೆಗೆ ಒಂದು ತರಹದ ಕೀಟ ಹೆಚ್ಚಾಗಿ ಬಾಧಿಸುತ್ತದೆಂದುಕೊಳ್ಳಿ, ಜೆನೆಟಿಕ್ ಇಂಜಿನಿಯರಿಂಗ್ ಮೂಲಕ ಆ ಬೆಳೆಯ ಗಿಡದಲ್ಲಿ ಕೀಟಕ್ಕೆ ವಿಷವಾಗುವ ವಸ್ತು ಉತ್ಪಾದನೆಯಾಗುವಂತೆ ಮಾಡಿದರೆ? ಕೀಟ ಬಾಧೆ ತಪ್ಪುತ್ತದೆ/ ಹತೋಟಿಯಲ್ಲಿರುತ್ತದಲ್ಲವೇ?

ಬಿಟಿ ಹತ್ತಿಯಲ್ಲಿ ಇಂತಹದ್ದನ್ನೇ ಮಾಡಿರುವುದು. ಹತ್ತಿಗೆ ಕಾಯಿಕೊರೆಯುವ (Bollworm) ಹುಳದ ಬಾಧೆ ಬಹಳ. ಈ ಕೀಟದ ಬಾಧೆಯಿಂದ ಬೆಳೆ ಬಹುಪಾಲು ಹಾಳಾಗುತ್ತದೆ. ಈ ನಷ್ಟ ತಡೆಯಲು ಔಷಧಿ ಸಿಂಪರಣೆಯನ್ನು ಹಲವಾರು ಬಾರಿ ಮಾಡಬೇಕಾಗುತ್ತದೆ. ಇಷ್ಟೊಂದು ಔಷಧಿ ಸಿಂಪರಣೆಯೆಂದರೆ ಬೆಳೆವ ಖರ್ಚು ಹೆಚ್ಚಾಗುತ್ತದೆ. ಬೆಳೆವ ಖರ್ಚು ಹೆಚ್ಚಾದರೆ ರೈತರ ಲಾಭ ಕಡಿಮೆಯಾಗುತ್ತದೆ/ ಹಾನಿಯೂ ಆಗಬಹುದು.

ಮಣ್ಣಿನಲ್ಲಿರುವ ಬೆಸಿಲ್ಲಸ್ ತುರಿಂಜೆನ್ಸಿಸ್ ಎಂಬ ಸೂಕ್ಷ್ಮಾಣು ಜೀವಿ ಒಂದು ತರಹದ ವಿಷವನ್ನು ಉತ್ಪಾದಿಸುತ್ತದೆ. ಈ ವಿಷ ಹತ್ತಿಕಾಯಿಗೆ ಬೀಳುವ ಕೀಟವನ್ನು ದೂರವಿಡಬಲ್ಲದು. ಎಲ್ಲಿಂದೆಲ್ಲಿಗೆ ಸಂಬಂಧ ಎಂದಿರಾ ? ಜೆನೆಟಿಕ್ ಎಂಜಿನಿಯರಿಂಗ್ ಇಂತಹ ಸಂಬಂಧವನ್ನೇ ಸೃಷ್ಟಿಸುವುದು.

ಬೆಸಿಲ್ಲಸ್ ತುರಿಂಜೆನ್ಸಿಸ್‌ನ ವಿಷ ಉತ್ಪಾದಿಸುವ ಗುಣಕ್ಕೆ ಕಾರಣವಾದ ಜೀನನ್ನು ಹತ್ತಿಯ ತಳಿಯೊಳಗೆ ತೂರಿಸಿಬಿಟ್ಟರೆ ಹತ್ತಿ ಗಿಡವು ಸಹ ಈ ವಿಷವನ್ನು ಉತ್ಪಾದಿಸುತ್ತದೆ. ಹತ್ತಿಕಾಯಿ ಕೀಟ ದೂರ. ಇದನ್ನೇ ಬಿಟಿ ಹತ್ತಿಯಲ್ಲಿ ಮಾಡಿರುವುದು. ಬಿಟಿ ಎಂಬ ಹೆಸರೂ ಸಹ ಬೆಸಿಲ್ಲಸ್ ತುರಿಂಜೆನ್ಸಿಸ್ (Bacillus Thuringensis) ನಿಂದಲೇ ಬಂದಿದ್ದು.

ಬಿಟಿ ಹತ್ತಿಯನ್ನು ಬೇರೆ ದೇಶಗಳಲ್ಲಿ ಬೆಳೆಯುವುದಿಲ್ಲವೇ? ಒಂದು ವರದಿಯ ಪ್ರಕಾರ ಭಾರತ ಸೇರಿ ಈಗ 8 ದೇಶಗಳಲ್ಲಿ ಬಿಟಿ ಹತ್ತಿಯನ್ನು ಬೆಳೆಯಲಾಗುತ್ತಿದೆ. ಬಿಟಿ ಹತ್ತಿ ಬೆಳೆವ ಇತರ ದೇಶಗಳೆಂದರೆ ಅಮೆರಿಕಾ, ಆಸ್ಟ್ರೇಲಿಯಾ, ಇಂಡೋನೇಶ್ಯಾ ಮತ್ತು ಚೀನಾ.

ಜೆನೆಟಿಕ್ ಎಂಜಿನಿಯರಿಂಗ್ ಮಾಡಿದ ಬೇರೆ ಬೆಳೆಗಳೂ ಇವೆ. ಉದಾಹರಣೆಗೆ ಸೋಯಾ ಅವರೆ ಇಂತಹ ಒಂದು ಬೆಳೆ. ಮೆಕ್ಕೆಜೋಳದಲ್ಲೂ ಇಂತಹ ತಳಿಗಳು ಇವೆ. ಇಸವಿ 2001 ರ ವೇಳೆಗೆ 52.6 ದಶಲಕ್ಷ ಹೆಕ್ಟೇರುಗಳಲ್ಲಿ ಜೆನೆಟಿಕ್ ಮಾರ್ಪಾಡು ಮಾಡಿದ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಭಾರತದಲ್ಲಿ ಈ ಜೆನೆಟಿಕ್ ಮಾರ್ಪಾಡು ಮಾಡಿದ ಹತ್ತಿಯ ತಳಿಯನ್ನು ಅಭಿವೃದ್ಧಿಪಡಿಸಿದ್ದು ಮಹಿಕೊ ಅಂದರೆ ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಕಂಪನಿ ಲಿಮಿಟೆಡ್. ಇದು ಮುಂಬೈಯಲ್ಲಿರುವ ಕಂಪನಿ. ತಂತ್ರಜ್ಞಾನವನ್ನು ಈ ಕಂಪನಿ ಅಮೆರಿಕದ ಬಹುರಾಷ್ಟ್ರೀಯ ಕಂಪನಿಯಾದ ಮಾನ್ಸಂಟೋ ಇನ್ಕ್‌ನಿಂದ ಪಡೆದಿದೆ.

ಕಳೆದ ವರ್ಷ ಗುಜರಾತಿನಲ್ಲಿ 4,500 ಹೆಕ್ಟೇರು ಪ್ರದೇಶದಲ್ಲಿ ಕಾನೂನಿಗೆ ವಿರುದ್ಧವಾಗಿ ಈ ಬಿಟಿ ಹತ್ತಿಯನ್ನು ಬೆಳೆಯಲಾಯಿತು. ಹಾಗೆಯೇ ಹೈದರಾಬಾದಿನ ನವಭಾರತ ಸೀಡ್ಸ್ ಕಂಪನಿ ಆಂಧ್ರ ಪ್ರದೇಶದ ನಂದ್ಯಾಲ ಜಿಲ್ಲೆಯಲ್ಲೂ ಹಲವು ರೈತರಿಗೆ ಬಿಟಿ ಹತ್ತಿ ಬೀಜಗಳನ್ನು ಮಾರಿತ್ತು. ಇದು ಗೊತ್ತಾಗುವಷ್ಟರಲ್ಲಿ (ಬಹುಶಃ ಮಾಹಿಕೊ ಕಂಪನಿ ದೂರು ನೀಡಿದ ನಂತರ) ಹತ್ತಿ ಬೆಳೆ ಕಟಾವಿಗೆ ಬಂದಿತ್ತು.

ಜೆನೆಟಿಕ್ ಎಂಜಿನಿಯರಿಂಗ್ ಅಪ್ರೂವಲ್ ಕಮಿಟಿ (ಜೀಇಎಸಿ) ಮೊದಲು ಗುಜರಾತಿನ ಬಿಟಿ ಹತ್ತಿ ಬೆಳೆಯನ್ನು ಪೂರ್ತಿಯಾಗಿ ಸುಟ್ಟುಹಾಕುವ ವ್ಯವಸ್ಥೆ ಮಾಡುವಂತೆ ಗುಜರಾತಿನ ರಾಜ್ಯ ಜೈವಿಕ ತಂತ್ರಜ್ಞಾನ ಸಂಯೋಜನಾ ಸಮಿತಿಗೆ ಆಜ್ಞೆ ಮಾಡಿತು. ಆನಂತರ ಈ ಬಿಟಿ ಹತ್ತಿ ಬೆಳೆದ ರೈತರ ಒತ್ತಡದಿಂದಾಗಿ ಅದು ಈ ಹತ್ತಿಯನ್ನು ಸೂಕ್ತ ಬೆಲೆ ನೀಡಿ ಕೊಂಡುಕೊಳ್ಳುವಂತೆ ಹೇಳಿತು.

ಮಾಧ್ಯಮಗಳ ವರದಿಗಳ ಪ್ರಕಾರ ಆಂಧ್ರ ಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ಬಿಟಿ ಹತ್ತಿಯ ಬೀಜಗಳು ಮಾರಾಟಕ್ಕೆ ಲಭ್ಯವಿದೆ. ಇದಲ್ಲದೆ ಈಗಾಗಲೇ ಬೆಳೆದಿರುವ ಬೆಳೆಯ ಬೀಜಗಳು ಸಹ ರೈತರ ಬಳಿ ಉಪಯೋಗಕ್ಕೆ ಲಭ್ಯವಿದೆ.

ಜಿಇಎಸಿಯ ಅನುಮೋದನೆ ಮೂರು ವರ್ಷಗಳ ಸೀಮಿತ ಅವಧಿಗೆ ಮಾತ್ರ ಲಭ್ಯವಿದೆ. ಅನಂತರದಲ್ಲಿ ಪುನರ್ವಿಮರ್ಶೆ ಮಾಡಲಾಗುವುದೆಂದು ಹೇಳಲಾಗಿದೆ. ಮಹಿಕೊ ಕಂಪನಿ ಹಲವು ಷರತ್ತುಗಳಿಗೂ



ಷರತ್ತುಗಳನ್ನು ಇನ್ನೂ ಪೂರ್ಣಗೊಳಿಸಬೇಕಾಗಿದೆ. ಸಮಿತಿಯಲ್ಲಿ ಒಮ್ಮತವಿಲ್ಲದೇ ಇರುವುದರಿಂದ ಈ ಷರತ್ತುಗಳು ಅಪೂರ್ಣವಾಗಿವೆ. ಇದು ಏನೇ ಇರಲಿ ನವಭಾರತ ಸೀಡ್ ಕಂಪನಿಯ ಉದಾಹರಣೆ ತೆಗೆದುಕೊಂಡರೆ ಷರತ್ತುಗಳನ್ನು ಜಾರಿಗೆ ತರುವುದು ಕಷ್ಟಕರ ಎಂಬುದು ಗೊತ್ತಾಗುತ್ತದೆ.

ವಿರೋಧ ಬೇಕೇ?

ಮಾಹಿಕೊ ತಾನು ಬಿಟಿ ವಿಷವನ್ನು ಒಳತೂರಿಸಿ ಅಭಿವೃದ್ಧಿ ಪಡಿಸಿದ ಆರು ತಳಿಗಳಲ್ಲಿ ನಾಲ್ಕು ತಳಿಗಳಿಗೆ ಅನುಮೋದನೆ ಕೇಳಿತ್ತು. ಆದರೆ ಕೊನೆಯದಾಗಿ ಮೂರೇ ತಳಿಗಳಿಗೆ ಅನುಮತಿ ನೀಡಲಾಗಿದೆ. ಅವುಗಳೆಂದರೆ **ಮೆಕ್-12 ಬಿಟಿ, 162 ಬಿಟಿ ಮತ್ತು 184 ಬಿಟಿ** (ಮೆಕ್ ಅಂದರೆ MECH- ಮಾಹಿಕೊ ಅರ್ಲಿ ಕಾಟನ್ ಹೈಬ್ರಿಡ್)

ಈ ಹತ್ತಿ ತಳಿಗಳು ಸುಧಾರಿತ ತಳಿಗಳಾಗಿ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ನೀಡುವಂತಹವುಗಳಾದರೆ ಇವುಗಳ ಬಗ್ಗೆ ವಿರೋಧವೇಕೆ ಎಂಬುದು ಪ್ರಶ್ನೆ. ವಿರೋಧಕ್ಕೆ ಕಾರಣಗಳಿವೆ.

ಮೊದಲನೆಯದಾಗಿ ಇಂತಹ ಬೆಳೆಗಳಿಂದಾಗಿ ಜೆನೆಟಿಕ್ ಮಾಲಿನ್ಯ ಉಂಟಾಗುತ್ತದೆ ಎಂಬುದು ಒಂದು ವಾದ.

ಜೈವಿಕ ತಂತ್ರಜ್ಞಾನ ಅತ್ಯಂತ ಪರಿಣಾಮಕಾರಿಯಾಗಿರಬಹುದು. ಆದರೆ ಜಗತ್ತಿನಾದ್ಯಂತ ಈ ತಂತ್ರಜ್ಞಾನದ ಬಳಕೆಯಿಂದಾಗುವ ಅಪಾಯ ಸಂಭವಗಳ ಅಂದಾಜು ಮಾಡುವ ವ್ಯವಸ್ಥೆ ಇಲ್ಲ. ಈ ತಂತ್ರಜ್ಞಾನ ದುಬಾರಿ ತಂತ್ರಜ್ಞಾನವಾದ್ದರಿಂದ ಇದು ಬಹುರಾಷ್ಟ್ರೀಯ ಕಂಪನಿಗಳ ಕೈಯಲ್ಲೇ ಇದೆ. ಬಹುರಾಷ್ಟ್ರೀಯ ಕಂಪನಿಗಳು ಎಂತಹ ಲಾಭಬಡುಕರು ಮತ್ತು ಅವು ಜನರ ವಿರುದ್ಧ ಎಂತಹ ಧೋರಣೆ ತಳೆಯಬಲ್ಲವು ಎಂಬುದಂತೂ ಎಲ್ಲರಿಗೂ ಗೊತ್ತಿರುವ ವಿಷಯ.

ಈ ಕೆಳಗಿನ ಉದಾಹರಣೆ ನೋಡಿ, ಅವೆಂತಿಸ್ ಎಂಬ ಕಂಪನಿ ಜೆನೆಟಿಕ್ ಎಂಜಿನಿಯರಿಂಗ್ ಮಾಡಿದ ಮೆಕ್ಕೆ ಜೋಳವನ್ನು ಮಾರಾಟ ಮಾಡುತ್ತಿತ್ತು. ಈ ಮೆಕ್ಕೆ ಜೋಳ ಮನುಷ್ಯರಲ್ಲಿ ಬಹಳ ಗಂಭೀರವಾದ ಆರೋಗ್ಯದ ಸಮಸ್ಯೆಗಳನ್ನು ಉಂಟು ಮಾಡುವುದು ಈಗ ಗೊತ್ತಾಗಿದೆ (ಅಂದರೆ ಜನರ ಆರೋಗ್ಯ ಹಾಳುಗೆಡವುತ್ತದೆ)

ಅಮೆರಿಕದ ಉನ್ನತ ಸಮಿತಿಯೊಂದು ಈ ಬೀಜಗಳನ್ನು ಹಿಂತೆಗೆದುಕೊಳ್ಳಲು ಆಜ್ಞೆ ನೀಡಿದೆ. ಅವೆಂತಿಸ್ ಕಂಪನಿಯ ಪ್ರಕಾರ ಈ ದೀರ್ಘಕಾಲ ತೆಗೆದುಕೊಳ್ಳುತ್ತದಂತೆ. ಯಾಕೆಂದರೆ ಈಗಾಗಲೇ ಇದು ಆಹಾರ ಸರಪಳಿ (Food Chain)ಯಲ್ಲಿ ಸೇರಿ ಹೋಗಿದೆಯೆಂತೆ.

ಮೊನ್ಸಾಂಟೋ ಕಂಪನಿಯ ಬಿಟಿ ಹತ್ತಿಯಲ್ಲೂ ಸಹ ಹತ್ತಿಕಾಯಿ ಹುಳಕ್ಕೆ ಇರುವ ಪ್ರತಿರೋಧ ನಿರಂತರವಾಗಿರುವುದಿಲ್ಲ. ಈಗ **ಮಾನ್ಸಂಟೋ ಕಂಪನಿ** ಬಿಟಿ ಹತ್ತಿಯ ಜೊತೆಗೆ ಐದನೇ ಬೆಳೆ ಬೆಳೆವಾಗ ಬೇರೆ ತಳಿಯ ಹತ್ತಿಯನ್ನು ಶೇಕಡಾ 40 ರಷ್ಟು ರೆಫ್ಯೂಸ್ ಕ್ರಾಪ್ ಆಗಿ(ಅಂದರೆ ಕೀಟಗಳು ಪ್ರತಿರೋಧ ಬೆಳೆಸಿಕೊಳ್ಳದಂತೆ ತಡೆವ ಬೆಳೆ) ಬೆಳೆಯುವ ಶಿಫಾರಸ್ಸು ಮಾಡಿದೆ.

ಬಿಟಿ ಹತ್ತಿಯಲ್ಲಿ 'ಆಡ್' ಎಂಬ ಜೀನಿದೆ. ಈ ಜೀನು ಕ್ಷಯರೋಗದ ಚಿಕಿತ್ಸೆಗೆ ಬಳಸುವ ಸ್ಟ್ರೆಪ್ಟೋಮೈಸಿನ್ ಎಂಬ ಆಂಟಿಬಯೋಟಿಕ್‌ಗೆ ಪ್ರತಿರೋಧವುಂಟು ಮಾಡುತ್ತದಂತೆ!

ಬಹುರಾಷ್ಟ್ರೀಯ ಕಂಪನಿಗಳು ರೈತರಿಗೆ ನಿಜ ಹೇಳದೆ ಬೀಜ ಮತ್ತು ಕೃಷಿ ರಸಾಯನಿಕಗಳನ್ನು ಮಾರಬಲ್ಲವು. ಭಾರತದ ಶೇಕಡಾ 70 ರಷ್ಟು ಜನ ಕೃಷಿಯ ಮೇಲೆ ಅವಲಂಬಿಸಿರುವಾಗ ಇಂತಹ ಮಾರಾಟದಿಂದ ಹಲವು ದುಷ್ಪರಿಣಾಮಗಳು ಉಂಟಾಗುತ್ತವೆ. ಬೀಜಗಳನ್ನು ಜೆನೆಟಿಕ್ ದೃಷ್ಟಿಕೋನದಿಂದ ಸ್ವತಂತ್ರವಾಗಿ ಪರೀಕ್ಷಿಸುವ ವಿಧಾನಗಳೂ ವ್ಯವಸ್ಥೆಗಳೂ ನಮ್ಮಲ್ಲಿಂದು ಇಲ್ಲ. ಇಂತಹ

ಆಯ್ದ ಕ್ಷೇತ್ರಗಳಲ್ಲಿ 1999-2000 ...
ತೋ...
ಬಿಟಿ...

ವಿವರಗಳು	ಪ್ರಮಾಣ
ಬೀಜ	450 ಗ್ರಾಂ
ರಸಗೊಬ್ಬರಗಳು	5 ಮೂಟೆ
ಕೀಟನಾಶಗಳು	
I ಹೀರುವ ಕೀಟಗಳಿಗೆ ಸಿಂಪರಣೆಗಳು. ಪ್ರತಿ ಸಿಂಪರಣೆಗೆ ರೂ. 100 ರಂತೆ	4
II. ಹತ್ತಿಕಾಯಿ ಕೀಟಕ್ಕೆ ಸಿಂಪರಣೆಗಳು ಪ್ರತಿ ಸಿಂಪರಣೆಗೆ ರೂ. 300 ರಂತೆ	1
III. ಇಂತಹ ಸಿಂಪರಣೆ ಪ್ರತಿ ಸಿಂಪರಣೆಗೆ ರೂ. 50 ರಂತೆ	5
ಒಟ್ಟು ಕೀಟನಾಶಕಗಳಿಗಾಗಿ	950
ಇತರ ವೆಚ್ಚಗಳು	4160
ಒಟ್ಟು ಲಾಗುವಾಡು	8,760
ಇಳುವರಿ	ಎಕರೆಗೆ ಪ್ರಮಾಣ
ಹತ್ತಿ ಪ್ರತಿ ಕ್ವಿಂಟಾಲಿಗೆ ರೂ. 2200 ರಂತೆ	6.40
ಒಟ್ಟು ಇಳುವರಿ	
ಎಕರೆಗೆ ಲಾಭ	5,469

...ತ್ತಿದರೆ...

...ಕಮಿಟಿ(GEAC) ಭಾರತದಲ್ಲಿ ...ವಿವಾದವೆದ್ದಿದೆ. ಅದೇನದು?

...ಪರಿಣಾಮಕಾರಿ ವ್ಯವಸ್ಥೆಯೂ ನಮ್ಮಲ್ಲಿಲ್ಲ. ಹಾಗಿರುವಾಗ ಈ ಬೆಳೆಗಳನ್ನು ಬೆಳೆಯಲು ಅನುಮತಿ ನೀಡಿದರೆ ಅದರಿಂದ ದೇಶದ ಮೇಲೆ ಅತ್ಯಂತ ಹೆಚ್ಚು ದುಷ್ಪರಿಣಾಮವಾಗಲಿದೆ.

ಯುರೋಪಿನ ಈ ಉದಾಹರಣೆ ತೆಗೆದುಕೊಳ್ಳಿ. ಅಲ್ಲಿ ಸಕ್ಕರೆ ಬೀಟ್ರೂಟನ್ನು ಬೆಳೆಯುತ್ತಾರೆ. ಒಂದು ಹೈಬ್ರಿಡ್ ಬೀಟ್ರೂಟನ್ನು ಬೆಳೆವಾಗ ಅದರ ಜೊತೆಗೊಂದು ಕಾಡುತಳಿ ಸೇರಿಕೊಂಡಿತು. ಇದರಿಂದಾಗಿ ಈ ಬೀಟ್ರೂಟನ್ನು ಕಟಾವು ಮಾಡುವ ಯಂತ್ರಗಳಿಗೇ ಧಕ್ಕೆ ಆಯಿತಂತೆ.

ಈ ಉದಾಹರಣೆ ತೆಗೆದುಕೊಳ್ಳಿ ಟ್ರಿಪ್ಟೋಪನ್ ಎನ್ನುವುದು ಒಂದು ಅಮೈನೋ ಆಮ್ಲ. ಇದನ್ನು ಅಮೆರಿಕದಲ್ಲಿ ಆಹಾರ ಉದ್ದಿಮೆಗಳಲ್ಲಿ ಬಳಸಲಾಗುತ್ತಿತ್ತು. ಜಪಾನಿನ ಕಂಪನಿಯೊಂದು ಜೈವಿಕ ತಂತ್ರಜ್ಞಾನ ಬಳಸಿ ಇದನ್ನು ಉತ್ಪಾದಿಸಿ ಮಾರುತ್ತಿತ್ತು. ಈ ಆಮ್ಲದಲ್ಲಿ ಒಂದು ರೀತಿಯ ರೋಗ ಹರಡುವ ವಸ್ತು ಸೇರಿಕೊಂಡಿದೆಯೆಂದು ಗೊತ್ತಾಯಿತು. ಇದು ಗೊತ್ತಾದ ಕೂಡಲೇ ಉತ್ಪಾದನೆಯನ್ನೇ ನಿಲ್ಲಿಸುವುದು ಸಾಧ್ಯವಾಯಿತಂತೆ.

ಆದರೆ ಜೆನೆಟಿಕ್ ಎಂಜಿನಿಯರಿಂಗ್ ಮಾಡಿದ ಬೆಳೆ, ಸೂಕ್ಷ್ಮಾಣು ಜೀವಿ ಅಥವಾ ಪ್ರಾಣಿಗಳನ್ನು ಒಂದು ಸಾರಿ ವಾಣಿಜ್ಯ ಉತ್ಪಾದನೆಯಲ್ಲಿ ತೊಡಗಿಸಿದರೆ ಅದನ್ನು ಹಿಂದಕ್ಕೆಳೆದುಕೊಳ್ಳುವ ವ್ಯವಸ್ಥೆ ನಮ್ಮಲ್ಲಿಲ್ಲ. ವ್ಯವಸ್ಥೆಯನ್ನು ರೂಪಿಸಿದರೂ ಅದು ಪರಿಣಾಮಕಾರಿಯಾಗಿರುವುದಿಲ್ಲ.



ಬಯೋ ಟೆಕ್ನಾಲಜಿ ಪ್ರದರ್ಶನ

ಇಷ್ಟೊಂದು ಸಂಕೀರ್ಣತೆ ಇರುವುದರಿಂದ ಮತ್ತು ಪರಿಸ್ಥಿತಿಯ ಮೇಲೆ ಪೂರ್ಣ ಪ್ರಮಾಣದ ಹತೋಟಿ ಸಾಧ್ಯವಿಲ್ಲದಿರುವುದರಿಂದಲೇ ಈ ಬೆಳೆಯ ಬಗ್ಗೆ ಅತ್ಯಂತ ಹೆಚ್ಚಿನ ಕಾಳಜಿ ವಹಿಸುವ ಅಗತ್ಯವಿದೆ. ಈ ಹಂತದಲ್ಲಿ ಬಿಟಿ ಹತ್ತಿಯನ್ನು ವಿರೋಧಿಸುವುದಕ್ಕೂ ಅದೇ ಕಾರಣ. ಉತ್ತಮ ತಂತ್ರಜ್ಞಾನವನ್ನು ನಾವು ವಿರೋಧಿಸಬೇಕಾಗಿಲ್ಲ. ಆದರಿಂದ ಉತ್ಪಾದನೆ ಹೆಚ್ಚಿ ಜಗತ್ತಿನ ಜನತೆಗೆ ಅನುಕೂಲಗಳು ದೊರೆಯುತ್ತವೆ. ಆದರೆ ಈ ತಂತ್ರಜ್ಞಾನ ಅಪಾಯಕಾರಿಯಾಗುವುದನ್ನು ತಡೆಯುವಷ್ಟು ಹತೋಟಿ ನಮ್ಮಲ್ಲಿರಬೇಕು. ಆಗ ಮಾತ್ರ ಅಂತಹ ತಂತ್ರಜ್ಞಾನವನ್ನು ಬಳಕೆಗೆ ತರಬಹುದು.

ಮುಂದೆ ನೀಡಿರುವ ಕೋಷ್ಟಕವನ್ನು ನೋಡಿ. ಬಿಟಿ ಹತ್ತಿ ಮತ್ತು ಸಾಮಾನ್ಯ ಹತ್ತಿ ಬೆಳೆಯುವುದರಿಂದ ರೈತನಿಗೆ ಸಿಗುವ ಲಾಭವನ್ನು ಅದರಲ್ಲಿ ತೋರಿಸಲಾಗಿದೆ. ಬಿಟಿ ಹತ್ತಿ ಬೆಳೆಯುವುದು ಲಾಭದಾಯಕ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಆದರೆ ಈ ಲಾಭ ನಿರಂತರವಾಗಿರುವ ಭರವಸೆಯಿಲ್ಲ. ಈ ಲಾಭದ ಹಿಂದಿರುವ ಅಪಾಯಗಳೂ ಹಲವು. ಬೆಳೆಗಳಲ್ಲಿನ ವೈವಿಧ್ಯತೆಯನ್ನು ಪೂರ್ಣ ಹಾಳುಗೆಡಹುವ ಒಂದು ಅಪಾಯ ಬಹಳ ಸ್ಪಷ್ಟವಾಗಿ ಕಾಣುವಂತಹದ್ದು.

ಜೆನೆಟಿಕ್ ಎಂಜಿನಿಯರಿಂಗ್‌ನ್ನು ಹೈಬ್ರಿಡ್ ಅಥವಾ ಇತರ ತಳಿಗಳಲ್ಲಿ ಮಾಡಬಹುದು. ಹೈಬ್ರಿಡ್ ತಳಿಯ ವಿಶೇಷತೆಯೆಂದರೆ ರೈತ ತಾನು ಬೆಳೆದ ಬೆಳೆಯಿಂದ ಬೀಜವನ್ನು ಮುಂದಿನ ಬೆಳೆಗೆ ಉಪಯೋಗಿಸುವಂತಿಲ್ಲ. ಪ್ರತಿಸಾರಿ ಕಂಪನಿಯಿಂದಲೇ ಬೀಜವನ್ನು ಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಹತ್ತಿ ಬೀಜದ ಬೆಲೆಗಳು ಹತೋಟಿ ಮಾಡುವ ಈ ಬೀಜದ ಕಂಪನಿಗಳು ರೈತನ ಬದುಕಿನೊಂದಿಗೆ ಆಟವಾಡಬಲ್ಲವು.

ಆಕರ: ವಿವಿಧ ನಿಯತಕಾಲಿಕಗಳು/ ದಿನಪತ್ರಿಕೆಗಳು)

...001 ನೇ ಸಾಲಿನಲ್ಲಿ ಬಿಟಿ ಹತ್ತಿ ಬೆಳೆಯ (ಸರಾಸರಿ)

	ಬಿಟಿಯೇತರಹತ್ತಿ ಎಕರೆಗೆ	
...ಗಳಲ್ಲಿ	ಪ್ರಮಾಣ	ವೆಚ್ಚ ರೂಗಳಲ್ಲಿ
1500	450 ಗ್ರಾಮ	300
1200	5 ಮೂಟೆ	1200
400	4	400
300	4	1200
250	8	400
	1600	
	4160	
	9,760	
ಬೆಲೆ ...ಗಳಲ್ಲಿ	ಎಕರೆಗೆ ಪ್ರಮಾಣ	ಬೆಲೆ ರೂಗಳಲ್ಲಿ
		10410
4229	4.73	
4229	10,410	
	750	

ಬಿಟಿ ಹತ್ತಿ : ಮಂಜೂರಾತಿಯ ಮೊದಲು ಸಾರ್ವಜನಿಕ ಚರ್ಚೆ ಅಗತ್ಯ

ಅಮೆರಿಕಾದ ಬಹುರಾಷ್ಟ್ರೀಯ ಬೀಜ ಕಂಪನಿ ಮಾನ್ಸೆಂಟೋ ಪ್ರಚಾರಪಡಿಸುತ್ತಿರುವ ಬಿ.ಡಿ ಹತ್ತಿ ತಂತ್ರಜ್ಞಾನವನ್ನು ಇನ್ನೂ ಹಲವು ವಿಜ್ಞಾನಿಗಳು ಪ್ರಶ್ನಿಸುತ್ತಿರುವಾಗ ಅದಕ್ಕೆ ಭಾರತ ಸರ್ಕಾರ ಹಸಿರು ನಿಶಾನೆ ತೋರಿದೆ. ಈ ತಂತ್ರಜ್ಞಾನದ ಪರಿಣಾಮವೇನು ಎಂದು ಇನ್ನೂ ಸರಿಯಾಗಿ ತಿಳಿಯಲು ಸಾಧ್ಯವಾಗಿರದಿರುವಾಗ ಅದರ ವ್ಯಾಪಕ ಬಳಕೆ ಸರಿಯಲ್ಲ.

ಯುರೋಪು, ಜಪಾನ್, ಬ್ರೆಝಿಲ್ ಮತ್ತು ಇನ್ನೂ ಹಲವು ದೇಶಗಳಲ್ಲಿ ಇಂತಹ ಬೆಳೆಗಳ ಪ್ರಯೋಜನವನ್ನು ನಿಷೇಧಿಸಿರುವಾಗ ಅಥವಾ ಸೀಮಿತಗೊಳಿಸಲಾಗುವ ಭಾರತ ಮಾತ್ರ ಇದಕ್ಕೆ ತರಾತುರಿಯಿಂದ ಅವಕಾಶ ನೀಡಿದೆ. ಇಂಗ್ಲೆಂಡಿನಲ್ಲಿ ಮಾನ್ಸೆಂಟೋದ ಕ್ಯಾಂಟೀನಿನಲ್ಲಿಯೂ ಇಂತಹ ತಂತ್ರಜ್ಞಾನದ ಬೆಳೆಗಳಿಂದ ತಯಾರಿಸಿದ ಆಹಾರಗಳಿಗೆ ಅವಕಾಶ ನೀಡಿಲ್ಲ.

ಗುಣವಾಹಿಯನ್ನು ಬದಲಿಸಿ ಸಸ್ಯದ ತಳಿಗಳನ್ನು ಬೆಳೆಸುವ ತಂತ್ರಜ್ಞಾನದ ಬಗ್ಗೆಯಷ್ಟೇ ಸಂದೇಹವಿರುವುದಲ್ಲ. ಬಿ.ಟಿ. ಹತ್ತಿಗೆ ಅವಕಾಶ ನೀಡಿದರೆ ಇನ್ನೂ ಹಲವು ಪ್ರಶ್ನೆಗಳು ಏಳುತ್ತವೆ. ಒಂದೇ ಪ್ರದೇಶದಲ್ಲಿ ವಿಭಿನ್ನ ತಳಿಗಳನ್ನು ಬೆಳೆಯಲು ಇದರಲ್ಲಿ ಅವಕಾಶವಿರುವುದಿಲ್ಲ. ಇಂತಹ ಬೆಳೆ ಪದ್ಧತಿ ಕೀಟಗಳಿಂದ ಅಥವಾ ಬರದಂತಹ ಹವಾಮಾನ ಬದಲಾವಣೆಗಳಿಗೆ ಬಹಳ ಬೇಗ ತುತ್ತಾಗುವುದು ಅನುಭವಸಿದ್ಧ ಸಂಗತಿ. ಹಿಂದೆ ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿ ಇದು ಸಂಭವಿಸಿ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಗಿತ್ತು. ಬಿಟಿ ಹತ್ತಿಯಂತಹ ತಳಿಗಳು ಇನ್ನೂ ಸ್ಥಳೀಯ ತಳಿಗಳಂತೆ ಸ್ಥಳೀಯ ಕೀಟಗಳಿಗೆ ಪ್ರತಿರೋಧ ಬೆಳೆಸಿಕೊಂಡಿಲ್ಲ.

ಭಾರತದಲ್ಲಿ ಬಿಟಿ ಹತ್ತಿಯ ಅತಿ ದೊಡ್ಡ ಅಪಾಯವೆಂದರೆ ಈ ತಂತ್ರಜ್ಞಾನ ಮಾನ್ಸೆಂಟೋದಂತಹ ಬಹುರಾಷ್ಟ್ರೀಯ ಕಂಪನಿಗಳ ಹತೋಟಿಯಲ್ಲಿರುತ್ತದೆ. ಅಮೆರಿಕಾ ಬೀಜಗಳು, ಸಸ್ಯತಳಿಗಳು ಇತ್ಯಾದಿಗಳಿಗೆ ಬಲವಾದ ಪೇಟೆಂಟ್ ಬೇಕೆಂದು ವಾದಿಸುತ್ತಿದೆ. ಈ ಮೂಲಕ ಅಮೇರಿಕಾ ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳು ಇಡೀ ವಿಶ್ವದ ಕೃಷಿ ಉತ್ಪಾದನೆಯ ಮೇಲೆ ಹತೋಟಿ ಹೊಂದಬಯಸುತ್ತವೆ. ಇದು ಹಿಂದೆ ಎಪ್ಪತ್ತರ ದಶಕದ 'ಹಸಿರು ಕ್ರಾಂತಿ' ತಂತ್ರಜ್ಞಾನಗಲಿಂದ ಭಿನ್ನವಾದದ್ದು ಆಗ ಈ ತಂತ್ರಜ್ಞಾನಗಳ ಸಂಶೋಧನೆಗೆ ಸಾರ್ವಜನಿಕ ಹಣ ವ್ಯಯವಾಗುತ್ತಿತ್ತು. ಅದರಿಂದಾಗಿ ಆ ತಂತ್ರಜ್ಞಾನಗಳು ಸರ್ವರಿಗೂ ಲಭ್ಯವಾಗಿದ್ದವು. ಆದರೆ ಬಿ.ಟಿ ಹತ್ತಿ ಯಂತಹ ತಂತ್ರಜ್ಞಾನ ತದ್ವಿರುದ್ಧವಾದದ್ದು.

ಈ ಎಲ್ಲಾ ಕಾರಣಗಲಿಂದ ಬಿಟಿ ಹತ್ತಿಯನ್ನು ವಾಣಿಜ್ಯ ನೆಲೆಯಲ್ಲಿ ಬೆಳೆಯಲು ಮಂಜೂರಾತಿ ನೀಡಿರುವುದನ್ನು ಸರಕಾರ ಸದ್ಯಕ್ಕೆ ತಡೆಹಿಡಿಯಬೇಕು, ಈ ಪ್ರಶ್ನೆಯ ಎಲ್ಲಾ ಆಯಾಮಗಳ ಬಗ್ಗೆ ಸಾರ್ವಜನಿಕ ಚರ್ಚೆ ನಡೆದು, ಭಾರತ ಕೃಷಿ ಮತ್ತು ರೈತರಿಗೆ ರಕ್ಷಣೆಯ ಸೂಕ್ತ ವ್ಯವಸ್ಥೆ ಏರ್ಪಾಡುವವರೆಗೆ ಮಂಜೂರಾತಿ ನೀಡಬಾರದು ಮರು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಲೋಕಸಭಾ ಸ್ಪೀಕರ್ ಆಯ್ಕೆ

ಭಾರತೀಯ ಜನತಾ ಪಕ್ಷವು ಲೋಕ ಸಭೆಯ ಸ್ಪೀಕರ್ ಸ್ಥಾನಕ್ಕೆ ಶಿವಸೇನೆಗೆ ಸೇರಿದ ಶ್ರೀ ಮನೋಹರ ಜೋಷಿಯನ್ನು ನೇಮಿಸಿದೆ. ಶಿವಸೇನೆಯು ಭಾರತ ಗಣರಾಜ್ಯದ ಜಾತ್ಯಾತೀತ ತತ್ವಕ್ಕೆ ಸವಾಲು ಎಸೆದಿರುವ ಪಕ್ಷವಾಗಿದೆ. ಈ ಪಕ್ಷದ ಮುಖ್ಯಸ್ಥರನ್ನು ವಿಷಪೂರಿತ ಕೋಮುವಾದಿ ಪ್ರಚಾರ ನಡೆಸಿದ ಕಾರಣಕ್ಕಾಗಿ ಚುನಾವಣಾ ಆಯೋಗವು ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ನಿರಾಕರಿಸಿ ಅನರ್ಹಗೊಳಿಸಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆಯ ಅಸ್ಫೋಟಕಾರಿ ಕೋಮುವಾದಿ ದುಷ್ಕೃತ್ಯಗಳು ಅದರ ಗಂಭೀರ ದುಷ್ಪರಿಣಾಮ ಎಲ್ಲರಿಗೂ ತಿಳಿದದ್ದೆ ಆಗಿದೆ.

ಇದು ಒಬ್ಬ ವ್ಯಕ್ತಿಯ ಪ್ರಶ್ನೆಯಲ್ಲ. ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ವ್ಯವಸ್ಥಿತ ದಾಳಿ-ದಹನ ನಡೆಯುತ್ತಿರುವ ಬಗೆಗೆ ಇಡೀ ದೇಶವೇ ಆತಂಕಗೊಂಡಿರುವಾಗ ಲೋಕಸಭಾ ಸ್ಪೀಕರ್ ಪ್ರಶ್ನೆಯಲ್ಲಿ ಈ ಆಯ್ಕೆ ಆತಂಕಕಾರಿ ಸಂದೇಶಗಳನ್ನು ಕೊಡುತ್ತದೆ. ಮತ್ತು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ. ಇಷ್ಟು ಮಾತ್ರವಲ್ಲ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಒಂದು ಪ್ರಮುಖ ಸಂಸ್ಥೆಯಾದ ಪಾರ್ಲಿಮೆಂಟಿನ ವರ್ಚಸ್ಸನ್ನು ಕೆಡಿಸುತ್ತದೆ. ಬಿಜೆಪಿಯು ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತ ಮೌಲ್ಯಗಳನ್ನೂ ಧಿಕ್ಕರಿಸಿರುವಂತಹ ಈ ಪರಿಸ್ಥಿತಿಯಲ್ಲಿ ಎನ್.ಡಿ.ಎ.ದ ಪಾಲುದಾರ ಪಕ್ಷಗಳು ತಾವೂ ಸಹ ಈ ಅಪರಾಧದಲ್ಲಿ ಬಾಗಿಗಳೆಂದು ಸಿದ್ಧಗೊಳಿಸಿದೆ.



ವಿದ್ಯುತ್ ನೀತಿ ವಿರುದ್ಧ ರಾಜ್ಯಾದ್ಯಂತ ಚಿಮ್ಮಿದ ಹೋರಾಟಗಳು

ನಾಡಿನ ಜೀವನಾಡಿಗೆ ಶಾಕ್ ನೀಡಿ ಗರಬಡಿಸುವ ವಿದ್ಯುತ್ ನೀತಿಯ ವಿರುದ್ಧ ನಡೆದ ಸತತ ಜನಾಂದೋಲನದ ವರದಿಗಳು ಇಲ್ಲಿ.

ಶೇಕಡಾ 30-15 ರಷ್ಟು ವಿದ್ಯುತ್ ದರ ಹೆಚ್ಚಿಸಲು ಅನುಮತಿ ನೀಡಬೇಕೆಂದು ಕೆಪಿಟಿಸಿಎಲ್, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮುಂದೆ 8.2.2002 ರಂದು ಮನವಿ ಸಲ್ಲಿಸಿದಾಗಲೇ ದರ ಹೆಚ್ಚಾಗುತ್ತದೆ ಎಂದು ಕರ್ನಾಟಕದ ಜನತೆಗೆ ಮನವರಿಕೆಯಾಗಿತ್ತು. ಅಂತೆಯೇ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್



ಬೆಂಗಳೂರಿನಲ್ಲಿ....

ಪಕ್ಷವು ದರ ಏರಿಕೆಯ ವಿರುದ್ಧ ಖಾಸಗೀಕರಣ, ಸಾರ್ವತ್ರಿಕ ಮೀಟರೀಕರಣ, ಸಮರ್ಪಕ ವಿದ್ಯುತ್ ಪೂರೈಕೆ ಇತ್ಯಾದಿಗಳಿಗೆ ಒತ್ತಾಯಿಸಿ ಜನ ಜಾಗೃತಿಗೆ ಹಾಗೂ ಪ್ರತಿಭಟನೆಗೆ ಕರೆ ನೀಡಿತ್ತು. ಏಪ್ರಿಲ್ 22 ರಿಂದ ಮನೆ ಮನೆಗೆ ಪ್ರಚಾರ, ಕಾಲ್ನಡಿಗೆ ಜಾಥಾ, ವಾಹನ ಜಾಥಾ ಇತ್ಯಾದಿ ಮೂಲಕ ಪ್ರಚಾರ ನಡೆದಿತ್ತು. ತಮಗಾಗಿ ಹೋರಾಡುವ ಪಕ್ಷವೊಂದಿದೆ ಎಂದು ಖಾತ್ರಿಯಾದ ಜನರು ಹೋರಾಟಕ್ಕೆ ಬೆಂಬಲ ಸೂಚಿಸಿದುದು ಮಾತ್ರವಲ್ಲದೆ ಹಲವು ಪ್ರದೇಶಗಳಲ್ಲಿ ಹೋರಾಟ ನಿಧಿ ನೀಡಿದರು. ಚರ್ಚೆ ನಡೆಸಿದರು. (ಈ ಕುರಿತು ಬೆಂಗಳೂರಿನ ಹೋರಾಟದ ವಿವರವಾದ ವರದಿ ಮುಂದಿನ ಸಂಚಿಕೆಯಲ್ಲಿ) ಮೇ 8 ರಂದು ಕೆ.ಇ.ಆರ್.ಸಿ. ಶೇ 16.2 ರಷ್ಟು ದರ ಹೆಚ್ಚಳದ ಘೋಷಣೆ ಮಾಡುತ್ತಲೇ ಪ್ರತಿಭಟನೆಗೆ ಇನ್ನಷ್ಟು ಇಂಬು ದೊರೆಯಿತು. ಮೇ 10 ರಂದು ರಾಜ್ಯದ ಎಲ್ಲೆಡೆ ತೀವ್ರ ಪ್ರತಿಭಟನೆಗಳು ನಡೆದಿವೆ.

ಬೆಂಗಳೂರಿನಲ್ಲಿ ಕೆ.ಪಿ.ಟಿ.ಸಿ.ಎಲ್. ನ ಪ್ರಧಾನ ಕಛೇರಿ ಎದುರುಗಡೆ ಬೃಹತ್ ಪ್ರತಿಭಟನೆ ನಡೆದಿದೆ. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣ ರಾವ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಪ್ರಭಾ ಮೊದಲಾದವರು ಮಾತನಾಡಿದರು.

"ಮೇ 10 ರ ಪ್ರತಿಭಟನೆ ಪ್ರಥಮ ಹಂತದ್ದು. ಮುಂದಿನ ದಿನಗಳಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳು ಸೇರಿ ಜಂಟಿ ಹೋರಾಟವನ್ನು ನಡೆಸಬೇಕು. ಎಸ್.ಎಂ.ಕೃಷ್ಣ ಸರಕಾರ ಜನರ ಪ್ರತಿಭಟನೆಯನ್ನು ಗಮನದಲ್ಲಿರಿಸಿ ಬೆಲೆ ಏರಿಕೆಯನ್ನು ಸದ್ಯಕ್ಕೆ ಮುಂದಕ್ಕೆ ಹಾಕಿದೆ. ಆದರೆ ಹಿಂತೆಗೆದುಕೊಂಡಿಲ್ಲ. ಆದ್ದರಿಂದ ಕಾಂಗ್ರೆಸ್ ನೇತೃತ್ವದ ಕೃಷ್ಣ ಸರ್ಕಾರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು" ಎಂದು ಸೂರ್ಯನಾರಾಯಣ ರಾವ್ ಒತ್ತಿ ಹೇಳಿದರು. ಅವರು ನೀಡುವ ಮೂಲಕ ಬಿಜೆಪಿ ನಾಟಕವಾಡುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಖಾಸಗೀಕರಣ ನೀತಿಯ ಫಲವಾಗಿಯೇ ವಿದ್ಯುತ್ ಬೆಲೆ ಹೆಚ್ಚುತ್ತಿದೆ. ರಾಜ್ಯ ಕಾಂಗ್ರೆಸ್ ನೀತಿಯ ವಿರುದ್ಧ ಹೋರಾಡುವಾಗಲೇ, ಬಿಜೆಪಿಯ ನಾಟಕವನ್ನು ಬಯಲುಗೊಳಿಸಬೇಕು" ಎಂದು ಸೂರ್ಯನಾರಾಯಣ ರಾವ್ ಕರೆ ನೀಡಿದರು.

ರಾಜ್ಯದ ವಿವಿಧೆಡೆ ಪ್ರತಿಭಟನೆ

ಕೋಲಾರ: ವಿದ್ಯುತ್ ದರ ಏರಿಕೆಯ ವಿರುದ್ಧ ಕೋಲಾರದಲ್ಲಿ ಭಾರಿ ಪ್ರತಿಭಟನೆ ನಡೆಯಿತು. 2500 ಕ್ಕೂ ಹೆಚ್ಚು ರೈತರು, ಕಾರ್ಮಿಕರು, ವಿದ್ಯಾರ್ಥಿ ಯುವಜನರು ಪ್ರವಾಸೀ ಮಂದಿರದ ಬಳಿ ಸೇರಿ ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆಯಲ್ಲಿ ತೆರಳಿ ಧರಣಿ ಕುಳಿತರು. ದಾರಿಯುದ್ದಕ್ಕೂ ಜನರ ಗಮನವನ್ನು ಸೆಳದ ರ್‍ಯಾಲಿ ಏರಿಸಿದ ದರವನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸಿತು. ಧರಣಿಕಾರರನ್ನು ಉದ್ದೇಶಿಸಿ ಮಾಜಿ ಶಾಸಕ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ, ರಾಜ್ಯ ಸಮಿತಿ ಸದಸ್ಯ ಕೆ.ಎಂ.ವೆಂಕಟೇಶ್, ಜಿಲ್ಲಾ ಪಂಚಾಯತ್ ಸದಸ್ಯ ರಾಮರೆಡ್ಡಿ ಮೊದಲಾದವರು ಮಾತನಾಡಿದರು.

ವಿದ್ಯುತ್ ದರ ಹೆಚ್ಚಳ, ಖಾಸಗೀಕರಣ ಹಾಗೂ ಅಸಮರ್ಪಕ ವಿದ್ಯುತ್ ಪೂರೈಕೆ ವಿರುದ್ಧ 2 ತಿಂಗಳ ಹಿಂದೆ ಯಶಸ್ವಿ ಕೋಲಾರ ಬಂದ್ ನಡೆದುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ದ.ಕ ಜಿಲ್ಲೆ: ಜಿಲ್ಲೆಯ ಕೇಂದ್ರ ಮಂಗಳೂರಿನಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಬಿ.ಮಾಧವ ಮೊದಲಾದವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಇದಲ್ಲದೆ ಬೆಳ್ತಂಗಡಿ, ಸುಳ್ಯಗಳಲ್ಲೂ ಪ್ರತಿಭಟನೆ ನಡೆದ ವರದಿ ಬಂದಿದೆ. ಬೆಳ್ತಂಗಡಿಯಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಬಿ.ಎಂ.ಭಟ್ ನೇತೃತ್ವ ವಹಿಸಿದ್ದರು. ಸುಳ್ಯ ತಾಲ್ಲೂಕು ಕೇಂದ್ರದಲ್ಲಿ ನಡೆದ 200 ಕ್ಕೂ ಹೆಚ್ಚು ಕಾರ್ಯಕರ್ತರ ಪ್ರತಿಭಟನೆಯ ನೇತೃತ್ವವನ್ನು ರಾಬರ್ಟ್ ಡಿ'ಸೋಜಾ ವಹಿಸಿದ್ದರು.

(ಕೆ.ಇ.ಆರ್.ಸಿ) ವು ಏಪ್ರಿಲ್ 22 ರಂದು ಮಂಗಳೂರಿನಲ್ಲಿ ಬಹಿರಂಗ ವಿಚಾರಣೆ ನಡೆಸಿದಾಗ ಸಿಪಿಐ(ಎಂ) ಹೊರತುಪಡಿಸಿ ಯಾವುದೇ ರಾಜಕೀಯ ಪಕ್ಷವು ಇದನ್ನು ವಿರೋಧಿಸಿರಲಿಲ್ಲ. ಇದರಿಂದ ಪತ್ರಿಕೆಗಳಲ್ಲಿ, ಜನರ ನಡುವೆ ಪಕ್ಷದ ಬಗ್ಗೆ ಉತ್ತಮ ಅಭಿಪ್ರಾಯ ಮೂಡಿದೆ.

ಗುಲ್ಬರ್ಗಾ: ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ, ಕೆ.ನೀಲಾ, ರೈತ ಮುಖಂಡ ಚನ್ನಪ್ಪ ಆನೆಗುಂದಿ, ವಿರೂಪಾಕ್ಷಪ್ಪ ಮೊದಲಾದವರ ನೇತೃತ್ವದಲ್ಲಿ 300 ಕ್ಕೂಹೆಚ್ಚು ಕಾರ್ಯಕರ್ತರು ಪಕ್ಷದ ಕಛೇರಿಯಿಂದ ಮೆರವಣಿಗೆ ಹೊರಟು ಕೆಪಿಟಿಸಿಎಲ್ ಮುಂದೆ ಪ್ರತಿಭಟನೆ ನಡೆಸಿದರು.

ಏಪ್ರಿಲ್ 22 ರಿಂದ ಆರಂಭವಾದ ಪ್ರಚಾರಾಂದೋಲನದಲ್ಲಿ ಸಾಧಾರಣ 10,000 ಕ್ಕೂ ಹೆಚ್ಚು ಮನೆಗಳಿಗೆ ತೆರಳಿದ ಸಿಪಿಐ(ಎಂ) ಕಾರ್ಯಕರ್ತರು ವಿದ್ಯುತ್ ದರ ಏರಿಕೆಯ ವಿರುದ್ಧ ಪ್ರತಿಭಟಿಸಲು ಮುಂದಾಗುವಂತೆ ಕರೆ ನೀಡಿದರು.

ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಗುಲ್ಬರ್ಗಾ ಮತ್ತು ಬೀದರ್‌ಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ನೀರಾವರಿ ವಿದ್ಯುತ್ ಪಂಪ್‌ಸೆಟ್ ಬಳಕೆದಾರರ ಹೋರಾಟ ಸಮಿತಿಯ ಆಶ್ರಯದಲ್ಲಿ ಹಲವಾರು ಬಾರಿ ಸಮರಶೀಲ ಹೋರಾಟಗಳು ನಡೆದಿವೆ. ದರ ಹೆಚ್ಚಳವನ್ನು ಹಿಂದಕ್ಕೆ ಪಡೆಯದಿದ್ದರೆ ಉಗ್ರವಾದ ಹೋರಾಟವನ್ನು ನಡೆಸಬೇಕಾಗುತ್ತದೆ ಎಂದು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಉಡುಪಿ ಜಿಲ್ಲೆ: ಉಡುಪಿ ಜಿಲ್ಲೆಯಲ್ಲಿ ಉಡುಪಿ ಮತ್ತು ಕುಂದಾಪುರ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದ ವರದಿಯಾಗಿದೆ. ಉಡುಪಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡೇವಿಡ್ ಕರ್ಕಡ ಹಾಗೂ ಕಾರ್ಮಿಕ ಮುಖಂಡರಾದ ಸಾಧು ಅಮೀನ್, ದೋಗುಸುವರ್ಣ ನೇತೃತ್ವ ವಹಿಸಿದ್ದರು. ಕುಂದಾಪುರದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ನಗರದ ಕೆ.ಪಿ.ಟಿ.ಸಿ.ಎಲ್. ಕಛೇರಿಯ ಮುಂದೆ ಜಮಾಯಿಸಿದ್ದರು. ಸತತವಾಗಿ ಮಳೆ ಬೀಳುತ್ತಿದ್ದರೂ ಪ್ರತಿಭಟನಾಕಾರರ ಉತ್ಸಾಹ ಕುಗ್ಗಿರಲಿಲ್ಲ. ಸಭೆಯನ್ನು ಉದ್ದೇಶಿಸಿ ರಾಜ್ಯ ಸಮಿತಿ ಸದಸ್ಯ ಹಾಗೂ ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್ ಮಾತನಾಡಿ ವಿದ್ಯುತ್ ದರ ಏರಿಕೆಯ ವಿರುದ್ಧ ಉಗ್ರ ಹೋರಾಟಕ್ಕೆ ಸಜ್ಜಾಗಬೇಕೆಂದು ಕರೆ ನೀಡಿದರು. ಮುಖಂಡರುಗಳಾದ ಮಹಾಬಲ ವಡೇರ ಹೋಬಳಿ, ಸಿ.ನಾರಾಯಣ, ವಿ.ನರಸಿಂಹ, ಹೆಚ್.ನರಸಿಂಹ, ಚಂದ್ರಶೇಖರ್ ಮತ್ತಿತರರು ನೇತೃತ್ವ ವಹಿಸಿದ್ದರು.

ಬಿಜಾಪುರ: ರಾಜ್ಯ ಸಮಿತಿ ಸದಸ್ಯ ಹಾಗೂ ಜಿಲ್ಲಾ ಕಾರ್ಯದರ್ಶಿ ಭೀಮಸಿ ಕಲಾದಗಿ ಅವರ ನೇತೃತ್ವದಲ್ಲಿ 1 ಗಂಟೆಗೂ ಹೆಚ್ಚು ಕಾಲ ಬಿಜಾಪುರ ಕೆಪಿಟಿಸಿಎಲ್ ಕಛೇರಿಯನ್ನು ಮುತ್ತಿಗೆ ಹಾಕಿದ ಕಾರ್ಯಕರ್ತರು ದರ ಏರಿಕೆಯ ವಿರುದ್ಧ ಘೋಷಣೆ ಕೂಗಿದರು. ನಂತರ ನಡೆದ ಸಭೆಯನ್ನು ಉದ್ದೇಶಿಸಿ ಸುರೇಖಾ ರಜಪೂತ, ಸೊನ್ನದ, ಡಾ|| ದೇಸಾಯಿ ಮೊದಲಾದವರು ಮಾತನಾಡಿದರು.

ಹೂವಿನಹಿಪ್ಪರಗಿಯಲ್ಲಿ ಪ್ರತಿಭಟನೆ ನಡೆದ ವರದಿಯಾಗಿದೆ.

ತುಮಕೂರು : ಬೀಡಿ ಕಾರ್ಮಿಕರೇ ಹೆಚ್ಚಾಗಿದ್ದ ತುಮಕೂರಿನಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್, ರೈತ ಸಂಘದ ಮುಖಂಡ ಬಿ.ಉಮೇಶ್, ಸಿಐಟಿಯು ಮುಖಂಡ ಕೋದಂಡ ರಾಮು ಮೊದಲಾದವರು ನೇತೃತ್ವ ವಹಿಸಿದ್ದು ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆಯಲ್ಲಿ ತೆರಳಿ ಮನವಿ ಸಲ್ಲಿಸಿದರು.

ಕೊಡಗು: ಕೊಡಗು ಜಿಲ್ಲೆಯ ವಿರಾಜಪೇಟೆ, ಸಿದ್ದಾಪುರ ಮತ್ತು ಕರಿಕೆ ಪ್ರದೇಶಗಳಲ್ಲಿ ಪ್ರತಿಭಟನೆ ನಡೆದಿದೆ. ಅದಕ್ಕೂ ಮೊದಲು ಜಿಲ್ಲೆಯ ಹಲವು ಕೇಂದ್ರಗಳಲ್ಲಿ ಜೀಪ್ ಜಾಥಾ, ಮನೆ ಮನೆ ಪ್ರಚಾರದ ಮೂಲಕ ವಿದ್ಯುತ್ ದರ ಏರಿಕೆಯ ಬಗ್ಗೆ ಜನಜಾಗೃತಿ ನಡೆಸಲಾಗಿತ್ತು.

ಮೈಸೂರು: ಮೈಸೂರಿನ ಪುರಭವನ ಪ್ರದೇಶದಿಂದ ಮೆರವಣಿಗೆಯಲ್ಲಿ ಹೊರಟ ಪ್ರತಿಭಟನಾಕಾರರು ಕೆಪಿಟಿಸಿಎಲ್ ಕಛೇರಿಯ ಮುಂದೆ ದರ ಏರಿಕೆಯ ವಿರುದ್ಧ ಘೋಷಣೆ ಕೂಗುತ್ತಾ ಧರಣಿ ನಡೆಸಿದರು. ನಂತರ ಧರಣಿಕಾರರನ್ನು ಉದ್ದೇಶಿಸಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಿಪಿಐ(ಎಂ) ಮುಖಂಡ ಉಗ್ರಪ್ಪ ಹಾಗೂ ಜಿಲ್ಲಾ ಕಾರ್ಯದರ್ಶಿ ಪ್ರಭಾಕರ್ ಮಾತನಾಡಿ ಹೋರಾಟವನ್ನು ತೀವ್ರಗೊಳಿಸುವಂತೆ ಕರೆ ನೀಡಿದರು.

ಬಿಜೆಪಿಯ ಕಪಟನಾಟಕಕ್ಕೆ ಜನತೆಯ ತಿರಸ್ಕಾರ

ವಿದ್ಯುತ್ ದರದ ಹೆಚ್ಚಳವನ್ನು ವಿರೋಧಿಸುವುದಾಗಿ ಹೇಳಿಕೊಂಡ ಬಿಜೆಪಿ ಸನ್ನಿವೇಶದ ರಾಜಕೀಯ ದುರ್ಲಾಭ ಪಡೆಯಲು ತರಾತುರಿಯಲ್ಲಿ ಕರ್ನಾಟಕ ಬಂದ್‌ಗೆ ಕರೆ ನೀಡಿತು. ಒಂದೆಡೆ ವಿದ್ಯುತ್ ಕ್ಷೇತ್ರದಲ್ಲಿ ಖಾಸಗೀಕರಣ, ದರಗಳ ಹೆಚ್ಚಳದಂತಹ ಸುಧಾರಣೆಗಳ ಹೆಸರಿನಲ್ಲಿ ವಿನಾಶಕಾರಿ ವಿಶ್ವಬ್ಯಾಂಕ್‌ನ ಆಜ್ಞೆಗಳನ್ನು ಜಾರಿಗೆ ತರಬೇಕೆಂದು, ಇಲ್ಲವಾದರೆ ನೆರವು ನಿಲ್ಲಿಸುವುದಾಗಿ ಕೇಂದ್ರದ ವಾಜಪೇಯಿ ಸರ್ಕಾರ ರಾಜ್ಯಗಳಿಗೆ ದಬಾಯಿಸುತ್ತಿರುವಾಗ ಕರ್ನಾಟಕದಲ್ಲಿ ಬಿಜೆಪಿಯು ಈ ಏರಿಕೆಯನ್ನು ವಿರೋಧಿಸುವುದಾಗಿ ಈಗ ನಟಿಸುತ್ತಿದೆ. ಬಿಜೆಪಿಯ 'ಕರ್ನಾಟಕ ಬಂದ್'ನ ಕರೆಯನ್ನು ಪೂರ್ಣ ತಿರಸ್ಕರಿಸುವ ಮೂಲಕ ಅದರ ದ್ವಿಮುಖ, ಕಪಟನಾಟಕದ ಡೋಂಗಿ ಕಾಳಜಿಯನ್ನು ಜನತೆ ಅರ್ಥಮಾಡಿಕೊಂಡಿದೆ.

ಕೇಂದ್ರ ಸರ್ಕಾರದ ವಿನಾಶಕಾರಿ ಗುಜರಾತ್‌ನಂತಹ ಬರ್ಬರ ಹತ್ಯಾಕಾಂಡದ ಕೃತ್ಯಗಳಿಂದ ಸತತ ಬಿಜೆಪಿ ತಿರಸ್ಕೃತಗೊಳ್ಳುತ್ತಿರುವ ಪ್ರಕ್ರಿಯೆಯ ಮುಂದುವರಿದ ಭಾಗವಿದು.

ಇಂದು 'ಕರ್ನಾಟಕ ಬಂದ್' ಸಿಕ್ಕ ಪ್ರತಿಕ್ರಿಯೆಯಿಂದ ಜನತೆಯ ಗಾಯಗೊಂಡ ಬೆನ್ನ ಮೇಲೆ ಬರೆ ಎಳೆಯುತ್ತಿರುವುದು ಸರಿಯೆಂಬ ರೀತಿಯಲ್ಲಿ ಆಳುವ ಕಾಂಗ್ರೆಸ್ ಪಕ್ಷದ ಸರ್ಕಾರ ಭಾವಿಸಿದರೆ ಅದು ಅವರ ಪಾಲಿಗೆ ಉರುಳಾಗಲಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಂತಹ ನೀತಿಗಳ ವಿರುದ್ಧ ನಡೆದಿರುವ ಹೋರಾಟ ಇನ್ನೂ ತೀವ್ರಗೊಳಿಸಬೇಕಿದೆ. ಈ ಹೋರಾಟವನ್ನು ವಿಶಾಲ ನೆಲೆಯಲ್ಲಿ ಮುಂದುವರಿಸಬೇಕಾಗಿದೆ.

ಜನತೆಯ ಅಸಹನೆ ಉಗ್ರ ಸ್ವರೂಪ ತಾಳುವ ಮೊದಲು ಸರ್ಕಾರ ದರ ಏರಿಕೆಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು.

ಕರ್ನಾಟಕವು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರದಲ್ಲಿ ಹಲವು ರೈತ ಹೋರಾಟಗಳನ್ನು ಕಂಡಿದೆ. 1950ರಲ್ಲಿ ನಡೆದ ಒಂದು ಚಳುವಳಿ ಕಾಗೋಡು ಸತ್ಯಾಗ್ರಹ. ಈ ಕಾಗೋಡು ಸತ್ಯಾಗ್ರಹ ನಡೆದ ಈಗ 50 ವರುಷಗಳಲ್ಲಿ ಆ ಚಳುವಳಿಯನ್ನು ನೆನಪಿಸುವ ಲೇಖನ ಇಲ್ಲದೆ. ಇಂತಹ ಹಲವು ಲೇಖನಗಳನ್ನು ಓದುಗರಿಗೆ ಪರಿಚಯಿಸಲಾಗುತ್ತದೆ.

ಕಾಗೋಡು ಸತ್ಯಾಗ್ರಹದ ಒಂದು ಹೊರಳು ನೋಟ

1950ರ ದಶಕದಲ್ಲಿ ಕಾಗೋಡು ಕುಗ್ರಾಮ. ಹಾಗಲಪುರ ಮಣಗದ್ದೆ ಮತ್ತು ಸಣ್ಣಮನೆ ಗ್ರಾಮಗಳೊಂದಿಗೆ ಸೇರಿಕೊಂಡು ಅದು ಹಿರೇನಲ್ಲೂರು ಕಂದಾಯ ಗ್ರಾಮವಾಗಿತ್ತು ಹಾಗೂ ಇದೇ ಗ್ರೂಪ್ ಪಂಚಾಯಿತಿಯ ಭಾಗವಾಗಿತ್ತು. ಆಗ ಕಾಗೋಡಿನಲ್ಲಿ ಗೌಡರದು (1). ಮಡಿವಾಳರದು ಅಕ್ಕಸಾಲಿಗರದು (1), ಆದಿಕರ್ನಾಟಕದವರದು (14) ಹಾಗೂ ದೀವರದು (70) ಹೀಗೆ ಒಟ್ಟು 89 ಮನೆಗಳಿದ್ದವು. ಗೌಡರು ಭೂಮಾಲೀಕರು, ಸುತ್ತಲ ಏಳು ಹಳ್ಳಿಗಳಲ್ಲಿ ಅವರಿಗೆ 1,000 ಎಕರೆ ತರಿ ಭೂಮಿ, 60 ಎಕರೆ ಖುಷ್ಕಿ ಭೂಮಿ ಮತ್ತು 360 ಎಕರೆ ಕಾಡು ಇತ್ತು. ಈ ಗೌಡರು ವರ್ಷಕ್ಕೆ ಸುಮಾರು 3,000 ರೂ. ಕಂದಾಯ ಕಟ್ಟುತ್ತಿದ್ದರು. ದೀವರಲ್ಲಿ ಸವಾಜಿ ಮನೆ (ಈಗಿನ ಸಮಾಜ ಕಲ್ಯಾಣ ಸಚಿವ ಕಾಗೋಡು ತಿಮ್ಮಪ್ಪನವರ ಮನೆತನ) ಮಾತ್ರ ಕೊಂಚ ಸ್ಥಿತಿವಂತರದ್ದಾಗಿತ್ತು. ಅವರಿಗೆ 3 ಎಕರೆ ತರಿ ಭೂಮಿ ಇತ್ತು. ದೀವರು, ಮಡಿವಾಳರು ಮತ್ತು ಆದಿ ಕರ್ನಾಟಕ ಕುಟುಂಬಗಳವರು ವರ್ಷವಿಡೀ ಎರಡು ಹೊತ್ತಿನ ಊಟ ಕೂಡ ಕಾಣದಷ್ಟು ಕಡು ಬಡವರು.

ಕಾಗೋಡು ಗೌಡರು ಆಳುಗಳನ್ನು ಇಟ್ಟುಕೊಂಡು 18 ಎಕರೆಯನ್ನು ಮಾತ್ರ ತಾವೇ ವ್ಯವಸಾಯ ಮಾಡಿಸುತ್ತಾ ಉಳಿದ ಎಲ್ಲಾ ಭೂಮಿಯನ್ನು ಒಕ್ಕಲುಗಳಿಗೆ ಗೇಣಿ ನೀಡಿದ್ದರು. ಸವಾಜಿ ಮನೆಯವರೂ ಗೌಡರ ಒಕ್ಕಲುಗಳಲ್ಲಿ ಒಬ್ಬರಾಗಿದ್ದರು.

ಹಳೆ ಪೈಕದವರು, ಬಿಲ್ಲವರು, ಈಳಿ (ಡಿ)ಗರು, ನಾಮಧಾರಿಗಳು ಹೀಗೆ ಕರ್ನಾಟಕದ ಬೇರೆ ಬೇರೆ ಕಡೆ ಬೇರೆ ಬೇರೆ ಹೆಸರುಗಳನ್ನು ಹೊಂದಿರುವ ದೀವರು ಪರಂಪರಾಗತವಾಗಿ ಹೆಂಡ ಸಾರಾಯಿ ಭಟ್ಟಿ ಇಳಿಸುವುದನ್ನು ಉಪ ಕಸುಬಾಗಿಸಿಕೊಂಡಿದ್ದವರು. ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ, ಸೊರಬ ತಾಲ್ಲೂಕುಗಳಲ್ಲಿದ್ದ ಒಕ್ಕಲುಗಳಲ್ಲಿ ಶೇ. 90 ರಷ್ಟು ಜನ ದೀವರೇ ಆಗಿದ್ದರು. ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಿತರಾದ ಈ ಜನ ಗೌಡರ ಎದುರು ತಮ್ಮ ಕಾಲು ಮುಚ್ಚುವಷ್ಟು ಉದ್ದಕ್ಕೆ ಪಂಚೆ ಉಡುವಂತಿರಲಿಲ್ಲ. ಚಪ್ಪಲಿ ಹಾಕಿಕೊಳ್ಳುವಂತಿರಲಿಲ್ಲ. ಗೌಡರು ಎದುರಾದರೆ, ತಾವು ಮೆಟ್ಟಿದ ಚಪ್ಪಲಿ ಬಿಚ್ಚಿ ಕೈಯಲ್ಲಿ ಹಿಡಿದು ಬೆನ್ನ ಹಿಂದಿಟ್ಟುಕೊಂಡು ಗೌಡರು ಮರೆಯಾಗುವವರೆಗೆ ನಿಂತಿರಬೇಕಾಗಿತ್ತು. ಗೌಡರ ಮಕ್ಕಳನ್ನೂ ಬಹುವಚನದಲ್ಲಿ ಮಾತಾಡಿಸಬೇಕಾಗಿತ್ತು. ತಮ್ಮದಲ್ಲದ ಭೂಮಿಯಲ್ಲಿ ಬೆವರು - ರಕ್ತ ಸುರಿಸಿ, ಕೂತು ತಿನ್ನುತ್ತಾ ದರ್ಬಾರು ನಡೆಸುತ್ತಿದ್ದ ಗೌಡರಿಗೆ ಗೇಣಿಯನ್ನು ಕೊಡಬೇಕಾಗಿತ್ತು. ವಿರಾಮ ಕಾಲದಲ್ಲೂ ಗೌಡರ ಮನೆ - ಹೊಲಗಳಲ್ಲಿ ಬಿಟ್ಟಿ ಚಾಕರಿಯನ್ನು ಮಾಡಬೇಕಿತ್ತು.

ಈ ಹಿನ್ನೆಲೆಯಲ್ಲಿ 1946ರಲ್ಲಿ ಮೊಟ್ಟ ಮೊದಲ ಬಾರಿಗೆ ತೀರ್ಥಹಳ್ಳಿಯಲ್ಲಿ "ಮಲೆನಾಡು ಗೇಣಿದಾರರ ಸಂಘ" ರಚನೆಯಾಯಿತು. 1948ರ ಸುಮಾರಿಗೆ ಸೋಷಲಿಸ್ಟ್ ಪಕ್ಷದ "ಹಿಂದ್ ಕಿಸಾನ್ ಪಂಚಾಯತ್" ಕೂಡ ಪ್ರಾರಂಭವಾಯಿತು. ಇದೇ ಕಾಲಕ್ಕೆ "ಸಾಗರ ತಾಲ್ಲೂಕು ರೈತರ ಸಂಘ" ಅಸ್ತಿತ್ವಕ್ಕೆ ಬಂತು. ಇದು ನೂರಕ್ಕೆ ನೂರು ಪಾಲು ದೀವರ ಸಂಘವಾಗಿತ್ತು. ಈ ಸಂಘವೇ ಮೊದಲ ಬಾರಿಗೆ ಕಾಗೋಡು ಸತ್ಯಾಗ್ರಹವನ್ನು ಪ್ರಾರಂಭಿಸಿದ್ದು.

ಈ ಸಂಘದ ಕಾರ್ಯದರ್ಶಿಯೇ ಗಣಪತಿಯಪ್ಪ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಗಡಿಯ ಸಿದ್ದಾಪುರ ಗ್ರಾಮದವರಾದ ಇವರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ, ಶಿರಸಿ, ಹಿಂಡಲಗ ಜೈಲು ಕಂಡಿದ್ದವರು. ದೀವರಲ್ಲಿ ಅಕ್ಷರ ಬಲ್ಲವರೇ ಇಲ್ಲದ ಆ ಕಾಲದಲ್ಲಿ ಗಣಪತಿಯಪ್ಪ 7ನೇ ತರಗತಿ ಪಾಸಾಗಿದ್ದರು. ಸಿದ್ದಾಪುರಕ್ಕೆ ಹಿರೆನೆಲ್ಲೂರು ಸಮೀಪ, ಅಲ್ಲಿಗೆ ಗಣಪತಿಯಪ್ಪ ಬಂದಾಗ ಗ್ರಾಮಪಂಚಾಯತಿಯವರು, ಸುತ್ತಮುತ್ತ ಶಾಲೆಯೇ ಇಲ್ಲದ್ದನ್ನು ಗಮನಕ್ಕೆ ತಂದುಕೊಂಡು. ತಮ್ಮ ಭಾಗದ ಮಕ್ಕಳಿಗೆ ಪಾಠ ಹೇಳಲು ಗಣಪತಿಯಪ್ಪನವರನ್ನು ಒಪ್ಪಿಸಿದರು.

ಗಣಪತಿಯಪ್ಪನವರದು ದೀವರಲ್ಲೇ ಎದ್ದು ಕಾಣುವಂತಹ ವ್ಯಕ್ತಿತ್ವ. ಮಾತೂ ಅಷ್ಟೇ. ಉಡುಪೂ ಅಷ್ಟೇ. ಅವರ ಹೆಸರೂ ದೀವರಲ್ಲಿ ಬಹು ಅಪರೂಪ. ಗೌಡರ ಸಮಕ್ಕೆ ಕುಳಿತುಕೊಳ್ಳುತ್ತಿದ್ದ ಅವರು ಪತ್ರಿಕೆ ಓದುವ, ಸ್ವಚ್ಛ ಕನ್ನಡ ಮಾತಾಡುವ ಅಭ್ಯಾಸದವರು. ಇವರನ್ನು ಕಂಡರೆ ಗೌಡರಿಗೂ ಆದರವಿತ್ತು.

ಈ ಹೊತ್ತಿನಲ್ಲೇ ಕಾಗೋಡಿನಲ್ಲಿ ಶಿವಲಿಂಗವೊಂದನ್ನು ಪುನರ್ ಪ್ರತಿಷ್ಠಾಪನೆ ಮಾಡುವ ವಿಚಾರಕ್ಕೆ ಸಂಬಂಧಿಸಿದಂತೆ ವಿವಾದ ಎದ್ದಿತು. ಇದಕ್ಕಾಗಿ ಗ್ರಾಮದಲ್ಲಿ ಎಲ್ಲಾ ಜಾತಿಯವರಿಂದ ವರಾಡ (ಚಂದಾ) ಎತ್ತಲಾಗಿತ್ತು. ಆದರೂ ಸಮಾರಂಭದ ಆಹ್ವಾನ ಪತ್ರಿಕೆ 'ವೀರಶೈವ ಮಂಡಳಿ, ಹಿರೇನೆಲ್ಲೂರು' ಹೆಸರಿನಲ್ಲಿ ಹೊರಬಂತು. ಇದನ್ನು ದೀವರು - ಮುಖ್ಯವಾಗಿ ಗಣಪತಿಯಪ್ಪ ಪ್ರಶ್ನಿಸಿದರು. ಅದೇ ದಿನ ದೀವರ ಸಭೆ ನಡೆದು ತೀರ್ಮಾನವಾದಂತೆ 'ದೀವರ ಮಂಡಳಿ, ಹಿರೇನಲ್ಲೂರು' ಹೆಸರಿನಲ್ಲಿ ಇನ್ನೊಂದು ಆಹ್ವಾನ ಪತ್ರಿಕೆ ಮುದ್ರಣವಾಗಿ, ಒಂದೆರಡು ದಿನಗಳಲ್ಲಿ ಕಾಗೋಡಿನಲ್ಲಿ ಪ್ರಸಾರವಾಗಿ ಬಿಟ್ಟಿತು. ಇದರಿಂದ ಕುಪಿತರಾದ ಗೌಡರು, ಇದಕ್ಕೆಲ್ಲಾ ಗಣಪತಿಯಪ್ಪ ಕಾರಣವೆಂದು ಪತ್ತೆ ಮಾಡಿ, ಅವರ ಮೇಲೆ ಹಲ್ಲೆಗೆ ಹೊರಟರು. ಆದರೆ ಗಣಪತಿಯಪ್ಪ ಊರಲ್ಲಿರಲಿಲ್ಲ, ಹಾಗಾಗಿ ಬಚಾವಾದರು.

ಆದರೆ ಎಲ್ಲಾ ವಿಷಯ ತಿಳಿದ ಗಣಪತಿಯಪ್ಪ, ಆಗ ದೀವರಲ್ಲಿದ್ದ ವಿದ್ಯಾವಂತರನ್ನು ಹಾಗೂ ಮುಖಂಡರನ್ನು ಭೇಟಿಯಾಗಿ, ಗೌಡರ ವಿರುದ್ಧ ದೀವರನ್ನು ಸಂಘಟಿಸಲು 'ಸಾಗರ ತಾಲ್ಲೂಕು ರೈತ ಸಂಘ'ವನ್ನು ಕಟ್ಟಿದರು. ಹಲವೆಡೆ ಸಭೆಗಳನ್ನು ನಡೆಸಿದರು. 1958ರ ಹೊತ್ತಿಗೆ ಈ ಸಭೆಗಳಿಗೆ ಸೋಷಲಿಸ್ಟ್ ನಾಯಕರೂ ಆಹ್ವಾನಿತರಾದರು.

1959ರಲ್ಲಿ ಸಾಗರ ತಾಲ್ಲೂಕು ರೈತ ಸಂಘ ಮತ್ತು ಮಲೆನಾಡು ರೈತ ಸಂಘಗಳು ಒಂದುಗೂಡಿದವು.

ಗೌಡರು ಒಕ್ಕಲುಗಳಿಗೆ ಗೇಣಿಗಾಗಿ ಭೂಮಿಯನ್ನು ನೀಡುವಾಗ ಬಿತ್ತನೆ ಬೀಜವನ್ನು ಪಡೆದು ಫಸಲನ್ನು ಅಳೆಸಿಕೊಳ್ಳಲು ಒಪ್ಪಂದವಾಗಿರುತ್ತಿತ್ತು. ಕಾಳು ಅಳತೆಗೆ ಖಂಡುಗ ಮಾನವಾಗಿತ್ತು. ಒಂದು ಖಂಡುಗಕ್ಕೆ 20 ಕೊಳಗ, ಒಂದು ಕೊಳಗಕ್ಕೆ 3 ಸೇರು ಎಂಬ ಲೆಕ್ಕ ಇತ್ತು ಆದರೆ ಗೌಡರು ಎರಡು ಸೈಜಿನ ಕೊಳಗಗಳನ್ನು ಬಳಸುತ್ತಿದ್ದುದು ದೀವರ ಗಮನಕ್ಕೆ ಬಂತು. ಬಿತ್ತನೆ ಬೀಜ ಕೊಡುವಾಗ 3 ಸೇರಿನ ಕೊಳಗ ಬಳಸುತ್ತಿದ್ದರೆ ಫಸಲನ್ನು (ಗೇಣಿ) ಅಳೆಸಿಕೊಳ್ಳುವಾಗ 4 ಸೇರಿನ ಕೊಳಗವನ್ನು ಬಳಸಲಾಗುತ್ತಿತ್ತು. ಇದನ್ನು ಪ್ರಶ್ನಿಸಿದಾಗ ಗೌಡರಿಂದ ದರ್ಪದ ಪ್ರತಿಕ್ರಿಯೆ ಬಂತು. ದೀವರೂ ಕೂಡ ಗೇಣಿಯನ್ನು 3 ಸೇರಿನ ಕೊಳಗದಲ್ಲೇ ನೀಡುವುದಾಗಿ ನಿರ್ಧರಿಸಿಬಿಟ್ಟರು. ಎರಡೂ ಕಡೆಯವರು ಪಟ್ಟು ಹಿಡಿದರು. ಗೇಣಿದಾರರ ಸಮಸ್ಯೆಯನ್ನು ರೈತ ಸಂಘ ಸರ್ಕಾರಕ್ಕೆ ಮುಟ್ಟಿಸಿತು. ಆದರೆ, ಗೇಣಿದಾರರ ಬೇಡಿಕೆಗಳಿಗೆ ಎಲ್ಲೆಡೆಯಿಂದ ನಿರ್ಲಕ್ಷ್ಯವೇ ವ್ಯಕ್ತವಾಯಿತು.

ಸ್ವಾತಂತ್ರ್ಯ ಬಂದ ಹೊಸತರಲ್ಲಿ ಭೂರಹಿತರಾಗಿದ್ದ ಕೆಳಜಾತಿಯ ಜನ, ಅಧಿಕಾರ ಹಿಡಿದಿದ್ದ ಪಾಳೆಯಶಾಹಿ ಭೂಮಾಲೀಕ ವರ್ಗ (ಇದು ಬಲಿಷ್ಠ ಜಾತಿಯೂ ಆಗಿತ್ತು)ವನ್ನೂ ಯಾವುದೇ ಕಾನೂನಿನ ಬಲವಿಲ್ಲದಾಗ್ಯೂ ಸಂಘಟಿತವಾಗಿ ಎದುರಿಸಿದ್ದೇ ಕಾಗೋಡು ಸತ್ಯಾಗ್ರಹದ ಹೆಗ್ಗಳಿಕೆ. ಇದರಲ್ಲಿ ಕಾಗೋಡಿನ ದೀವರು ತಮ್ಮ ಜೀವನದ ಏಕಮಾತ್ರ ಆಸರೆಯಾಗಿದ್ದ ಗೇಣಿ ಭೂಮಿಯನ್ನೇ ಪಣಕ್ಕಿಟ್ಟು ಹೋರಾಡಿದರು. ಇವರ ಈ ಸ್ವಾಭಿಮಾನಿ ಹೋರಾಟಕ್ಕೆ ಉಳಿದ ಹಳ್ಳಿಗಳ ದೀವರೂ ಬೆಂಬಲ ನೀಡಿದರು. ಈ ಕಾರಣದಿಂದಲೇ ಕಾಗೋಡು ಸತ್ಯಾಗ್ರಹ ಧೀರೋದಾತ್ತವಾದುದು.

ಕಾಗೋಡಿನ ಗುರುವಯ್ಯ ಗೌಡರು ಒಕ್ಕಲುಗಳಿಗೆ "ನಮ್ಮ ಭೂಮಿ ಬಿಟ್ಟು ಬಿಡಿ, ಕೊಳಗದ ವಿಷಯ ಕೋರ್ಟಿನಲ್ಲಿ ಇತ್ಯರ್ಥವಾಗಲಿ" ಎಂದುಬಿಟ್ಟರು. ಈ ವಿಷಯದ ಬಗ್ಗೆ ಈ ಭಾಗದ ಭೂಮಾಲೀಕರೆಲ್ಲಾ ಒಂದಾಗಿದ್ದರು. ರೈತ ಸಂಘದ ನಾಯಕರು ಡಿ.ಸಿ. ಸಮ್ಮುಖದಲ್ಲಿ ಮಾತುಕತೆ ನಡೆಸಿದರೂ ಸಮಸ್ಯೆ ಇತ್ಯರ್ಥವಾಗಲಿಲ್ಲ.

ಸೋಷಲಿಸ್ಟ್ ಪಕ್ಷ ಪ್ರಾರಂಭದಿಂದಲೂ ಕಾಗೋಡು ಒಕ್ಕಲುಗಳ ಪರವಾಗಿ ಆಸಕ್ತಿ ಸಹಾಯನುಭೂತಿಯನ್ನು ತೋರಿತ್ತು. 1951ರಲ್ಲಿ ಸೋಷಲಿಸ್ಟ್ ಪಕ್ಷದ ಆಗಿನ ರಾಜ್ಯಾಧ್ಯಕ್ಷ ಸಿ.ಜಿ.ಕೆ. ರೆಡ್ಡಿ 'ದ ಜೆನೆಸಿಸ್ ಆಫ್ ದ ಕಾಗೋಡು' ಎಂಬ ಪುಸ್ತಕವನ್ನು ಮುದ್ರಿಸಿ, ವಿಶೇಷವಾಗಿ ಕಾಂಗ್ರೆಸ್ ನಾಯಕರಲ್ಲಿ ಹಂಚಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಸದಾಶಿವರಾವ್, ಪಕ್ಷದ ಶಿವಮೊಗ್ಗ ಜಿಲ್ಲಾಧ್ಯಕ್ಷ ಗೋಪಾಲಗೌಡ ಮೊದಲಾದವರು ಕಾಗೋಡಿಗೆ ಮೇಲಿಂದ ಮೇಲೆ ಭೇಟಿ ನೀಡುತ್ತಿದ್ದರು. ಆದರೆ ಸೋಷಲಿಸ್ಟ್ ಪಕ್ಷ ರಾಜ್ಯದಲ್ಲಿ ತುಂಬಾ ಬಲಹೀನವಾಗಿದ್ದರೂ, ಕಾಗೋಡು ವಿವಾದದಲ್ಲಿ ತುಂಬಾ ಆಸಕ್ತಿ ತೋರಿತು.

1951ರ ಮಳೆಗಾಲದ ಮುನ್ನ ಒಕ್ಕಲುಗಳು ತಮ್ಮ ಭೂಮಿಯಲ್ಲಿ ಬಿತ್ತನೆಗೆಂದು ಹೋದಾಗ ಕಾಗೋಡು ವಿವಾದ ಸ್ಫೋಟಗೊಂಡಿತು. ಗೌಡರ ಆಳುಗಳು ಈ ಒಕ್ಕಲುಗಳ ಎತ್ತು ನೊಗಗಳನ್ನು ಕಿತ್ತೆಸೆದರು; ಒಕ್ಕಲುಗಳನ್ನು ಥಳಿಸಿದರು. ಭೂಮಿಯಿಂದ ಓಡಿಸಿದರು. 'ಒಕ್ಕಲುಗಳು ತಮ್ಮ ಭೂಮಿಯಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದಾರೆಂದು' ಗೌಡರು ಪೋಲೀಸರಿಗೆ ದೂರು ನೀಡಿದರು. ಪೋಲೀಸರು ಬಂದು ಒಕ್ಕಲುಗಳನ್ನು ಬಂಧಿಸಿದರು. ಪ್ರತಿಭಟನೆ ತೋರಿದವರನ್ನು ಥಳಿಸಿದರು.

ಒಕ್ಕಲುಗಳ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯವನ್ನು ಸೋಷಲಿಸ್ಟ್ ಪಕ್ಷ ಖಂಡಿಸಿತು. ಕಾಗೋಡು ಭಾಗದಲ್ಲೆಲ್ಲಾ ಸಭೆಗಳು ನಡೆದವು. ಕಾಗೋಡಿನಲ್ಲಿ ಒಕ್ಕಲುಗಳು ಮತ್ತು ಪೋಲೀಸರ ಮಧ್ಯೆ ದಿನನಿತ್ಯವೂ ಘರ್ಷಣೆ ನಡೆಯಲಾರಂಭಿಸಿತು. ಕಾಗೋಡಿನ ಗೌಡರಿಗೆ ಸುತ್ತ ಮುತ್ತಲ ಗೌಡರಿಂದ, ಭೂ ಮಾಲೀಕರಿಂದ ಸಹಾನುಭೂತಿ, ಬೆಂಬಲಗಳು ಯಥೇಚ್ಛವಾಗಿ ದೊರೆತವು.

ಕಾಗೋಡಿನಲ್ಲಿ ಅರೆಸ್ಟಾಗುವ ರೈತ ನಾಯಕರ ಮತ್ತು ಒಕ್ಕಲುಗಳ ಸಂಖ್ಯೆ ಹೆಚ್ಚುತ್ತಾ ಹೋಯಿತು. ಜಿಲ್ಲೆಯ ಹೊರಗಿನಿಂದ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರು ಬಂದು ಸತ್ಯಾಗ್ರಹದಲ್ಲಿ ಪಾಲುಗೊಳ್ಳತೊಡಗಿದರು. ದಕ್ಷಿಣ ಕನ್ನಡ, ಬೆಂಗಳೂರು, ಕೋಲಾರ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಿಂದ ಆಗಮಿಸಿದರು. ಪೋಲೀಸರಿಗೆ, ಪೋಲೀಸ್ ವ್ಯಾನುಗಳಿಗೆ ಕಾಗೋಡು ಬಿಡಾರ ಒದಗಿಸಿತು. ಕಾಗೋಡು ಸತ್ಯಾಗ್ರಹ ರಾಷ್ಟ್ರ ಮಟ್ಟದಲ್ಲೂ ಸುದ್ದಿ ಮಾಡಿತ್ತು. 'ಪ್ರಜಾವಾಣಿ' ದಿನಪತ್ರಿಕೆಯ ಮುಖಪುಟದಲ್ಲಿ ಬ್ಯಾನರ್ ಹೆಡ್ಡಿಂಗ್‌ನಲ್ಲಿ ಸತ್ಯಾಗ್ರಹದ ವರದಿ, ಸಂಪಾದಕೀಯ ಪ್ರಕಟವಾದವು.

ಈ ಮಧ್ಯೆ ಕಾಗೋಡು ಸತ್ಯಾಗ್ರಹಕ್ಕೆ ಭಂಗ ತರುವಂತಹ ರೀತಿಯಲ್ಲಿ ಕೆಂಜಿಗಾಪುರ ಭೂಮಿಯನ್ನು ಒಕ್ಕಲುಗಳಿಗೆ ಒದಗಿಸುವ ಸಲಹೆ ಬಂದಿತ್ತಾದರೂ ಅದು ತಿರಸ್ಕೃತವಾಯಿತು. ಸತ್ಯಾಗ್ರಹ ಸೋಷಲಿಸ್ಟ್ ಪಕ್ಷದ ಬೆಂಬಲದಿಂದ ಮುಂದುವರೆಯಿತು. ಕಾಗೋಡಿನ ಒಕ್ಕಲುಗಳು ಸತ್ಯಾಗ್ರಹದಲ್ಲಿ ಹಣ್ಣಾಗಿದ್ದರೂ, ಹೋರಾಟದ ಛಲ ಕಳೆದುಕೊಂಡಿರಲಿಲ್ಲ. ಈ ಹಂತದಲ್ಲಿ ಸಂಧಾನಕ್ಕೆ ಬಂದ ಗೃಹ ಮಂತ್ರಿಗಳಿಗೂ ರೈತ ನಾಯಕರು ಸೊಪ್ಪು ಹಾಕಲಿಲ್ಲ. ಸೋಷಲಿಸ್ಟ್ ಪಕ್ಷದ ನಾಯಕರ ಮತ್ತು

ಸ್ವಾಭಿಮಾನಿ ರಾಜಕೀಯ

ಕಾಗೋಡು ಸತ್ಯಾಗ್ರಹದಲ್ಲಿ ಸಿಗುವ ಕಣಸೆ ಜಟ್ಟಪ್ಪನ ಕತೆ ಇಂದಿಗೂ ಒಂದು ಬೆಳಕಿನ ಕಿಡಿ. ಈತ ಅತ್ಯಂತ ಸ್ವಾಭಿಮಾನಿಯಾಗಿದ್ದ. ಊರಲ್ಲಿ ಯಕ್ಷಗಾನ ಹೆಚ್ಚಾಗಿ ಏರ್ಪಡಿಸುವವರು ಭೂಮಾಲೀಕರು. ಊರಿನ ಎಲ್ಲರೂ ಬಂದು ನೆಲದ ಮೇಲೆ ಕುಳಿತು ಇದನ್ನು ನೋಡಬಹುದಿತ್ತು. ಆದರೆ, ಭೂ ಮಾಲೀಕರು ಮನೆಯಿಂದ ಕುರ್ಚಿ ಬೆಂಚುಗಳನ್ನು ತರಿಸಿಕೊಂಡು ಅದರ ಮೇಲೆ ಕೂರುತ್ತಿದ್ದರು. ಭೂಮಾಲೀಕರಂತೆ ತಾನೂ ಮೇಲೆ ಕೂರುತ್ತೇನೆಂದು ಈ ಕಣಸೆ ಜಟ್ಟಪ್ಪ ಮರ ಕೆತ್ತಿ ಕುರ್ಚಿ ಮಾಡಿದ. ಯಕ್ಷಗಾನದ ದಿನ ಭೂಮಾಲೀಕರಿಗೆ ಸರಿಸಮನಾಗಿ ಕುರ್ಚಿ ಮೇಲೆ ಕೂತು ಆಟ ನೋಡಿದ. ಆ ಹೋರಾಟದ ವಾತಾವರಣದಲ್ಲೂ ಜಟ್ಟಪ್ಪ ಸ್ವಾಭಿಮಾನಿ 'ರಾಜಕೀಯ' ಮಾಡಿದ.

ಇವತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಣಸೆ ಜಟ್ಟಪ್ಪನಂಥ ಸ್ವಾಭಿಮಾನಿ, ಛಲಗಾರ ವ್ಯಕ್ತಿಗಳು ನಾವೇ ಆಗದಿದ್ದರೆ, ಈ ಪ್ರಜಾಪ್ರಭುತ್ವಕ್ಕೆ ಅರ್ಥವಿರುವುದಿಲ್ಲ.

ಬಂದಗದ್ದೆ ರಾಧಾಕೃಷ್ಣ

ಮೇ ದಿನಾಚರಣೆ : ಸಾಮಾಜಿಕ ಪರಿವರ್ತನೆಗೆ ಪಣ

ಬೆಂಗಳೂರಿನ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ನೇತೃತ್ವದಲ್ಲಿ ಮೇ ದಿನಾಚರಣೆ ಕಾರ್ಯಕ್ರಮ ಮೇ 1 ರಂದು ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ ನಡೆಯಿತು. ಮೇ ದಿನದ ಪ್ರಯುಕ್ತ ಬೆಂಗಳೂರಿನ ಚಿಕ್ಕ ಲಾಲ್‌ಬಾಗ್ ಟೌನ್ ಹಾಲ್, ಲಾಲ್‌ಬಾಗ್ ಚೌಕಗಳಿಂದ, ಎಐಟಿಯುಸಿ, ಸಿಐಟಿಯು, ಹೆಚ್‌ಎಂಎಸ್ ಮುಖಂಡರ ನೇತೃತ್ವದಲ್ಲಿ ಸಂಜೆ ಹೊರಟು ಬನಪ್ಪ ಪಾರ್ಕಿನಲ್ಲಿ ಸೇರಿ ಮುಗಿಲು ಮುಟ್ಟುವ ಘೋಷಣೆ ಗಳೊಂದಿಗೆ ಸಭೆ ಪ್ರಾರಂಭವಾಯಿತು.

ಮೇ ದಿನದ ಸಮಿತಿಯ ಸಂಚಾಲಕರಲ್ಲಿ ಒಬ್ಬರಾದ ಮೀನಾಕ್ಷಿ ಸುಂದರಂರವರ ಸ್ವಾಗತ ಭಾಷಣದೊಂದಿಗೆ ಎಂ.ಸಿ.ನರಸಿಂಹನ್ ಎ.ಐ.ಟಿ.ಯು.ಸಿ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡ ಸಭೆಯಲ್ಲಿ ಸಿಐಟಿಯು ಪರವಾಗಿ ಸೂರ್ಯನಾರಾಯಣ ರಾವ್, ಹೆಚ್.ಎಂ.ಎಸ್. ಪರವಾಗಿ ದೇವರಾಜ್, ಯು.ಟಿ.ಯು.ಸಿ (ಎಲ್.ಎಸ್) ಪರವಾಗಿ ಪ್ರಕಾಶ್, ಬ್ಯಾಂಕ್ ಸಂಘಟನೆಗಳ ಪರವಾಗಿ ವಿಜಯ ಕುಮಾರ್. ರಾಜ್ಯ ಸರ್ಕಾರಿ ನೌಕರರ ಸಂಘದ ಆರಾಧ್ಯ ಮಾತನಾಡಿದರು.

ಮೀನಾಕ್ಷಿ ಸುಂದರಂ ತಮ್ಮ ಸ್ವಾಗತ ಭಾಷಣದಲ್ಲಿ ಇಂದಿನ "ಮೇ ದಿನ" ಐಕ್ಯ ಹೋರಾಟದ ಸಂಕೇತವೆಂದು, ಇಂದಿನ ಕಾರ್ಮಿಕ ವರ್ಗ, ರೈತವರ್ಗದ ಮೇಲಿನ ಸರ್ಕಾರದ ನೀತಿಗಳ ಧಾಳಿಯನ್ನು ಹಿಮ್ಮೆಟ್ಟಿಸಲು, ಗೋದ್ರಾ, ಗುಜರಾತ್ ಘಟನೆಗಳ ಮೂಲಕ ಹರಡುತ್ತಿರುವ ಕೋಮು ದಳ್ಳುರಿಯ ವಿರುದ್ಧದ ಹೋರಾಟ ನಡೆಸಲು ಈ ಐಕ್ಯತೆ ಅವಶ್ಯಕವೆಂದು ತಿಳಿಸಿದರು.

ಸೂರ್ಯನಾರಾಯಣ ರಾವ್ ಪ್ರಾಸ್ತಾವಿಕ ಭಾಷಣದಲ್ಲಿ ಇಂದಿನ "ಮೇ ದಿನಾಚರಣೆ" ಹಿಂದಿನ ವರ್ಷಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಮ್ರಾಜ್ಯ ಶಾಹಿಯು WTC ಯ ಮೇಲಿನ ಧಾಳಿಯ ನಂತರ ಅತಿ ಆಕ್ರಮಣಕಾರಿಯಾಗಿ ಪ್ರಪಂಚದಾದ್ಯಂತ ಪ್ರತಿ ಧಾಳಿ ನಡೆಸುತ್ತಿರುವುದರ ಹಿನ್ನೆಲೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂದರು. ಸಾಮ್ರಾಜ್ಯಶಾಹಿಯು ನಮ್ಮ ದೇಶದ ಕೈಗಾರಿಕೆ ಅಭಿವೃದ್ಧಿಗಾಗಲಿ, ಸ್ಥಾಪನೆಗಾಗಲಿ ಸಹಾಯಕೊಡದೆ ನಮ್ಮ ದೇಶವನ್ನು ತಮ್ಮ ವಸ್ತುಗಳಿಗೆ ಮಾರುಕಟ್ಟೆಯಾಗಿಸಲು ಪ್ರಯತ್ನಿಸಿರುವುದು ಎಲ್ಲರಿಗೂ ತಿಳಿದಿದ್ದೆ. ಸಾಮ್ರಾಜ್ಯಶಾಹಿ ಮತ್ತು ಅಂದಿನ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧವೂ ಸಮಾಜವಾದಿ ಕಮ್ಯುನಿಸ್ಟ್ ರಾಷ್ಟ್ರಗಳು ಹೋರಾಟ ನಡೆಸದಿದ್ದರೆ ಇಂದಿನ ಪ್ರಜಾಪ್ರಭುತ್ವ ರಾಷ್ಟ್ರಗಳು ಪ್ರಬಲ ಗೊಳ್ಳುತ್ತಿರಲಿಲ್ಲ, ನಮ್ಮ ದೇಶದ ಸ್ವಾತಂತ್ರ್ಯ ಚಳುವಳಿಯು ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದು ಇಂದಿನ ಕೈಗಾರಿಕಾ ಅಭಿವೃದ್ಧಿಯನ್ನು ನೆನಪಿನಲ್ಲಿಟ್ಟು ಕೊಳ್ಳಬೇಕೆಂದು ತಿಳಿಸಿದರು.

AITUC ಪರವಾಗಿ ಹೆಚ್.ವಿ.ಅನಂತಸುಬ್ಬಾರಾವ್ ಮಾತನಾಡಿ ಇಂದು ಮೇ ದಿನಾಚರಣೆಯನ್ನು ಮಾಲಿಕರು, ಕಾರ್ಮಿಕ ವಿರೋಧಿ ನೀತಿಗಳ ಅನುಷ್ಠಾನಗೊಳಿಸುವ ಸರ್ಕಾರಗಳು ನಡೆಸುತ್ತಿವೆ, ಆದ್ದರಿಂದ ಎಚ್ಚರಿಕೆ ಅಗತ್ಯವೆಂದರು. ಎಲ್ಲಾ ಸಂಘಟನೆಗಳ ಐಕ್ಯತೆ ಸಂತೋಷಕರ. ಸರ್ಕಾರದ LPG ನೀತಿಗಳ ವಿರುದ್ಧದ ಹೋರಾಟ, ಏಪ್ರಿಲ್ 16ನೇ ಮುಷ್ಕರದ ಯಶಸ್ಸು ಈ ಐಕ್ಯತೆಯ ಮುಂದುವರಿಯುವುದು ಅಗತ್ಯವೆಂದರು.

ಹೆಚ್.ಎಂ.ಎಸ್.ನ ದೇವರಾಜ್ ಮಾತನಾಡಿ ಕಾರ್ಮಿಕರೆಲ್ಲರೂ ಐಕ್ಯ ಹೋರಾಟದಿಂದ ಅಸಂಘಟಿತ ಕಾರ್ಮಿಕರ, ಗುತ್ತಿಗೆ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸದಿದ್ದಲ್ಲಿ, ಬಾಲಕಾರ್ಮಿಕ ಪದ್ಧತಿಯ ನಿರ್ಮೂಲನಕ್ಕೆ ಪ್ರಯತ್ನಿಸದಿದ್ದಲ್ಲಿ ಕಾರ್ಮಿಕ ಚಳುವಳಿಗಳು ಮುಂದಿನ ದಿನಗಳಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ತಿಳಿಸಿದರು. ಈ ಮೇ ದಿನದ 8 ಘಂಟೆಗಳ ಕೆಲಸದ ಲಾಭ ಎಲ್ಲರಿಗೂ ಸಿಗಬೇಕೆಂದರು.

UTUC(LS) ನ ಪ್ರಕಾಶ್, ಹೆಚ್.ವೈ.ರೈ ಬ್ಯಾಂಕ್ ಸಂಘಟನೆಗಳ ಪರವಾಗಿ, ಕಾಂ. S.H.ವಿಜಯ ಕುಮಾರ್ ವಿಮಾ ಸಂಘಟನೆಗಳ ಪರವಾಗಿ, ಆರಾಧ್ಯ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಪರವಾಗಿ ಮಾತನಾಡಿದರು.

ಎಂ.ಸಿ.ನರಸಿಂಹನ್ ಮಾತನಾಡಿ ಇಂದಿನ BJP ನೀತಿಗಳು ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತಿದೆ. ಇಂದು ಹೊಸ ಕಾರ್ಮಿಕ ವರ್ಗದ ಮುಂಚೂಣಿಯಲ್ಲಿ ಬೃಹತ್ ಪ್ರಮಾಣದಲ್ಲಿ ಐಕ್ಯ ಹೋರಾಟಗಳನ್ನು ನಡೆಸಿ ಕಾರ್ಮಿಕ ವಿರೋಧಿ, ರೈತ ವಿರೋಧಿ ನೀತಿಗಳ ವಿರುದ್ಧ ಕಾರ್ಯಾಚರಣೆ ನಡೆಸಬೇಕಾಗಿದೆ ಎಂದು ತಿಳಿಸಿದರು.

... ನಿಕೃಷ್ಟವಾಗಿ ಕಂಡ ವಿರೇಶ್ ವರದಿ

ಆಗ ಮುಖ್ಯ ಮಂತ್ರಿಗಳ ಬುರುಡೆ ಒತ್ತಳಿಕೆಯಲ್ಲಿ ಸುರಿಯಲಾಗಿದ್ದ ಹೈಟೆಕ್‌ಫಾರ್ಮಲಾ ಆಯೋಗ ರಚಿಸುವುದು ಕಣ್ಣು ಮುಚ್ಚುವುದು. ಅಂತಹ ಸಂದರ್ಭದಲ್ಲಿ ರೈತರ ಆತ್ಮಹತ್ಯೆಯ ವೈಜ್ಞಾನಿಕ ಕಾರಣದ ಅಧ್ಯಯನಕ್ಕೆಂದು ಡಾ। ಜಿ.ಕೆ. ವೀರೇಶ್ ಸಮಿತಿಯ ರಚನೆ, ಎಲ್ಲಾ ಸಮಸ್ಯೆಗಳಿಗೂ ರಚಿಸಿದಂತೆ ಒಂದು ಸಮಿತಿ. ಇಂತಹ ಸಮಿತಿ ರಚಿಸಿಯಾದರೆ ತಮ್ಮ ಪಾಲಿನ ಹೊಣೆ ಮುಗಿದಂತೆ ಎಂದುಕೊಳ್ಳುವುದು ಇನ್ನೂ ಜೀವಂತವಿರುವ ಕೃಷ್ಣರಿಗೆ ಸಾಧ್ಯವಾಗಬಹುದು. ಆದರೆ ಸಮಿತಿ ರಚನೆಯಾದುದರಿಂದ ಬದುಕಿನ ಬೇಟೆ ಆತ್ಮಹತ್ಯೆ ನಿಲ್ಲುತ್ತಾವೆಯೇ.

ಈಗ ಆ ಘನಂದಾರಿ ಸಮಿತಿ 3000 ಪುಟಗಳ ವರದಿ ನೀಡಿದೆ. ರಾಜ್ಯದಲ್ಲಿ ವರ್ಷಕ್ಕೆ ಸರಾಸರಿ 12,000 ಆತ್ಮಹತ್ಯೆಗಳು ನಡೆಯುತ್ತವೆಯೆಂದು ಶೋಧಿಸಿದೆ. ಪೋಲೀಸ್, ಅಧಿಕಾರಿಗಳ ಹೇಳಿಕೆ ದಾಖಲೆಗಳನ್ನು ಗುಡ್ಡೆಹಾಕಿದೆ. ಆದರೆ ಅಂತಿಮ ಸಲಹೆ ಶಿಫಾರಸ್ಸುಗಳಲ್ಲಿ 96 ಪ್ರಕರಣಗಳನ್ನು ಪರಿಶೀಲಿಸಿ ಬೆಳೆಹಾನಿಯಿಂದ ಹೀಗೆ ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ನೀಡುವುದು ಅಪರಾಧ ಎಂದು ಘೋಷಿಸಿದೆ. ಈ ಶಿಫಾರಸು ಪರಿಗಣಿಸುವ ಆದರೆ ಸ್ಪಷ್ಟಮಾತುಗಳಲ್ಲಿ ಹೇಳದೇ ಕೃಷಿ ಸಚಿವರು, ಸಂಪುಟವೂ ಗುನುಗುನಿಸಿ ಏನು ನಿರ್ಧಾರ ಕೈಗೊಳ್ಳದೇ ಸಹಜ ಸಾವಿನ ಸಿದ್ಧಾಂತಕ್ಕೆ ಬಿಟ್ಟಿದೆ.

ತಮಾಷೆಯೆಂದರೆ ಇದೇ ಕಾಂಗ್ರೆಸ್‌ನ ರಾಷ್ಟ್ರ ಅಧ್ಯಕ್ಷೆ ಸೋನಿಯಾಗಾಂಧಿ ಪಕ್ಕದ ಆಂದ್ರದಲ್ಲಿ ಆತ್ಮಹತ್ಯೆ ಮಾಡಿಕೊಂಡ 90 ರೈತ ಕುಟುಂಬಗಳಿಗೆ ಸಾಂತ್ವನವೆಂದು 20 ಲಕ್ಷ ರೂ.ಗಳನ್ನು ಹಂಚುತ್ತಿರುವ ದಿನವೇ ಇದೇ ಕಾಂಗ್ರೆಸ್‌ನ ಪಕ್ಷವೇ ತೆಲುಗುದೇಶಂ ಸರ್ಕಾರವಿರುವ ಆಂಧ್ರದಲ್ಲೊಂದು ಬಗೆ ಕರ್ನಾಟಕದಲ್ಲಿ ಇನ್ನೊಂದು ಬಗೆಯ ನಿಲುವಿಗೆ ಅರ್ಥನೇನು?

ಈ ಆತ್ಮಹತ್ಯೆಯ ಹಿನ್ನಲೆ ಅರಿಯಲು ಪರಿಣತರ ಶೋಧನೆ ಬೇಕಿಲ್ಲ. ಬೇಕಿರುವುದು ಅರಿಯುವ ಮಾನವೀಯತೆಯ ಹೃದಯ. ಅದೇ ಕೃಷ್ಣರಿಗೂ ಅವರ ಸಂಪುಟಕ್ಕೆ ಇಲ್ಲದಿರುವುದು. ಇಲ್ಲವಾದಲ್ಲಿ ಈಗಾಗಲೇ ಅಧಿಕಾರಿಗಳು ಜನಪ್ರತಿನಿಧಿಗಳ ನೀಡಿದ ವರದಿಗಳೇ ಸಾಕಲ್ಲವೇ? ಕೃಷಿ ತಜ್ಞರ ಬಾಯಲ್ಲಿ ಹೇಳಿಸಿರುವುದು ಮುಖ್ಯಮಂತ್ರಿಗಳು ಇಂಗಿತವನ್ನೇ ಇದು ಅಮಾನವೀಯ ಖಂಡನೀಯ.

ಈ ವೀರೇಶ್ ವರದಿಯೂ ಕೂಡ ಅದರ ವ್ಯಾಪ್ತಿಯಲ್ಲಾದರೂ ಒಂದು ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನಾದರೂ ಸೂಚಿಸಿದೆಯೇ? ಸೂಚಿಸಿದ ಪರಿಹಾರಗಳು ಅಷ್ಟಕ್ಕಷ್ಟೆ. ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಒದಗಿಸುವ ಬಗ್ಗೆಯಾಗಲೀ, ಸುಲಭದ ಕೃಷಿ ಸಾಲ ಒದಗಿಸು ಬಗೆಗೆ ಮತ್ತು ಕೃಷಿಗೆ ಒದಗಿಸಬೇಕಾದ ಪೂರ್ಣ ಸಹಾಯ ಸಹಕಾರಗಳ ಬಗ್ಗೆ ಮೌನದಿಂದ ಸರ್ಕಾರ ಇದರಲ್ಲಿರುವ ನಕಾರಾತ್ಮಕ ಅಂಶಗಳನ್ನು ಒಪ್ಪಬಾರದು. ಮತ್ತು ಈ ಸಮಿತಿಯನ್ನೇ ನೆಪವಾಗಿಸಿಕೊಂಡು ಗರಬಡಿದು ಕಾಲಹರಣ ಮಾಡಬಾರದು. ಹಾಗಾದರೆ ತಕ್ಕ ಶಾಸ್ತಿಯನ್ನೇ ಅನುಭವಿಸಬೇಕಾಗುತ್ತದೆ.

ಕೆಪಿಟಿಸಿಎಲ್ ಕಪಟ ನಾಟಕ ಬಯಲು

4 ನೇ ಪುಟದಿಂದ

ಕೈಗಾರಿಕೆಗಳ ಉತ್ಪಾದನಾ ವೆಚ್ಚ ಏರಿ ವಿದೇಶಿ ಆಮದುಗಳೊಂದಿಗೆ ಸ್ಪರ್ಧಿಸುವುದು ಮತ್ತಷ್ಟು ಕಷ್ಟವಾಗುತ್ತದೆ.

ವಿದ್ಯುತ್ ಆಯೋಗ ಬಹಿರಂಗ ವಿಚಾರಣೆ

ರಾಜ್ಯದ ನಾಲ್ಕು ಕೇಂದ್ರಗಳಲ್ಲಿ ವಿಚಾರಣೆ ನಡೆಸಿದ ವಿದ್ಯುತ್ ಆಯೋಗದ ಮುಂದೆ ಈ ವರ್ಷ 8000 ಕ್ಕೂ ಹೆಚ್ಚು ಪ್ರಮಾಣ ಪತ್ರಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ ಹೆಚ್ಚಿನ ಪ್ರಮಾಣ 'ಪತ್ರಗಳು ಬರಗಾಲದ ನೆಪಹೂಡಿ ದುಬಾರಿ ಬೆಲೆಯ ವಿದ್ಯುತ್ ಅನ್ನು ಖಾಸಗಿ ವಿದ್ಯುತ್, ಉತ್ಪಾದಕರಿಂದ ಖಂಡಿಸಿದ್ದನ್ನು ಜನತೆಯ ಮೇಲೆ ಹೇರಬಾರದು' ಎಂದು ಹೇಳಿದೆ. ತೀವ್ರ ವಿದ್ಯುತ್ ಕೊರತೆ ಎದುರಾಗಲು ಮುಖ್ಯ ಕಾರಣ 1992 ರಿಂದ 98 ರವರೆಗೆ ಖಾಸಗಿ ಕಂಪನಿಗಳೊಂದಿಗೆ ಎಂ.ಓ.ಯು. ಗಳನ್ನು ಸಹಿ ಮಾಡಿ ಅವರು ವಿದ್ಯುತ್ ತಯಾರಿಸಿಕೊಡುತ್ತಾರೆಂದು ಕಾಯುತ್ತಾ ಕೂತು ಸರ್ಕಾರ ವಿದ್ಯುತ್ ಉತ್ಪಾದನೆಗೆ 88 ರಿಂದ 92 ರವರೆಗೆ ತೊಡಗಿಸಿದಷ್ಟು ಬಂಡವಾಳವನ್ನು ಕೂಡ ತೊಡಗಿಸಿದಿದ್ದುದೇ ಆಗಿದೆ. ವಿದ್ಯುತ್ ದರ ಏರಿಸಿದರೆ ಖಾಸಗಿ ವಿದ್ಯುತ್ ತಯಾರಕರು ಒಂದು ಯುನಿಟ್ ಗೆ 4.00 ಗಿಂತ ಹೆಚ್ಚು ಬೆಲೆ ಏರಿಸಿ ಜನರನ್ನು ಸೂರೆ ಮಾಡಲು ಅವಕಾಶ ನೀಡಿದಂತಾಗುತ್ತದೆ ಎಂದು ಆಯೋಗದ ಮುಂದೆ ಮಂಡಿಸಲಾಗಿತ್ತು. ಮತ್ತು ಅನೇಕ ಪರ್ಯಾಯ ಸಲಹೆ ಸೂಚನೆಗಳನ್ನು ನೀಡಲಾಗಿತ್ತು. ಅದರಲ್ಲಿ ಕಡಿಮೆ ವೆಚ್ಚದ ಜಲ ವಿದ್ಯುತ್ ಯೋಜನೆ, ಖಾಸಗಿ ಕ್ಷೇತ್ರಗಳ ಮೇಲೆ ಅವಲಂಬಿಸುವ ಬದಲಾಗಿ ಸಾರ್ವಜನಿಕ ಕ್ಷೇತ್ರದ ಮೂಲಕ ವಿದ್ಯುತ್ ಉತ್ಪಾದನೆ ಮತ್ತು ಹಂಚಿಕೆ, ವಿದ್ಯುತ್ ಸೋರುವಿಕೆ, ಕಳ್ಳತನಕ್ಕೆ ತಡೆ ಇತ್ಯಾದಿ ಸೂಚನೆಗಳಿದ್ದವು. ವಿದ್ಯುತ್ ಕ್ಷೇತ್ರದ ನಿರ್ವಹಣೆ ಪಾರದರ್ಶಕವಾಗಲು, ಜನರ ಅಭಿಪ್ರಾಯಗಳನ್ನು ನಿಜವಾದ ಅರ್ಥದಲ್ಲಿ ಪರಿಗಣಿಸುವಂತಾಗಲು ವಿದ್ಯುತ್ ಉತ್ಪಾದಕರ ಪಿ.ಪಿ.ಎ.ಗಳನ್ನು ಕೂಡ ಬಹಿರಂಗಗೊಳಿಸಬೇಕು ಹಾಗೂ ಬಹಿರಂಗ ತನಿಖೆಗೆ ಒಳಪಡಿಸಬೇಕು ಎಂಬುದನ್ನು ಒತ್ತಾಯಿಸಿದ್ದವು.

ಆದರೆ ಆಯೋಗ ಈ ಯಾವ ಸಲಹೆಗಳಿಗೂ ಮಾನ್ಯತೆ ನೀಡದೆ ಜನವಿರೋಧಿ, ರೈತ ವಿರೋಧಿ, ದಲಿತ ವಿರೋಧಿ ದರ ಏರಿಕೆ ಆಜ್ಞೆಯನ್ನು ಹೊರಡಿಸಿದೆ ಎಂಬ ಅಭಿಪ್ರಾಯಕ್ಕೆ ಬರುವುದು ಅನಿವಾರ್ಯವಾಗಿದೆ.

ಕಾಗೋಡು ಸತ್ಯಾಗ್ರಹ.......

ಪುಟ 9 ರಿಂದ

ಕಾರ್ಯಕರ್ತರ ಪಾಲ್ಗೊಳ್ಳುವಿಕೆಯಿಂದಾಗಿ ಸತ್ಯಾಗ್ರಹ ಇನ್ನೂ ಬಿರುಸಾಗಿ ನಡೆಯಿತು. ಸತ್ಯಾಗ್ರಹಕ್ಕೆ ಮಸಿ ಬಳಿಯುವ ಕೆಲಸ ನಡೆದರೂ, ಸತ್ಯಾಗ್ರಹಿಗಳು ಧೃತಿಗೆಡಲಿಲ್ಲ. ವಾರೆಂಟ್ ಇದ್ದರೂ ಅನೇಕರು ತಲೆಮರೆಸಿಕೊಂಡೇ ಸತ್ಯಾಗ್ರಹವನ್ನು ಸಂಘಟಿಸಿದರು.

1951ರ ಜೂನ್‌ನಲ್ಲಿ ಸೋಷಲಿಸ್ಟ್ ಪಕ್ಷದ ಧುರೀಣ ರಾಮಮನೋಹರ ಲೋಹಿಯಾ ಕಾಗೋಡಿಗೆ ಬಂದರು. ಅವರನ್ನು ಸತ್ಯಾಗ್ರಹಿಗಳು ಹಾಗೂ ಗ್ರಾಮಸ್ಥರು ಅದ್ದೂರಿಯಾಗಿ ಸ್ವಾಗತಿಸಿದರು. ಆದರೆ, ಅದೇ ದಿನ ಪೋಲೀಸರು ಅವರನ್ನು ಬಂಧಿಸಿ ಬೆಂಗಳೂರಿಗೆ ಒಯ್ದು ಕ್ರೆಸೆಂಟ್ ಹೌಸಿನಲ್ಲಿ ಇಟ್ಟರು. ಅರಮನೆಯಂಥ ಆ ಭವ್ಯ ಮನೆಯಲ್ಲಿ ಸೆರೆಯಾಗಿರಲು ಒಪ್ಪದ ಲೋಹಿಯಾ ಈ ಬಗ್ಗೆ ಪ್ರತಿಭಟಿಸಿದಾಗ ಅವರನ್ನು ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಲಾಯಿತು. ಎಂಟು ದಿನಗಳು ಕಳೆಯುವಷ್ಟರಲ್ಲಿ ಸರ್ಕಾರ ಲೋಹಿಯಾರ ಮೇಲಿನ ಕೇಸ್ ಹಿಂತೆಗೆದುಕೊಂಡಿತು. ಆಗ ಲೋಹಿಯಾ - "ಕಾಗೋಡಿನ ಮಾಸ್ತಿಗಳು, ಕೆಂಚಪ್ಪಗಳು ಮಾತ್ರವಲ್ಲ, ಭಾರತದ ಎಲ್ಲರೂ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟಕ್ಕೆ ಮುಂದಾಗಬೇಕು. ನನ್ನ ಮೇಲಿನ ಕೇಸ್ ಹಿಂತೆಗೆದುಕೊಂಡು ಇಂತಹದ್ದೇ ಅಪಾದನೆಗಳಿಗೆ ಗುರಿಯಾಗಿರುವ ಇತರರನ್ನು ಸೆರಮನೆಯಲ್ಲೇ ಉಳಿಸುವುದು ಪ್ರಜಾಸತ್ತೆಗೆ ಅಥವಾ 'ಕಾನೂನಿನ ಮುಂದೆ ಎಲ್ಲರೂ ಸಮಾನರು' ಎಂಬ ತತ್ವಕ್ಕೆ ಸಲ್ಲದು" ಎಂದು ಪ್ರತಿಕಾಗೋಷ್ಠಿಯಲ್ಲಿ ತಿಳಿಸಿದರು.

ನಂತರದ ಕೆಲವೇ ದಿನಗಳಲ್ಲಿ ಸತ್ಯಾಗ್ರಹ ಕಾವು ಕಳೆದುಕೊಂಡಿತು. ಮುಖ ಉಳಿಸಿಕೊಳ್ಳಲು ರಾಜಿ ಸೂತ್ರ ಸಿದ್ಧವಾಯಿತು. 1951ರ ಸೆಪ್ಟೆಂಬರ್‌ನಲ್ಲಿ ಸೋಷಲಿಸ್ಟ್ ಪಕ್ಷದ ಅಂದಿನ ಅಧ್ಯಕ್ಷ ಜಯಪ್ರಕಾಶ್ ನಾರಾಯಣರು ಬರುವ ಹೊತ್ತಿಗೆ ಸತ್ಯಾಗ್ರಹದ ಕಾರ್ಯಕರ್ತರು ಜೈಲಿನಿಂದ ಹೊರಬರಲಾರಂಭಿಸಿದ್ದರು. ಕಾಗೋಡು ಸತ್ಯಾಗ್ರಹದಿಂದಾಗಿ ಯಾವೊಂದು ಮೂಲಭೂತ ಸಮಸ್ಯೆಯೂ ಬಗೆಹರಿಯಲಿಲ್ಲ. ನಿಜವೆಂದರೆ ಈ ಸತ್ಯಾಗ್ರಹ ಸಮಸ್ಯೆಯನ್ನು ಮೂಲಭೂತವಾಗಿ ಗ್ರಹಿಸಿರಲಿಲ್ಲ. ಸೋಷಲಿಸ್ಟ್ ಪಕ್ಷ ನೇತೃತ್ವ ವಹಿಸಿದ ಮೇಲೂ ಸತ್ಯಾಗ್ರಹದ ದೃಷ್ಟಿ ಬದಲಾಗಲಿಲ್ಲ. ಸತ್ಯಾಗ್ರಹ ಮೊದಲಿನಿಂದಲೂ ಸೀಮಿತ ಉದ್ದೇಶವನ್ನು ಇಟ್ಟುಕೊಂಡಿತ್ತು.

ಆದರೂ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಭೂರಹಿತರಾಗಿದ್ದ ಕೆಳಜಾತಿಯ ಜನ, ಅಧಿಕಾರ ಹಿಡಿದಿದ್ದ ಪಾಳೆಯಶಾಹಿ ಭೂಮಾಲೀಕ ವರ್ಗ (ಇದು ಬಲಿಷ್ಠ ಜಾತಿಯೂ ಆಗಿತ್ತು)ವನ್ನೂ ಯಾವುದೇ ಕಾನೂನಿನ ಬಲವಿಲ್ಲದಾಗ್ಯೂ ಸಂಘಟಿತವಾಗಿ ಎದುರಿಸಿದ್ದೇ ಕಾಗೋಡು ಸತ್ಯಾಗ್ರಹದ ಹೆಗ್ಗಳಿಕೆ. ಇದರಲ್ಲಿ ಕಾಗೋಡಿನ ದೀವರು ತಮ್ಮ ಜೀವನದ ಏಕಮಾತ್ರ ಆಸರೆಯಾಗಿದ್ದ ಗೇಣಿ ಭೂಮಿಯನ್ನೇ ಪಣಕ್ಕಿಟ್ಟು ಹೋರಾಡಿದರು. ಇವರ ಈ ಸ್ವಾಭಿಮಾನಿ ಹೋರಾಟಕ್ಕೆ ಉಳಿದ ಹಳ್ಳಿಗಳ ದೀವರೂ ಬೆಂಬಲ ನೀಡಿದರು. ಈ ಕಾರಣದಿಂದಲೇ ಕಾಗೋಡು ಸತ್ಯಾಗ್ರಹ ಧೀರೋದಾತ್ತವಾದುದು.

- ಜಿ. ರಾಜಶೇಖರ್

'ಕಾಗೋಡು ಸತ್ಯಾಗ್ರಹ'ದಿಂದ ಕೃಪೆ- ಸಮಾಜವಾದಿ ಮಾತುಕತೆ.

ರಾಜಕೀಯ ಎಚ್ಚರ ತೋರಿದ ಫ್ರೆಂಚ್ ಮತದಾರ

ಫ್ರೆಂಚ್ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶ ಫ್ರಾನ್ಸನ್ನು ಮಾತ್ರವಲ್ಲ, ಇಡೀ ಯುರೋಪು ಜಗತ್ತಿಗೆ ಆಶ್ಚರ್ಯ, ಆತಂಕ ಉಂಟುಮಾಡಿತು. ಫ್ಯಾಸಿಸ್ಟ್ ಪಕ್ಷದ ಅಭ್ಯರ್ಥಿ ಎರಡನೇ ಸ್ಥಾನಗಳಿಸಿ, ಎರಡನೇ ಸುತ್ತಿನ ಸ್ಪರ್ಧೆಗೆ ಸೋಶಲಿಸ್ಟ್ ಅಭ್ಯರ್ಥಿಯನ್ನು ಸೋಲಿಸಿ ಪ್ರವೇಶಿಸಿದ್ದೇ ಇದಕ್ಕೆ ಕಾರಣ. ಈ ಫ್ಯಾಸಿಸ್ಟ್ ಅಪಾಯದಿಂದ ಎಚ್ಚತ್ತ ಮತದಾರ, ಎರಡನೇ ಸುತ್ತಿನಲ್ಲಿ ಫ್ಯಾಸಿಸ್ಟ ಅಭ್ಯರ್ಥಿ ಲೆ-ಪೆನ್‌ರನ್ನು ಸೋಲಿಸಿದ್ದಾರೆ. ಆದರೆ ಈ ಘಟನೆ ಫ್ರೆಂಚ್ ಎಡಚಳುವಳಿ, ರಾಜಕೀಯ ಮತ್ತು ಮತದಾರರನ್ನು ಎಚ್ಚರಿಸಿದೆ. ಮುಂಬರುವ ಜೂನ್ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಫ್ರೆಂಚ್ ಮತದಾರ ಯಾರಿಗೆ ಒಲಿಯುತ್ತಾನೆ ಕಾದು ನೋಡಬೇಕು. ಇದು ಏಕೆ. ಹೀಗಾಯಿತು? ಫ್ರೆಂಚ್ ಚುನಾವಣೆಯ ಮೊದಲು ಸುತ್ತಿನಲ್ಲಿ ಫ್ಯಾಸಿಸ್ಟರ ವಿಜಯದ ಅರ್ಥಏನು? ಫ್ಯಾಸಿಸ್ಟ್ ಚಳುವಳಿ ಯುರೋಪಿನ ನಾಗರಿಕನ ಮನಗೆಲ್ಲುತ್ತಿದೆಯೇ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡುತ್ತದೆ ಈ ಲೇಖನ.



ಫ್ಯಾಸಿಸ್ಟ್‌ರಿಗೆ ಫ್ರೆಂಚ್ ಅಧ್ಯಕ್ಷೀಯ ಚುನಾವಣೆಯಲ್ಲಿ ಪರಾಭವ

ಫ್ರಾನ್ಸ್‌ನ ಅಧ್ಯಕ್ಷೀಯ ಚುನಾವಣೆಗಳ ಮೊದಲ ಸುತ್ತಿನ ಫಲಿತಾಂಶ ಎಲ್ಲರನ್ನು ದಂಗು ಬಡಿಸಿತ್ತು. ಫ್ರೆಂಚರನ್ನು ಮಾತ್ರವಲ್ಲ, ಇಡೀ ಯುರೋಪನ್ನು ಮಾತ್ರವಲ್ಲ, ಇಡೀ ಜಗತ್ತನ್ನು. 1969ರ ನಂತರ ಮೊದಲ ಬಾರಿಗೆ ಫ್ರೆಂಚ್ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋಶಲಿಸ್ಟ್ ಪಕ್ಷದ ಅಭ್ಯರ್ಥಿ ಎರಡನೇ ಸುತ್ತಿಗೆ ಪ್ರವೇಶಿಸಿರಲಿಲ್ಲ, ಕಳೆದ 30ಕ್ಕೂ ಹೆಚ್ಚು ವರ್ಷಗಳಿಂದ ಫ್ರೆಂಚ್ ಅಧ್ಯಕ್ಷ ಸೋಶಲಿಸ್ಟ್ ಪಕ್ಷ ಅಥವಾ ಗಾಲಿಸ್ಟ್ ಪಾರ್ಟಿ ಎಂಬ ಬಲಪಂಥೀಯ ಪಕ್ಷದಿಂದ ಆಯ್ಕೆಯಾಗುತ್ತಿದ್ದರು. ಈ ಬಾರಿಯೂ ಸುದ್ದಿ ಮಾಧ್ಯಮಗಳೆಲ್ಲಾ ಈಗಿನ ಅಧ್ಯಕ್ಷ ಚಿರಾಕ್ ಮತ್ತು ಸೋಶಲಿಸ್ಟ್ ಅಭ್ಯರ್ಥಿ ಜೋಸ್ಪನ್ ಎರಡನೇ ಸುತ್ತಿಗೆ ಹೋಗುತ್ತಾರೆ ಎಂದು 'ಭವಿಷ್ಯ' ನುಡಿದಿದ್ದವು ಎಂದಿನಂತೆ ಆದರೆ ಮೊದಲನೇ ಸುತ್ತಿನ ಫಲಿತಾಂಶ ಬಂದಾಗ ಅದೆಲ್ಲಾ ತಲೆಕೆಳಗಾಗಿತ್ತು. ಸೋಶಲಿಸ್ಟ್ ಜೋಸ್ಪನ್ ಬದಲು ಫ್ಯಾಸಿಸ್ಟ್ ಪರ ಒಲವು ಇರುವ ಲೆ-ಪೆನ್ ಅಭ್ಯರ್ಥಿ ಎರಡನೇ ಅತಿ ಹೆಚ್ಚು ಮತ ಪಡೆದ ಅಭ್ಯರ್ಥಿಯಾಗಿ ಹೊಮ್ಮಿದ್ದ. ಈ ಫಲಿತಾಂಶದಿಂದ ಫ್ರೆಂಚ್ ಜನ ಬೆಚ್ಚಿಬಿದ್ದರು. ನಾವು ಫ್ಯಾಸಿಸ್ಟ್ ಪರ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಮಾಡಲು ಹೋಗುತ್ತಿದ್ದೇವೆಯೇ? ಅಂತ ಅಷ್ಟು ಮಾತ್ರವಲ್ಲ ಈಗಿನ ಅಧ್ಯಕ್ಷ.

ಫ್ರೆಂಚ್ ಅಧ್ಯಕ್ಷೀಯ ಚುನಾವಣಾ ಪದ್ಧತಿ

ಫ್ರೆಂಚ್ ಅಧ್ಯಕ್ಷೀಯ ಚುನಾವಣಾ ಪದ್ಧತಿಯ ಪ್ರಕಾರ ಮೊದಲ ಸುತ್ತಿನಲ್ಲಿ ಯಾರು ಬೇಕಾದರೂ ಸ್ಪರ್ಧಿಸಬಹುದು. ಫ್ರಾನ್ಸ್‌ನ ನಗರ - ಪಟ್ಟಣಗಳ 36 ಸಾವಿರ ಮೇಯರ್‌ಗಳಲ್ಲಿ 500 ಮೇಯರುಗಳು ಅನುಮೋದಿಸಿದ ಯಾರು ಬೇಕಾದರೂ ಅಭ್ಯರ್ಥಿ ಯಾಗಬಹುದು. ಇದು ಹೊಸ ರಾಜಕೀಯ ಶಕ್ತಿಗಳಿಗೂ ಅವಕಾಶ ಕೊಡುತ್ತದೆ. ಮೊದಲ ಸುತ್ತಿನಲ್ಲಿ ಅತ್ಯಂತ ಹೆಚ್ಚು ಮತ್ತು ಎರಡನೇ ಅತಿ ಹೆಚ್ಚು ಮತ ಪಡೆದ ಅಭ್ಯರ್ಥಿಗಳು ಎರಡನೇ ಸುತ್ತಿಗೆ ಹೋಗುತ್ತಾರೆ. ಎಲ್ಲಾ ಅಭ್ಯರ್ಥಿಗಳಿಗೆ ಪುಕ್ಕಟೆ ಟಿ.ವಿ ಸಮಯ ಪ್ರಚಾರಕ್ಕೆ ದೊರೆಯುತ್ತದೆ. ಶೇಕಡಾ 5 ಮತಸಿಕ್ಕಿದರೆ ಎಲ್ಲಾ ಚುನಾವಣಾ ಖರ್ಚು ವಾಪಸು ಸಿಗುತ್ತದೆ. ಎರಡನೇ ಸುತ್ತಿನಲ್ಲಿ ಶೇಕಡಾ 50ಕ್ಕಿಂತ ಹೆಚ್ಚು ಮತ ಪಡೆದ ಅಭ್ಯರ್ಥಿ ಅಧ್ಯಕ್ಷನಾಗಿ ಆಯ್ಕೆಯಾಗುತ್ತಾರೆ.

ಚಿರಾಕ್ (ಮೊದಲ ಅಭ್ಯರ್ಥಿ) ಮತ್ತು ಫ್ಯಾಸಿಸ್ಟ್ ಲೆ-ಪೆನ್‌ಗೆ ಕೇವಲ ಶೇಕಡಾ 3 ಮತ ವ್ಯತ್ಯಾಸವಿತ್ತು. ಅಧ್ಯಕ್ಷ ಚಿರಾಕ್ ಶೇಕಡಾ 20 ಮತಗಳಿಸಿದ್ದರೆ (ಇದು ಅತ್ಯಂತ ಹೆಚ್ಚು ಮತ ಪಡೆದ ಅಭ್ಯರ್ಥಿಗೆ ಸಿಕ್ಕಿದ ಮತಗಳಲ್ಲೇ ಅತ್ಯಂತ ಕಡಿಮೆ ಮತ), ಲೆ-ಪೆನ್ ಶೇಕಡಾ 17 ಮತಗಳಿದ್ದರು. ಸೋಶಲಿಸ್ಟ್ ಅಭ್ಯರ್ಥಿ (ಮತ್ತು ಪ್ರಧಾನಿ) ಜೋಸ್ಪಿನ್ ಶೇಕಡಾ 16 ಗಳಿಸಿ ಮೂರನೇ ಸ್ಥಾನಕ್ಕೆ ಇಳಿದಿದ್ದರು.

'ಲೆ-ಪೆನ್ ಬೇಡ' ಭಾರಿ ಪ್ರದರ್ಶನಗಳು.

ಮೊದಲನೇ ಸುತ್ತಿನ ಫಲಿತಾಂಶ ಹೊರಬೀಳುತ್ತಿದ್ದಂತೆ ರಾಜಕೀಯ ಪ್ರಜ್ಞೆಯ ಫ್ರೆಂಚರು ಎಚ್ಚತ್ತರು. ಫ್ರಾನ್ಸ್ ಇತ್ತೀಚಿನ ವರ್ಷಗಳಲ್ಲಿ ಕಂಡು ಕೇಳರಿಯದ ಪ್ರಮಾಣದಲ್ಲಿ 'ಫ್ಯಾಸಿಸ್ಟ್ - ವಿರೋಧಿ' ಪ್ರದರ್ಶನಗಳು ನಡೆದವು. ಚುನಾವಣಾ ಫಲಿತಾಂಶ ಬಂದ 2-3 ದಿನಗಳಲ್ಲೇ ಫ್ರಾನ್ಸ್‌ನ ತುಂಬಾ ಇಂತಹ ಪ್ರದರ್ಶನಗಳಲ್ಲಿ ಒಂದು ಕೋಟಿಗೂ ಹೆಚ್ಚು ಜನ ಭಾಗವಹಿಸಿದ್ದರು. 'ಲೆ-ಪೆನ್‌ಹಿಟ್ಲರ್ ಬೇಡ' 'ಲೇಪೆನ್ ನಿಲ್ಲಿಸಿ' ನಾವು ಹಿಟ್ಲರನ ಜರ್ಮನಿಯಾಗಬೇಕ 'ನನಗೆ ಫ್ರೆಂಚ್ ಅನ್ನಿಸಿಕೊಳ್ಳಲು ನಾಚಿಕೆಯಾಗುತ್ತದೆ' ಇವೆಲ್ಲಾ ಈ ಪ್ರದರ್ಶನಗಳಲ್ಲಿ ಕಂಡು ಕೇಳಿಬಂದ ಸ್ಲೋಗನ್‌ಗಳು. ಈ ಪ್ರದರ್ಶನಗಳಲ್ಲಿ ವಿದ್ಯಾರ್ಥಿಗಳು, ಯುವಜನರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. ಲೆ-ಪೆನ್ ಅಧ್ಯಕ್ಷರಾಗಿ ಆಯ್ಕೆಯಾಗುವ (ಎರಡನೇ ಸುತ್ತಿನಲ್ಲಿ) ಸಂದರ್ಭ ಬರಬಾರದು ಎಂದು ಸೋಶಲಿಸ್ಟ್, ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಎಡ- ಪ್ರಗತಿಪರ ರಾಜಕೀಯ ಶಕ್ತಿಗಳು ದೃಢ ನಿರ್ಧಾರ ಕೈಗೊಂಡವು. ಈ ಎಚ್ಚರಿಕೆಯಿಂದ

ಆಯ್ಕೆಯಾದರು. ಲೆ-ಪೆನ್ ಎರಡನೇ ಸುತ್ತಿನಲ್ಲಿ ಶೇಕಡಾ 1-2 ರಷ್ಟು ಮತ ಮಾತ್ರ ಹೆಚ್ಚು ಗಳಿಸಲು ಸಾಧ್ಯವಾಯಿತು.

ಯಾರೀತ ಲೆ-ಪೆನ್?

ಇಷ್ಟು ವ್ಯಾಪಕ ವಿರೋಧ ಕಟ್ಟಿಕೊಂಡಿರುವ ಲೆ-ಪೆನ್ ಯಾರೀತ? ಈತ ಎರಡನೇ ಸುತ್ತಿಗೆ ಹೋದಕೂಡಲೇ, ಯಾಕೆ ಫ್ರಾನ್ಸ್ ನಡುಗಹತ್ತಿತು? ಇದಕ್ಕೆ ಕಾರಣ ಲೆ-ಪೆನ್‌ರ ಪಕ್ಷ ಫ್ಯಾಸಿಸ್ಟ್-ಧೋರಣೆ ಇರುವ ಪ್ರಚಾರ ಮಾಡುವ ಪಕ್ಷ. ಲೆ-ಪೆನ್ ಹಿಟ್ಲರ್ 'ಗ್ಯಾಸ್ ಕೋಣೆಗಳಲ್ಲಿ ಜ್ಯೂಗಳನ್ನು ನರಮೇಧ ಮಾಡಿದ್ದು ತಲೆಕೆಡಿಸಿಕೊಳ್ಳ ಬೇಕಿಲ್ಲದ' ಚರಿತ್ರೆಯ ವಿವರ' ಎಂದಿದ್ದ ಭೂಪ ಮೊದಲಿಂದಲೂ ಫ್ರಾನ್ಸ್ ಫ್ರೆಂಚರಿಗೆ ಫ್ರಾನ್ಸಿನಲ್ಲಿರುವ ಮುಸ್ಲಿಮರನ್ನು, ಕರಿಯರನ್ನು ಇತರ ವಿದೇಶಿಯರನ್ನು ಹೊರಗೆ ಕಳಿಸುವುದು ಫ್ರಾನ್ಸ್‌ನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಎಂದು ಫ್ರೆಂಚರನ್ನು ನಂಬಿಸಲು ಪ್ರಯತ್ನಿಸಿದವ, ಫ್ರಾನ್ಸ್



ಯುರೋಪಿಯನ್ ಒಕ್ಕೂಟದಿಂದ ಹೊರ ಬರಬೇಕು. ಎಂದೆಲ್ಲಾ ಹೇಳುವ ವ್ಯಕ್ತಿ. ನಿರುದ್ಯೋಗಿಗಳಿಗೆ ಎಲ್ಲಾ ವಿದೇಶಿಯರನ್ನು ಹೊರ ಗಟ್ಟೋಣ ಬನ್ನಿ ಎಂದು ಹುರಿದುಂಬಿಸುವನು. ಸೌದಿ ಅರೇಬಿಯಾದಲ್ಲಿ ಒಂದು ಚರ್ಚ್ ಕಟ್ಟುವವರೆಗೆ, ಫ್ರಾನ್ಸ್‌ನಲ್ಲಿ ಮಸೀದಿಗಳನ್ನು ಕಟ್ಟಲು ಬಿಡಬಾರದು. ಹಿಟ್ಲರ್ ಜ್ಯೂಗಳಿಗೆ ಮಾಡಿದ್ದ 'ಶಾಸ್ತಿ' ಸರಿ ಎನ್ನುವ ಅದೇ ಉಸಿರಲ್ಲಿ ಮುಸ್ಲಿಮರು ಫ್ರಾನ್ಸ್‌ನಲ್ಲಿ ಜಾಸ್ತಿಯಾದ್ದರಿಂದ 'ಭಯೋತ್ಪಾದನೆ' ಜಾಸ್ತಿಯಾಗಿದೆ ಎನ್ನುವವ.

ಲೆ-ಪೆನ್ ಎರಡನೇ ಸುತ್ತಿಗೆ ಹೇಗೆ ಬಂದ?

ಈ ಪ್ರಶ್ನೆಗೆ ಹಲವರು ಹಲವು ಬಗೆಯಲ್ಲಿ ಉತ್ತರ ನೀಡಿದ್ದಾರೆ. ಇದಕ್ಕೆ ಉತ್ತರ ಹುಡುಕುವ ಮೊದಲು ಚುನಾವಣಾ ಫಲಿತಾಂಶಗಳತ್ತ ಗಮನ ಹರಿಸುವುದು ಒಳ್ಳೆಯದು. ಮೊದಲ ಸುತ್ತಿನಲ್ಲಿ ಚಿರಾಕ್ (ಶೇಕಡಾ 20) ಲೆ-ಪೆನ್ (ಶೇಕಡಾ 17), ಜೋಸ್ಪಿನ್ (ಶೇಕಡಾ 16) ಗ್ರೀನ್ಸ್ ಪಕ್ಷ (ಶೇಕಡಾ 5) ಮೂರು ಟ್ರಾಟ್‌ಸ್ಕಿವಾದಿ ಪಕ್ಷಗಳು (ಶೇಕಡಾ 10) ಕಮ್ಯುನಿಸ್ಟ್ ಪಕ್ಷ (ಶೇಕಡಾ 3) ಇನ್ನೊಂದು ಅಂಕಿ ಸಂಖ್ಯೆ ಸಹ ಈ ಫಲಿತಾಂಶದ ಮೇಲೆ ಪ್ರಭಾವ ಬೀರಿತ್ತು. ಫ್ರಾನ್ಸ್‌ನ ಇತ್ತೀಚಿನ ಚರಿತ್ರೆಯಲ್ಲೇ ಅತ್ಯಂತ ಕಡಿಮೆ ಮತದಾನವಾಗಿತ್ತು

ಕಾರಣವಾಗಿತ್ತು. ಹಿಂದಿನ ಸರ್ಕಾರ ಅನುಸರಿಸುತ್ತಾ ಬಂದ ಜಾಗತೀಕರಣ - ಪರ ನೀತಿಗಳು, ವಿರುತ್ತಿರುವ ಕೈಗಾರಿಕೆಗಳ ನಾಶ ಮತ್ತು ನಿರುದ್ಯೋಗಗಳ ವಿರುದ್ಧ ಫ್ರೆಂಚ್ ನಾಗರೀಕರು ಕುದಿಯುತ್ತಿದ್ದರು. ಈ ನೀತಿಗಳ ಬಗ್ಗೆ ಪ್ರತಿಭಟನೆ ತೋರಿಸಲು ಕಾತುರರಾಗಿದ್ದರು. ದೊಡ್ಡ ಪ್ರಮಾಣದ ಜನ (ಶೇಕಡಾ 28) ಇಂತಹ ದೀವಾಳಿಕೋರ ನೀತಿಗಳ ಬಗ್ಗೆ 'ಸಹಮತ' ಇರುವ ಬಹುಪಾಲು ಪಕ್ಷಗಳಿರುವ ಚುನಾವಣೆಗಳಲ್ಲಿ ಮತ ಹಾಕುವುದು ವ್ಯರ್ಥ ಎಂದು ಭಾವಿಸಿದ್ದರು. ಎರಡನೇ ಸುತ್ತಿಗೆ ಹೋಗುವ ಅವಕಾಶ ಇರುವ ಚಿರಾಕ್ ಮತ್ತು ಜೋಸ್ಪಿನ್ ಇಬ್ಬರ ಆರ್ಥಿಕ ನೀತಿಗಳು ಜನತೆಯ ಸಂಕಷ್ಟಗಳ ಮೇಲೆ ಸಾಮ್ರಾಜ್ಯಶಾಹಿ ಜಾಗತೀಕರಣದ್ದಾಗಿತ್ತು. ಆದ್ದರಿಂದ ರೋಸಿದ ಫ್ರೆಂಚ್ ಮತದಾರನ ದೊಡ್ಡ ವಿಭಾಗ ಇತರ ಅಭ್ಯರ್ಥಿಗಳಿಗೆ ಮತ ಹಾಕಿತು. ಮೊದಲ ಎರಡು ಸ್ಥಾನಗಳಿಸಿದ ಅಭ್ಯರ್ಥಿಗಳು ಒಟ್ಟು ಶೇಕಡಾ 50ಕ್ಕಿಂತಲೂ ಕಡಿಮೆ ಗಳಿಸಿದ್ದೂ ಮತ್ತು ಇಷ್ಟು ಕಡಿಮೆ ಮತಗಳಿಸಿದ್ದು ಇದೇ ಮೊದಲು.

ಇತರ ಅಭ್ಯರ್ಥಿಗಳು ಇಷ್ಟು ಮತಗಳಿಸಿದ್ದು ಇದೇ ಮೊದಲು. ಮೊದಲಸುತ್ತಿನ ಕಣದಲ್ಲಿದ್ದ ಅಭ್ಯರ್ಥಿಗಳ ಸಂಖ್ಯೆ ಸಹ ಈ ಬಾರಿ ಅತಿ ಹೆಚ್ಚು, ಒಟ್ಟು 16 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಹಲವು ಎಡ ಅಭ್ಯರ್ಥಿಗಳ ನಡುವೆ ಮತ ಹರಿಹಂಚಿಹೋದದ್ದು ಲೆ-ಪೆನ್‌ಗೆ ಅನುಕೂಲ ವಾಯಿತು. ಎಲ್ಲಾ ಎಡ ಅಭ್ಯರ್ಥಿಗಳ ಮತ ಒಟ್ಟು ಹಾಕಿದರೆ ಅದು ಚಿರಾಕ್, ಲೆಪೆನ್ ಇಬ್ಬರದ್ದಕ್ಕಿಂತಲೂ ಹೆಚ್ಚಾಗಿತ್ತು. ಒಟ್ಟು ಸುಮಾರು ಶೇಕಡಾ 35 (ಸೋಸಲಿಸ್ಟ್ ಶೇ 17, ಕಮ್ಯುನಿಸ್ಟ್ ಶೇ. 3, ಗ್ರಿವ್ ಶೇ. 5, ಟ್ರಾಟ್‌ಸ್ಕಿವಾದಿ ಮೂರು ಅಭ್ಯರ್ಥಿಗಳು ಶೇ.10) ಎಡ ಐಕ್ಯತೆ ಮತ್ತು ಒಟ್ಟಾರೆ ಜಾಗತೀಕರಣದ ವಿರುದ್ಧ 'ಎಡ ಕಾರ್ಯಕ್ರಮ ಜನತೆಯ ಮುಂದಿಡಲು ಸಾಧ್ಯವಾಗದ್ದು ಲೆ-ಪೆನ್‌ಗೆ ಅನುಕೂಲಕರವಾಯಿತು.

ಸೋಶಲಿಸ್ಟ್ ಜೊಸೆಫಿನ್‌ರು ಎಂದಿನಂತೆ ವಿರೋಧ ಪಕ್ಷದಲ್ಲಿದ್ದಾಗ 'ಸೋಶಲಿಸ್ಟ' ಸರ್ಕಾರ ದಲ್ಲಿದ್ದಾಗ 'ಕ್ಯಾಪಿಟಲಿಸ್ಟ್' ನೀತಿ ಅನುಸರಿಸಿದರು. ಯುಗೋಸ್ಲಾವಿಯಾದ ಮೇಲೆ ಅಮೇರಿಕನ್ ಯುದ್ಧಕ್ಕೆ ಬೆಂಬಲ, ಅಫಘಾನಿಸ್ತಾನದ ಮೇಲೆ ಯುದ್ಧಕ್ಕೆ ಬೆಷರತ್ ಬೆಂಬಲ, ಮೂರನೇ ಜಗತ್ತಿಗೆ ಬೆಳುವಣಿಗೆ ನಿಧಿಗೆ ಭಾರಿಕಡಿತ ಅಮೆರಿಕದ ಎಲ್ಲಾ ಸಮ್ರಾಜ್ಯಸಾಹಿ ಹುನ್ನಾರಗಳಿಗೆ ಬೆಂಬಲ-ಇವೆಲ್ಲಾ ಜನಮಾನಸದಲ್ಲಿ 'ಎಡ ಬದಲಿ' ಇದೆ ಎಂಬ ಬಾವನೆ ಮೂಡಿಸಲಿಲ್ಲ. ಮಾತ್ರವಲ್ಲ ಇದು ಸೋಶಲಿಸ್ಟ್ ಸರ್ಕಾರದಲ್ಲಿ ಭಾಗವಹಿಸಿದ ಇತರ ಎಡಪಕ್ಷಗಳಿಗೆ ಮುಳುವಾಯಿತು. ಅತ್ಯಂತ ಹೆಚ್ಚು ಹೊಡೆತ ತಿಂದಿದ್ದು ಫ್ರೆಂಚ್ ಕಮ್ಯುನಿಸ್ಟ್ ಪಕ್ಷ, ಅದರ ಮತ ಶೇಕಡಾ 3ಕ್ಕೆ ಕುಸಿಯಿತು. ಇದರ ಲಾಭ ಹೊಸ ಎಡಪಕ್ಷಗಳಾದ ಟ್ರಾಟ್‌ಸ್ಕಿವಾದಿ ಪಕ್ಷಗಳಿಗೆ ಆಯಿತು. ಅದರಲ್ಲೂ ಆ ಮತ ಮೂರು

ಎಡರಂಗ (ಸೋಶಲಿಸ್ಟ್, ಕಮ್ಯುನಿಸ್ಟ್, ಗ್ರೀನ್ಸ್) ಸರ್ಕಾರದಲ್ಲಾಗಲಿ, ಮುಂದಿನ ಚುನಾವಣಾ ಕಾರ್ಯಕ್ರಮದಲ್ಲಾಗಲಿ ಯಾವುದೇ ಹೊಸ ಎಡ ಕಾರ್ಯಕ್ರಮ ಹಾಕಲು ವಿಫಲವಾಗಿದ್ದು ಈ ರೀತಿಯ ಫಲಿತಾಂಶಕ್ಕೆ ಮುಖ್ಯ ಕಾರಣ. ಸೆಪ್ಟೆಂಬರ್ 11ರ ಭಯೋತ್ಪಾದಕ ಕೃತ್ಯದ ನಂತರ ಬಲಪಂಥೀಯ ಶಕ್ತಿಗಳ 'ಭಯೋತ್ಪಾದನೆ' ವಲಸೆ ಮತ್ತು ಅಪರಾಧಗಳ ಬಗ್ಗೆ ಹೆಚ್ಚು ಒತ್ತು ಕೊಡುತ್ತಾ ಪ್ರಚಾರ ಮಾಡುತ್ತಾ ಬಂದಿವೆ. ಇವು ಜನರ ದೈನಂದಿನ ಸಮಸ್ಯೆಗಳಿಗಿಂತ ಹೆಚ್ಚು ಭೀಕರವಾದದ್ದು ಎಂದೆಲ್ಲಾ ಬಿಂಬಿಸಿ ಎಡ ಬದಲಿಯ ಅಭಾವದಲ್ಲಿ ಜನರ ಒಪ್ಪಿಗೆ ಪಡೆಯಲಾರಂಭಿಸಿವೆ. ಕಾರ್ಮಿಕ ವರ್ಗದ ದೊಡ್ಡ ವಿಭಾಗ, ನಿರುದ್ಯೋಗಗಳ ಸೈನ್ಯ ಸೇರುತ್ತಿರುವುದು, ಯುವಜನರಲ್ಲಿ ವ್ಯಾಪಕ ನಿರುದ್ಯೋಗ ಕಾರ್ಮಿಕ ವರ್ಗದಲ್ಲಿ ಎಡ ನೆಲೆ ಕ್ಷೀಣವಾಗಲು ಕಾರಣವಾಗಿದೆ.

ಇವು ಯಾವುದೂ ಬರಿ ಫ್ರಾನ್ಸ್‌ಗೆ ಸೀಮಿತವಾದ ಬೆಳವಣಿಗೆ ಅಲ್ಲ ಎಂಬುದು ಇನ್ನಷ್ಟು ಆತಂಕಕಾರಿ. ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ದೇಶಗಳಲ್ಲಿ ಸೋಶಲಿಸ್ಟ್ ನಾಯಕತ್ವದ ಎಡ ಮಧ್ಯಮ ಪಂಥೀಯ ಸರ್ಕಾರಗಳು ಅಧಿಕಾರಕ್ಕೆ ಬಂದಿದ್ದವು. ಅವುಗಳ



ಜಾಗ್ರತೀಕರಣ ಪರ ನೀತಿಗಳ ವಿರುದ್ಧ ಆಕ್ರೋಶವನ್ನು ಬಳಸಿ ಬಲಪಂಥೀಯ ಅದರಲ್ಲೂ ತೀವ್ರ ಬಲಪಂಥೀಯ ಪಕ್ಷಗಳು ಬಲಗೊಂಡಿವೆ. ಹಲವು ದೇಶಗಳಲ್ಲಿ ಅಧಿಕಾರಕ್ಕೆ ಬಂದಿವೆ. ಆಸ್ಟ್ರೀಯಾ, ಡೆನ್ಮಾರ್ಕ್, ಸ್ವೀಡನ್, ಪೋರ್ಚುಗಲ್ ಗಳಲ್ಲಿ ಈಗಾಗಲೇ ಬಲಪಂಥೀಯ ಅಥವಾ ಫ್ಯಾಸಿಸ್ಟ್ ಪರ ಪಕ್ಷಗಳ ಅಧಿಕಾರಕ್ಕೆ ಬಂದಿವೆ. ಜರ್ಮನಿ ಹಾಲೆಂಡ್ ಐರ್ಲೆಂಡ್‌ಗಳಲ್ಲೂ ಇದೇ ರೀತಿಯ ಬೆಳವಣಿಗೆ ಕಂಡುಬಂದಿದೆ.

ಈ ಕಹಿ ಬೆಳವಣಿಗೆಗಳ ಕಾರ್ಮೋಡಗಳ ನಡುವೆ ಹೊಂಗಿರಣವೆಂದರೆ ಎಚ್ಚತ್ತ ರಾಜಕೀಯ ಪ್ರಜ್ಞೆ ಉಳ್ಳ ಫ್ರೆಂಚ್ ಜನತೆಯ ಪ್ರದರ್ಶನಗಳು, ಎರಡನೇ ಸುತ್ತಿನ ಮತದಾನದಲ್ಲಿ ಫ್ಯಾಸಿಸ್ಟ್ ಶಕ್ತಿಗಳಿಗೆ ಪರಾಭವ, ಜೂನ್‌ನ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ 'ಎಡ ಬದಲಿ' ರೂಪಿಸುವತ್ತ ಬೆಳವಣಿಗೆಗಳು.


ಹೆಜ್ಜೆ ಹೆಜ್ಜೆಗೂ ಸಂಘರ್ಷ

ಜಗದೆಲ್ಲೆಡೆ ಅರಳಿದ ಮೇ ಕೆಂಪು ದಿನ

ಮೇ ದಿನ 2002 ಈ ವರ್ಷದ ಮೇದಿನ ಎಡ ಪ್ರಜಾಸತ್ತಾತ್ಮಕ ರಾಜಕೀಯ ಶಕ್ತಿಗಳು ಜೀವಂತವಾಗಿವೆ. ಮುನ್ನಡೆ ಸಾಧಿಸುತ್ತಿವೆ. ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ವ್ಯಾಪಕ ಪ್ರತಿರೋಧ ಬಟ್ಟಲು, ಚಳುವಳಿಯನ್ನು ಮುದಿನ ಪ್ರಬುದ್ಧ ಹಂತಕ್ಕೆ ಕೊಂಡೊಯ್ಯಲು ಸಿದ್ದವಾಗುತ್ತಿವೆ. ಫ್ರಾನ್ಸ್‌ನಲ್ಲಿ ಫ್ಯಾಸಿಸ್ಟ್ ಅಭ್ಯರ್ಥಿ ಮೊದಲ ಸುತ್ತಿನಲ್ಲಿ ಗೆದ್ದ ಹಿನ್ನೆಲೆಯಲ್ಲಿ ನಡೆದ ಮೇ ದಿನದಲ್ಲಿ ಯುರೋಪಿನಾದ್ಯಂತ ಫ್ಯಾಸಿಸ್ಟ್ ಸೋಲಿನ ಬಗ್ಗೆ ಹೆಚ್ಚಿನ ಎಚ್ಚರ ಕಂಡುಬಂತು. ಫ್ರಾನ್ಸ್‌ನಲ್ಲಂತೂ ಫ್ಯಾಸಿಸ್ಟ್ ಶಕ್ತಿ ಹೆಚ್ಚಿಲ್ಲ. ಫ್ಯಾಸಿಸ್ಟ್‌ರನ್ನು ಹಿಮ್ಮೆಟ್ಟಿಸುವ ಛಲ ಕಂಡುಬಂತು. ಈ ಕಾರಣದಿಂದ ಯುರೋಪಿನಾದ್ಯಂತ ಇತ್ತೀಚಿನ ವರ್ಷಗಳಲ್ಲೇ ಅತಿ ದೊಡ್ಡ ಪ್ರದರ್ಶನಗಳು ಕಂಡು ಬಂದವು ಹಲವುಕಡೆ ಪೋಲೀಸರ ಆಕ್ರಮಕ ಧೋರಣೆಯಿಂದಾಗಿ ಹಿಂಸಾಚಾರ ನಡೆಯಿತು. ಭಯೋತ್ಪಾದನೆ, ಅಪರಾಧದ ವಿರುದ್ಧ ಹೋರಾಟದ ನೆಪದಲ್ಲಿ ಸಾಮ್ರಾಜ್ಯಶಾಹಿ ನಡೆಸುತ್ತಿರುವ ಹುನ್ನಾರಗಳ ಬಗ್ಗೆ ಈ ಬಾರಿಯ ಮೇ ದಿನದ ಕಾರ್ಮಿಕ ವರ್ಗದ ಪ್ರದರ್ಶನಗಳಲ್ಲಿ ಹೆಚ್ಚಿನ ಎಚ್ಚರ ಕಂಡು ಬಂತು. ಕ್ಯೂಬಾದಲ್ಲಿ ಹತ್ತುಲಕ್ಷ ಭಾಗವಹಿಸಿದ ಭಾರಿ ರ್‍ಯಾಲಿ ಕಂಡು ಬಂತು.



ಮೇ ದಿನ ರ್‍ಯಾಲಿಯಲ್ಲಿ ಕ್ಯಾಸ್ಟ್ರೋ



ಕ್ಯೂಬಾದ ಕ್ರಾಂತಿ ಪ್ಲಾಜಾ ದಲ್ಲಿ ಫಿಡೆಲ್ ಕ್ಯಾಸ್ಟ್ರೋರ ಭಾಷಣ ಕೇಳಲು ಹತ್ತು ಲಕ್ಷ ಜನ ಸೇರಿದ್ದರು.



ಫ್ರಾನ್ಸ್‌ನಲ್ಲಿ ಒಂದು ಕೋಟಿಗೂ ಹೆಚ್ಚು ಜನ ಮೇ ದಿನ ಪ್ರದರ್ಶನವನ್ನು ಫ್ಯಾಸಿಸ್ಟ್ ವಿರೋದಿ ಪ್ರದರ್ಶನವನ್ನಾಗಿಸಿದರು.



ಮಾಸ್ಕೋದಲ್ಲಿ....



ಬಾಂಗ್ಲಾದೇಶದಲ್ಲಿ ಭಾರಿ ಮೆರವಣಗೆ-ಪ್ರದರ್ಶನ ನಡೆಯಿತು



ರಶ್ಯಾದ ಪ್ರಸಿದ್ಧ ಕೆಂಪು ಚೌಕದಲ್ಲಿ ಒಂದುವರೆ ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಮೇ ದಿನದ ಪ್ರದರ್ಶನ ನಡೆಸಿದರು.




ಬರ್ಲಿನ್‌ನಲ್ಲಿ ಫ್ಯಾಸಿಸ್ಟ್ - ಪ್ರದರ್ಶಕಾರರಿಗೂ ಪೊಲೀಸರಿಗೂ ಬೀದಿ ಕಾಳಗ ನಡೆಯಿತು.

ಮನರಂಜನೆಯೋ ಮನೆ ಮುರುಕತನವೋ

ಲವ್ವು ಲವ್ವು ಎಂದು ಪ್ರೇಮ ಪಿಶಾಚಿಗಳೊಂದಿಗೆ ಋಷಿ ವೇಷ ಧಾರಿಗಳು ಈಗ ಭಜರಂಗಿಗಳ ಭಾಷಣ ಆರಂಭಿಸಿದ್ದಾರೆ. ಗುಜರಾತ್ ಹತ್ಯಾಕಾಂಡ ಸಮರ್ಥಿಸಲು ಮಾಧ್ಯಮ - ಮನರಂಜನೆ - ಯಾವುದಾದರೇನು ಈ ಪರಿವಾರಕ್ಕೆ

ದೂರದರ್ಶನದಲ್ಲಿನ ಧಾರವಾಹಿಗಳನ್ನು ವೀಕ್ಷಿಸುವುದು ಮನರಂಜನೆಗಾಗಿ. ಇಂತಹ ಮನರಂಜನೆ ನೀಡುವ ಹೆಸರಿನಲ್ಲಿ ಮನೆಮುರುಕ ಕೆಲಸ ಆರಂಭಿಸಿರುವ ಧಾರವಾಹಿ ಉದಯ ಟಿವಿಯಲ್ಲಿ ಪ್ರಸಾರವಾಗುತ್ತಿರುವ ಪ್ರೇಮ ಪಿಶಾಚಿಗಳು.



ಪಣಿರಾಮಚಂದ್ರ

ಇದೇ ಮೇ 7ರಂದು ಈ ಧಾರವಾಹಿಯನ್ನು ವೀಕ್ಷಿಸುತಿದ್ದಾಗ ಋಷಿವೇಷ ತೊಟ್ಟಿದ್ದ ನಟನಿಂದ ಉಳಿದವರಿಗೆ ಉಪದೇಶ ನೀಡಲಾಗುತ್ತಿತ್ತು. ಅವುಗಳೆಂದರೆ "ನಾವು ನಮ್ಮ ಸಂಸ್ಕೃತಿಯನ್ನು ರಕ್ಷಿಸಬೇಕು, ನಮ್ಮದು ಉತ್ತಮ ಪರಂಪರೆ, ಆದರೆ ಇತರ ಧರ್ಮಿಯರಿಂದಾಗಿ ನಮ್ಮ ಸಂಸ್ಕೃತಿ ಹಾಳಾಗುತ್ತಿದೆ, ಅವರಿಗಾಗಿ ಎರಡು ಪ್ರತ್ಯೇಕ ರಾಷ್ಟ್ರಗಳನ್ನು ನೀಡಿದ್ದರೂ ಅವರು ಅಲ್ಲಿಗೆ ಹೋಗದೆ ಇಲ್ಲೇ ಉಳಿದುಕೊಂಡಿದ್ದಾರೆ. ನಮ್ಮ ಧರ್ಮವನ್ನು ಅವರು ಒಪ್ಪುತ್ತಿಲ್ಲ, ಬೇಕಾದಷ್ಟು ಜನರನ್ನು ಮದುವೆಯಾಗುತ್ತಾರೆ. ಇವರು ಹೀಗಾದರೆ ಮತ್ತೊಂದು ಧರ್ಮದವರು ಸೇವೆಯ ಹೆಸರಿನಲ್ಲಿ ನಮಗೆ ಮೋಸ ಮಾಡುತ್ತಿದ್ದಾರೆ". ಹೀಗೆಂದೆ ಮಾನ್ಯ ಋಷಿಗಳ ಬಾಯಿಂದ ಬೀಳುವ ಅಮೃತವಾಣಿ. ಇಲ್ಲಿ ಎರಡು ಧರ್ಮಗಳ ಅವಹೇಳನ ಎದ್ದು ಕಾಣುತ್ತದೆ. ಗೋದ್ರಾ ಹಾಗೂ ನಂತರದ ಗುಜರಾತ್‌ನ ನರಮೇದದಿಂದಾಗಿ ಇಡೀ ದೇಶ ತತ್ತರಿಸಿದೆ. ಇಂತಹ ಸಂದರ್ಭದಲ್ಲಿ ಜನರ ನಡುವೆ ಸಾಮರಸ್ಯ ಬೆಸೆಯುವ ಸಂದೇಶ ನೀಡುವ ಬದಲು ಮನಸ್ಸುಗಳನ್ನು ಒಡೆಯುವ ಕೆಲಸವನ್ನು ಈ ಧಾರವಾಹಿಗಳ ಮೂಲಕ ಮಾಡಲಾಗುತ್ತಿದೆ. ಒಬ್ಬ ನಿರ್ದೇಶಕನಿಗೆ ಹಾಗೂ ಕಲಾವಿದನಿಗೆ ಸಾಮಾಜಿಕ ಕಾಳಜಿ ಇರಬೇಕಾದುದು ಬಹಳ ಮುಖ್ಯ. ಎರಡು ಮನೆಗಳು ಹತ್ತಿ ಉರಿಯುವಾಗ ನಡುವೆ ಪಾತ್ರೆ ಇರಿಸಿ ಅನ್ನಬೇಯಿಸಿಕೊಳ್ಳುವ ಕೆಲಸವನ್ನು ಪಣಿ ರಾಮಚಂದ್ರ ಎಂಬ ನಿರ್ದೇಶಕ ಮಾಡುತ್ತಿರುವುದು ಖಂಡನೀಯ. ಇಂತಹ ಕೆಟ್ಟ ಸಂಗತಿಗಳನ್ನು ಪ್ರಸಾರಿಸುವ ಉದಯ ಟಿವಿಯ ವ್ಯವಸ್ಥಾಪಕರೂ ಖಂಡನಾರ್ಹರು. ಜನರು ಇಂತಹ ಸಂಕುಚಿತ ಹಾಗೂ ಮನೆಮುರುಕ ಜನರನ್ನು ದೂರ ಇಡಲೇಬೇಕು.

- ಈ. ಬಸವರಾಜು.

PRBDECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್